# ಲಿಂಗಾಯತರು“ಲಿಂಗವಂತ”ರು



# ಲಿಂಗಾಯತರು "**ಲಿಂಗವಂತ**"ರು


ಸಂಪಾದಕರು

ಶಿವಶಂಕರ ಚರಾಲ

M. Sc. M.Phil


**www.lingayatreligion.com**

**Lingayataru Lingavantaru:** Collection of Vachanas by Shivshanker Cheral, which contains the word "Lingavanta", "Lingayatra". All the vachanas are taken from the books "Samagra Vachana Sahithya" 15-volumns which are published by Department of Kannada and Cultural, Govt of Karnataka.

**ಲಿಂಗಾಯತರು ಲಿಂಗವಂತರು:** ವಚನಗಳ ಸಂಗ್ರಹಕಾರರು ಶಿವಶಂಕರ ಚರಾಲ, ವಚನಗಳಲ್ಲಿ "**ಲಿಂಗವಂತ**" ಅಥವಾ "**ಲಿಂಗಾಯತ**" ಪದವಿರುವ ವಚನಗಳ ಸಂಗ್ರಹ. ಎಲ್ಲಾ ವಚನಗಳನ್ನು ಕರ್ನಾಟಕ ಸರಕಾರದ ಸಮಗ್ರ ವಚನ ಸಾಹಿತ್ಯ ವಚನ ಸಂಪುಟಗಳಿಂದ ಆಯ್ದು ಕೊಳ್ಳಲಾಗಿದೆ (15 ವಚನ ಸಂಪುಟಗಳು ಪ್ರ: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು).

© Author

First Published: Aug 2017

Revised Publication: Dec 2021.

# CONTENTS


1. ಗುರು ಬಸವಣ್ಣ (Guru Basavanna) ... 6
2. ಅಮುಗೆ ರಾಯಮ್ಮ ... 7
3. ಅಕ್ಕಮ್ಮ ... 8
4. ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿ ... 9
5. ಅಲ್ಲಮಪ್ರಭುದೇವರು ... 9
6. ಅಂಬಿಗರ ಚೌಡಯ್ಯ ... 11
7. ಅವಸರದ ರೇಕಣ್ಣ ... 11
8. ಚೆನ್ನಬಸವಣ್ಣ ... 12
9. ಗಜೇಶ ಮಸಣಯ್ಯ ... 20
10. ಹೊಡೆಹುಲ್ಲ ಬಂಕಣ್ಣ ... 20
11. ಮಡಿವಾಳ ಮಾಚಿದೇವ ... 20
12. ಮನುಮುನಿ ಗುಮ್ಮಟದೇವ ... 22
13. ಮರುಳಶಂಕರದೇವ ... 22
14. ಮೋಳಿಗೆ ಮಾರಯ್ಯ ... 25
15. ನಿಜಗುರು ನಿರಾಲಂಬಪ್ರಭುವೆ ... 26
16. ಸಕಲೇಶ ಮಾದರಸ ... 26
17. ಸಿದ್ಧರಾಮೇಶ್ವರ ... 27
18. ಉರಿಲಿಂಗಪೆದ್ದಿ ... 27
19. ಅಕ್ಕಮ್ಮ ... 46
20. ಏಲೇಶ್ವರ ಕೇತಯ್ಯ ... 47
21. ಮೂರುಸಾವಿರ ಮುಕ್ತಿಮುನಿ ... 47
22. ಸಂಗನಬಸವೇಶ್ವರದೇವರು ... 49

- ಬಸವೋತ್ತರ ಯುಗ (೧೨ನೇ ಶತಮಾನದ ನಂತರದ ಶರಣರು) ... 55

1. ಷಣ್ಮುಖಸ್ವಾಮಿ ... 55
2. ಕಾಡಸಿದ್ಧೇಶ್ವರ ... 55
3. ಹೇಮಗಲ್ಲ ಹಂಪ (Hemagalla Hampa) ... 56
4. ಮೂರುಸಾವಿರ ಮುಕ್ತಿಮುನಿ ... 57
5. ಮುಮ್ಮಡಿ ಕಾರ್ಯೇಂದ್ರ -ಮುಮ್ಮಡಿ ಕಾರ್ಯ ಕ್ಷಿತೀಂದ್ರ ... 57
6. ದೇಶಿಕೆಂದ್ರ ಸಂಗನಬಸವಯ್ಯ ... 58
7. ಗುರು ಸಿದ್ಧ ದೇವ ... 59


Downloaded from: **www.lingayatreligion.com** 

೧೨ ನೇ ಶತಮಾನದಲ್ಲಿ ಗುರು ಬಸವಣ್ಣನವರು ಹಾಗೂ ಇತರ ಶರಣರು ಸೇರಿ ಅಪೂರ್ವ ಕ್ರಾಂತಿಯನ್ನು ಮಾಡಿದರು. ಗಂಡು-ಹೆಣ್ಣು ಎಂಬ ಲಿಂಗಭೇದ, ಬಡವ-ಶ್ರೀಮಂತ ಎಂಬ ವರ್ಗಭೇದ, ಸಂಸಾರಿ-ಸನ್ಯಾಸಿ ಎಂಬ ಆಶ್ರಮಭೇದ, ವರ್ಣಪದ್ಧತಿಯ ಶ್ರೇಣಿಕೃತ ವ್ಯವಸ್ಥೆ ಹಾಗೂ ಜಾತಿ ಪದ್ಧತಿಯ ಅಸಮಾನತೆಯ ವಿರುದ್ಧ ಹೋರಾಡಿ ಸಮಾನತೆಯ ತಳಹದಿಯ ಮೇಲೆ ಲಿಂಗಾಯತ ಧರ್ಮ ಸ್ಥಾಪಿಸಿದರು. ಬಸವಣ್ಣನವರು ತಮ್ಮ ಸ್ವಂತ ವೈಚಾರಿಕ ಆಲೋಚನೆಗಳಿಂದ ಲಿಂಗಾಯತ ಧರ್ಮಕ್ಕೆ ನಾಂದಿ ಹಾಡಿದರು.

ಬಸವಣ್ಣನವರು ಕಟ್ಟಿದ್ದು ಸ್ವತಂತ್ರ ಧರ್ಮವೇ ಹೊರತು ಜಾತಿಯಲ್ಲ ಎಂದು ವಚನಗಳಿಂದ ಸ್ಪಷ್ಟವಾಗುತ್ತದೆ. ಜಾತಿ ಹುಟ್ಟಿನಿಂದ ಬರುತ್ತದೆ ಹಾಗೂ ಸಂಕುಚಿತ ಮನೋಭಾವದಿಂದ ಕೂಡಿರುತ್ತದೆ. ಆದರೆ ಧರ್ಮವು ಆಚರಣೆಯಿಂದ ಬರುತ್ತದೆ ಹಾಗೂ ಎಲ್ಲರನ್ನು ಇಂಬಿಟ್ಟುಕೊಳ್ಳುವ ಉದಾತ್ತ ಚಿಂತನೆಯಿಂದ ಕೂಡಿರುತ್ತದೆ. ವಚನ ಸಾಹಿತ್ಯವು ಲಿಂಗಾಯತ ಧರ್ಮದ ಧರ್ಮಗ್ರಂಥವಾಗಿದೆ. ವಚನ ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಿ ನೋಡಿದಾಗ ಬಸವಣ್ಣನವರು ಲಿಂಗಾಯತ ಧರ್ಮ ಸ್ಥಾಪಿಸಿದ್ದಾರೆ ಎಂದು ಸ್ಪಷ್ಟವಾಗುತ್ತದೆ.

ಬಸವಣ್ಣನವರ ಸಮಕಾಲೀನ ಶರಣರ ವಚನಗಳಲ್ಲಿ ಬಸವಣ್ಣನವರ ಹಾಗೂ ಲಿಂಗಾಯತ ಧರ್ಮ ಕುರಿತ ಸಾಲುಗಳು ಹೀಗಿವೆ:

ನಿಮ್ಮ ಧರ್ಮವಯ್ಯಾ ಈ ಭಕ್ತಿಯ ಪಥವು,
ಕರುಣಿ ಕಪಿಲಸಿದ್ಧಮಲ್ಲಿನಾಥಯ್ಯಾ.
ನಿಮಗೂ ಎನಗೂ **ಬಸವಣ್ಣನ ಧರ್ಮವಯ್ಯಾ**

- ಸಿದ್ಧರಾಮೇಶ್ವರರು

ನಮಗೆ ಲಿಂಗವುಂಟು,ನಾವು
**ಲಿಂಗವಂತ**ರೆಂದು ನುಡಿವರು

- ಮಡಿವಾಳ ಮಾಚಿದೇವರು

ಕೆಲವರು ಶರಣರು ಎಲ್ಲಿಯೂ ಲಿಂಗವಂತ ಎಂದು ಹೇಳಿಲ್ಲ ಎಂದು ವಾದಿಸುವವರು. ಆದರೆ ವಚನಗಳಲ್ಲಿ **ಲಿಂಗವಂತ** (**ಲಿಂಗಾಯತ**) ಪದವನ್ನು **29** ವಚನಕಾರರು (ಬಸವಯುಗದ 22 ಹಾಗೂ ಬಸವೋತ್ತರ 7), ತಮ್ಮ ವಚನಗಳಲ್ಲಿ ನೂರಾರು ಕಡೆ ಬಳಸಿದ್ದಾರೆ. ಇಲ್ಲಿ ಈ ವಚನಗಳನ್ನು ಸಂಗ್ರಹಿಸಿ ಕೊಡಲಾಗಿದೆ. ಈ ಎಲ್ಲಾ ವಚನಗಳನ್ನು ಕರ್ನಾಟಕ ಸರಕಾರ ಪ್ರಕಟಿತ ಸಮಗ್ರ ವಚನ ಸಾಹಿತ್ಯ ಸಂಪುಟಗಳಿಂದ ಆರಿಸಿಕೊಳ್ಳಲಾಗಿದೆ. ಇನ್ನು ಕೆಲವೊಂದು ಅಜ್ಞಾತ ಶರಣರು ಸಹ ತಮ್ಮ ವಚನಗಳಲ್ಲಿ **ಲಿಂಗವಂತ** ಪದವನ್ನು ಬಳಸಿದ್ದಾರೆ ಅದನ್ನು ಮುಂದಿನ ಪರಿಸ್ಕೃತ ಪುಸ್ತಕದಲ್ಲಿ ಕೊಡಲಾಗುವುದು.

Downloaded from: **www.lingayatreligion.com**

151
ಗಿರಿಗಳ ಮೇಲೆ ಹಲವು ತರುಮರಾದಿಗಳಿದ್ದು
ಶ್ರೀಗಂಧದ ಸನ್ನಿಧಿಯಲು ಪರಿಮಳವಾಗವೆ
**ಲಿಂಗವಂತ**ನ ಸನ್ನಿಧಿಯಿಂದ ಹಿಂದಣ ದುಸ್ಸಂಗವು ಕೆಡುವುದು.
ಕೂಡಲಸಂಗಮದೇವಯ್ಯಾ,
ಸಿರಿಯಾಳನ ಸಾರಿರ್ದ ನರರೆಲ್ಲಾ ಸುರರಾಗರೆ

653
ತಂದೆ ಮಕ್ಕಳಿಗೆ ಬುದ್ಧಿಯ ಹೇಳುವಲ್ಲಿ
ತಪ್ಪಿಂಗೆ ಮುನಿವನಲ್ಲದೆ ಪ್ರಾಣಕ್ಕೆ ಮುನಿಯ.
**ಲಿಂಗವಂತ**ನು **ಲಿಂಗವಂತ**ರಿಗೆ ಬುದ್ಧಿಯ ಹೇಳುವಲ್ಲಿ
ಅವಗುಣಕ್ಕೆ ಮುನಿವನಲ್ಲದೆ ಲಾಂಛನಕ್ಕೆ ಮುನಿಯ.
ಲಿಂಗಭಕ್ತನು ಲಿಂಗಪಥವ ಹೇಳಿದಡೆ
ಮಚ್ಚರಿಸುವರ ಮೆಚ್ಚ ಕೂಡಲಸಂಗಮದೇವ.

685
ಲಿಂಗವಶದಿಂದ ಬಂದ ನಡೆಗಳು,
ಲಿಂಗವಶದಿಂದ ಬಂದ ನುಡಿಗಳು,
**ಲಿಂಗವಂತ**ರು ತಾವು ಅಂಜಲದೇಕೆ
ಲಿಂಗವಿರಿಸಿದಂತಿಪ್ಪುದಲ್ಲದೆ,
ಕೂಡಲಸಂಗಮದೇವ ಭಕ್ತರಭಿಮಾನ ತನ್ನದೆಂಬನಾಗಿ.

966
ಅಂಗಲಿಂಗಸಂಗಸುಖಸಾರಾಯದನುಭಾವ
**ಲಿಂಗವಂತಂ**ಗಲ್ಲದೆ ಸಾಧ್ಯವಾಗದು ನೋಡಾ.
ಏಕಲಿಂಗಪರಿಗ್ರಾಹಕನಾದ ಬಳಿಕ,
ಆ ಲಿಂಗನಿಷ್ಠೆ ಗಟ್ಟಿಗೊಂಡು,
ಸ್ವಯಲಿಂಗಾರ್ಚನೋಪಚಾರ ಅರ್ಪಿತ ಪ್ರಸಾದಭೋಗಿಯಾಗಿ,
ವೀರಶೈವಸಂಪನ್ನನೆನಿಸಿ **ಲಿಂಗವಂತ**ನಾದ ಬಳಿಕ
ತನ್ನಂಗಲಿಂಗಸಂಬಂಧಕ್ಕನ್ಯವಾದ ಜಡಭೌತಿಕ ಪ್ರತಿಷ್ಠೆಯನುಳ್ಳ
ಭವಿಶೈವದೈವಕ್ಷೇತ್ರತೀರ್ಥಂಗಳಾದಿಯಾದ ಹಲವು ಲಿಂಗಾರ್ಚನೆಯ
ಮನದಲ್ಲಿ ನೆನೆ[ಯ]ಲಿಲ್ಲ, ಮಾಡಲೆಂತೂ ಬಾರದು.
ಇಷ್ಟೂ ಗುಣವಳವಟ್ಟಿತ್ತಾದಡೆ
ಆತನೀಗ ಏಕಲಿಂಗನಿಷ್ಠಾಚಾರಯುಕ್ತನಾದ ವೀರಮಾಹೇಶ್ವರನು.
ಇವರೊಳಗೆ ಅನುಸರಿಸಿಕೊಂಡು ನಡೆದನಾದಡೆ
ಗುರುಲಿಂಗಜಂಗಮಪಾದೋದಕಪ್ರಸಾದ ಸದ್ಭಕ್ತಿಯುಕ್ತವಾದ
ವೀರಶೈವ ಷಡುಸ್ಥಲಕ್ಕೆ ಹೊರಗಾಗಿ ನರಕಕ್ಕಿಳಿವನು ಕಾಣಾ, ಕೂಡಲಸಂಗಮದೇವಾ.

1142
ಕಾಯದ ಕಳವಳದಲ್ಲಿ ಹುಟ್ಟಿ ಲಿಂಗವನರಿಯದಂ[ತವರಿ]ರಲಿ,
ಷಡು ಮಹಾವೇದ ಶಾಸ್ತ್ರಗಮಪುರಾಣದರ್ಥವನೋದಿ
ಲಿಂಗ ಉಂಟು, ಇಲ್ಲೆಂಬ ಅಜ್ಞಾನಿಗಳಂತಿರಲಿ.

Downloaded from: **www.lingayatreligion.com** 

ಷಡುಶೈವರು ಹಂಚಾಗಿ ಹೋದರು.
ಎಂತು ನಿಜ **ಲಿಂಗವಂತಂಗೆ** ಸರಿಯೆಂಬೆ
ಅದ್ವೈತಿಗಳೆಲ್ಲಾ ಲಿಂಗಾರಾಧನೆ ಹುಸಿಯೆಂದು
ಬುದ್ಧಿತಪ್ಪಿಕ್ರಮಗೆಟ್ಟು ಹೋದರು,
ಬ್ರಹ್ಮ ನಾನೆಂದು ಶಿರವ ಹೋಗಾಡಿಕೊಂಡನು,
ಬ್ರಹ್ಮಾದಿದೇವತೆಗಳು ಮಹಾಲಿಂಗಕ್ಕೆ ದೂರವಾಗಿ ಹೋದರು,
ಹಮ್ಮಿಲ್ಲದ ಕಾರಣ
ಕೂಡಲಸಂಗನ ಶರಣರು ಜಂಗವಂದ್ಯರಾದರು.

1341
ಲಿಂಗವಿದ್ದಲ್ಲಿ ನಿಂದೆಯಿರದು, ನಿಂದೆಯಿದ್ದಲ್ಲಿ ಲಿಂಗವಿರದು,
ಅವರೆಂತಿದ್ದಡೇನು ಹೇಗಿದ್ದಡೇನು **ಲಿಂಗವಂತ**ರವರು,
ಉಪಮಿಸಬಾರದ ಮಹಾಘನವು ಕೂಡಲಸಂಗನ ಶರಣರು.

1412
ಹೆಂಗೂಸಿನಂಗವ ನೋಡಿರೆ ಪುರಾತನರು,
ಬಾಲತನದಂಗವ ನೋಡಿರೆ ಪುರಾತನರು,
ಬ್ರಹ್ಮವನಾಚರಿಸಿ ತನ್ನ ಮರೆದಿಪ್ಪುದ ನೋಡಿರೆ **ಲಿಂಗವಂತ**ರು.
ತನ್ನಲ್ಲಿ ತಾನು ನಿಶ್ಚಯವಾಗಿ ಭಾಷೆ ಬೀಸರವೋಗದೆಯಿಪ್ಪ ಇರವು
ಕೂಡಲಸಂಗಮದೇವರಲ್ಲಿ ನಮ್ಮ ಮಹದೇವಿಯಕ್ಕಂಗಾಯಿತ್ತು.

## 2. ಅಮುಗೆ ರಾಯಮ್ಮ

591
ಅಂಗದ ಮೇಲೆ ಲಿಂಗವಿಲ್ಲದವರಲ್ಲಿ
ಲಿಂಗಾರ್ಪಿತವ ಬೇಡಲೇಕೆ ?
ಅಂಗದ ಮೇಲೆ ಲಿಂಗವುಳ್ಳ **ಲಿಂಗವಂತ**ರಲ್ಲಿ
ಲಿಂಗಾರ್ಪಿತವ ಬಿಡಲೇತಕ್ಕೆ ?
ಜಾತಿಗೋತ್ರವನೆತ್ತಿ ನುಡಿಯಲೇಕೆ ?
ಸಹಜ ಶಿವಭಕ್ತರೆಂದು, ಶೀಲವಂತರೆಂದು, ವ್ರತಾಚಾರಿಗಳೆಂದು,
ವ್ರತಭ್ರಷ್ಟರೆಂದು ಅವರ ಕುಲಛಲವ ಕೇಳಿಕೊಂಡು
ಆಚಾರವುಳ್ಳವರು ಅನಾಚಾರಿಗಳು ಎಂದು
ಬೇಡುವ ಭಿಕ್ಷವ ಬಿಡಲೇತಕ್ಕೆ ?
ಮದ್ಯಮಾಂಸವ ಭುಂಜಿಸುವವರು ಅನಾಚಾರಿಗಳು.
ಆವ ಕುಲವಾದಡೇನು, ಅಂಗದ ಮೇಲೆ ಲಿಂಗವುಳ್ಳವರೆಲ್ಲರು
ಆಚಾರವುಳ್ಳವರೆಂಬೆನಯ್ಯಾ ; ಅಮುಗೇಶ್ವರಲಿಂಗಕ್ಕೆ ಅವರೆ ಸದ್ಭಕ್ತರೆಂಬೆನಯ್ಯಾ.

663
ನೊಸಲಿನಲ್ಲಿ ಮೂರು ಕಣ್ಣುಳ್ಳ ಪಶುಪತಿಯಾದಡೂ ಆಗಲಿ,
ಆದ್ಯರ ವಚನಂಗಳಲ್ಲಿ,
ಹೊನ್ನ ಹಿಡಿದವರು ಗುರುದ್ರೋಹಿಗಳು
ಹೆಣ್ಣ ಹಿಡಿದವರು ಲಿಂಗದ್ರೋಹಿಗಳು
ಮಣ್ಣ ಹಿಡಿದವರು ಜಂಗಮದ್ರೋಹಿಗಳು
ಹೀಗೆಂದು ಸಾರುತ್ತವೆ ವೇದ.

Downloaded from: **www.lingayatreligion.com** 

ಹಿಡಿದ ಆಚರಣೆ ಅನುಸರಣೆಯಾಗಿ, ತ್ರಿವಿಧವ ಹಿಡಿದು,
ನಾನೆ ಬ್ರಹ್ಮವೆಂದು ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿಗಳು
ಎಂಬ ಭವಕರ್ಮಿಗಳಿಗೆ ನರಕವೆ ಪ್ರಾಪ್ತಿ ನೋಡಾ ?
ಲಿಂಗವಂತನೆಂಬೆನೆ ಜಂಗಮವೆಂಬೆನೆ ?
ಹಿಡಿದ ಆಚರಣೆ ಅನುಸರಣೆಯಾದ ಬಳಿಕ ಜಂಗಮವೆನಲಿಲ್ಲ.
ಜಗದಲ್ಲಿ ನಡೆವ ಜಂಗುಳಿಗಳು ಭವಭವದಲ್ಲಿ ಬಳಲುತಿಪ್ಪರು ಅಮುಗೇಶ್ವರಾ.

## 3. ಅಕ್ಕಮ್ಮ

456
ಎನ್ನ ವ್ರತದ ನೇಮ ಅಡಿ ಆಕಾಶದೊಳಗಾದ ವ್ರತಸ್ಥರು ಕೇಳಿರೆ.
ನಮ್ಮ ನಿಮ್ಮ ವ್ರತಕ್ಕೆ ಸಂಬಂಧವೇನು ?
ಲೆಕ್ಕವಿಲ್ಲದ ವ್ರತ, ಕಟ್ಟಳೆಯಿಲ್ಲದ ನೇಮ, ಇವನೆಷ್ಟು ಮಾಡಿದಡೆ ಏನು ?
ತನ್ನ ಮನೆಗೆ ಕಟ್ಟಳೆ ಇರಬೇಕು.
ಎನ್ನ ಲಿಂಗವಂತಗೆ ಸೂತಕಮಾಸ ತಡೆದಲ್ಲಿ,
ಗರ್ಭವೆಂಬುದು ತಲೆದೋರಿದಲ್ಲಿಯೆ ಆತ್ಮ ಚೇತನಿಸುವನ್ನಕ್ಕ
ಆಕೆಯ ಉದರದ ಮೇಲೆ ನಿಹಿತ ಲಿಂಗವಿರಬೇಕು.
ನವಮಾಸ ತುಂಬಿ ಆಕೆಯ ಗರ್ಭದಿಂದ ಉಭಯಜಾತತ್ವವಾಗಲಾಗಿ
ಚೇತನ ಬೇರಾದಲ್ಲಿ ಗುರುಕರಜಾತನಮಾಡಬೇಕು.
ಇಂತೀ ಇಷ್ಟರ ಕ್ರೀಯಲ್ಲಿ ಸತತ ವ್ರತ ಇರಬೇಕು.
ಕಂಥೆಯ ಬಿಡುವನ್ನಕ್ಕ ಶರಣರ ಕೈಯಲ್ಲಿ ಅಂತಿಂತೆಂಬ ಶಂಕೆಯ ಹೊರಲಿಲ್ಲ.
ಇಂತೀ ವ್ರತದಲ್ಲಿ ನಿಶ್ಶಂಕನಾಗಬಲ್ಲಡೆ
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದಲ್ಲಿ ಸಮಶೀಲವಂತನೆಂಬೆ.

483
ಚತುಷ್ಪಾದಿ ಮುಂತಾದ, ನರ ವಿಹಂಗ ಕೀಟಕ ಮುಂತಾದ ಜೀವಂಗಳೆಲ್ಲವು
ತಮ್ಮ ತಮ್ಮ ಸ್ವಜಾತಿಯ ಕೂಡುವುದೆ ಶೀಲ.
ತಮ್ಮ ತಮ್ಮ ವ್ಯವಹಾರಂಗಳಲ್ಲಿ ಕೊಡುವ ಕೊಂಬುದೆ ಶೀಲ.
ಇಂತೀ ಜಾತಿವರ್ತಕದಲ್ಲಿ ನಡೆವ ಶೀಲವಂ ಬಿಟ್ಟು,
ಲಿಂಗವಂತ ಲಿಂಗ ಮುಂತಾಗಿ ನಡೆವ ಶೀಲವೆಂತುಟೆಂದಡೆ;
ಅಸಿ, ಕೃಷಿ, ವಾಣಿಜ್ಯ, ವಾಚಕ ಮುಂತಾದ ಕಾಯಕಂಗಳ ವಿವರವನರಿತು
ಪಾಪ ಪುಣ್ಯ ಬಹುಕಾಯಕಮಂ ಕಂಡು, ತನ್ನ ವಂಶದ ಸ್ವಜಾತಿಯಂ ಬಿಟ್ಟು,
ಶಿವಭಕ್ತರೆ ಬಂಧುಗಳಾಗಿ ಶಿವಾಧಿಕ್ಯವೆ ದಿಕ್ಕಾಗಿ ಕೊಂಡು ಗಮನಕ್ಕೆ
ಕಾಯಲಿಂಗ ಮನವರಿಕೆಯಾಗಿ, ತ್ರಿಕರಣ ಶುದ್ಧಾತ್ಮನಾಗಿ,
ಅಂಗಕ್ಕೆ ಆಚಾರ, ಮನಕ್ಕೆ ಅರಿವು, ಅರಿವಿಂಗೆ ಜ್ಞಾನ
ನಿರ್ಧಾರವಾಗಿ ಕರಿಗೊಂಡುದೆ ವ್ರತ. ಆಚಾರವೆ ಪ್ರಾಣವಾದ ರಾಮೇಶ್ವರಲಿಂಗಕ್ಕೆ
ಎಡೆದೆರಪಿಲ್ಲದ ನೇಮ.

Downloaded from: **www.lingayatreligion.com**

## 4. ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿ

773
**ಲಿಂಗವಂತರ** ಲಿಂಗಾಚಾರಿಗಳ ಅಂಗಳಕ್ಕೆ ಹೋಗಿ
ಲಿಂಗಾರ್ಪಿತವ ಮಾಡುವಲ್ಲಿ ಸಂದೇಹವಿಲ್ಲದಿರಬೇಕು.
ಅದೆಂತೆಂದಡೆ: ---
ಇಂತೆಂದುದಾಗಿ, ಕಾಣದುದನೆ ಚರಿಸದೆ, ಕಂಡುದನು ನುಡಿಯದೆ.
ಕಾಣದುದನು ಕಂಡುದನು ಒಂದೆಸಮವೆಂದು ಅರಿಯಬಲ್ಲರೆ
ಕುಂಭೇಶ್ವರಲಿಂಗವೆಂಬೆನು.

## 5. ಅಲ್ಲಮಪ್ರಭುದೇವರು

843
ಅರೂಪು ಕಾಣಬಾರದು, ಪೂಜಿಸುವ ಪರಿ ಇನ್ನೆಂತೊ ?
ರೂಪಿಂಗೆ ಕೇಡುಂಟು ಪೂಜಿಸುವ ಪರಿ ಇನ್ನೆಂತೊ ?
ಸಕಲ ನಿಷ್ಕಲ ಪೂಜೆಗೆ ಕಾರಣವಲ್ಲ !
ಇನ್ನೆಂತಯ್ಯಾ **ಲಿಂಗವಂತ**ರಿಗೆ ಪೂಜಿಸುವ ಪರಿ ?
ಲಿಂಗದ ಪರಿ ಇನ್ನೆಂತಯ್ಯಾ ?
ಅರಿಯಬಾರದ ಲಿಂಗವನು ಅರಿವಂತೆ ಮಾಡಿಕೊಟ್ಟನು ಶ್ರೀಗುರು.
ಈ ಎರಡುವನರಿದು ಪೂಜಿಸಬೇಕು ಗುಹೇಶ್ವರಾ.

853
ಅಹುದಹುದು ಕಿಂಕುರ್ವಾಣ ! ಮಝು ಭಾಪು !
ಬಲ್ಲವರು ಬಲ್ಲೆವೆಂದೆಂಬರೆ ?
**ಲಿಂಗವಂತ**ರ ಮಹಿಮೆ ಈ ಹೀಂಗಿರಬೇಡಾ ?
ಗುಹೇಶ್ವರನ ಅಪ್ಯಾಯನವಡಗಿಸುವ ಅನುವನು
ನೀನಲ್ಲದೆ ಮಹೀತಳದೊಳು ಮತ್ತೆ ಬಲ್ಲವರಾರು ?
ಹೇಳಾ ಸಂಗನಬಸವಣ್ಣಾ.

928
ಇತ(ದಿ?)ರ ಭ್ರಮಿತನು ಭಕ್ತನಲ್ಲ, ಲೋಕೋಪಚಾರಿ ಜಂಗಮವಲ್ಲ.
ಹೇಳಿಹೆನು ಕೇಳಿರಣ್ಣಾ:
ಜಂಗಮ ಪ್ರೇಮಿಯಾದರೆ ಭಸಿತ ರುದ್ರಾಕ್ಷಿ ಸಹ ಶಿವಸ್ವರೂಪ ಕಾಣುತ್ತ,
ನಮಸ್ಕರಿಸಿ ಬಿಜಯಂ ಮಾಡಿಕೊಂಡು ಬಂದು
ಮನಹರುಷದಲ್ಲಿ ಭೋಜನವ ಮಾಡಿಸೂದೀಗ ಭಕ್ತಂಗೆ ಲಕ್ಷಣ.
ಕಾಡೊಳಗಿರಲಿ ಊರೊಳಗಿರಲಿ ಮಠದಲ್ಲಿರಲಿ ಮನೆಯಲ್ಲಿರಲಿ
**ಲಿಂಗವಂತ**ರು ಕರೆಯಬಂದರೆ, ಹೋಗಬೇಕೆಂಬ ಅಬಿಲಾಷೆಯುಳ್ಳಡೆ,
ತಾನಿದ್ದಲ್ಲಿ ತಾ ಮಾಡುವಂಥ ಅಷ್ಟವಿಧಾರ್ಚನೆ ಷೋಡಶೋಪಚಾರ
ಲಿಂಗಕ್ರಿಯೆಗಳು ನಿತ್ಯನೇಮವು ಆದ ಬಳಿಕ
ಮತ್ತೆ ತಾ ಹೋಗಿ ತನ್ನ ಗುಂಪ ತೋರದೆ, ಭಕ್ತರಾಶ್ರಯದಲ್ಲಿ
ಭೋಜನವ ಮಾಡುವುದೀಗ ಜಂಗಮಕ್ಕೆ ಲಕ್ಷಣ.
ಅಂತಲ್ಲದೆ ಗೃಹಸ್ಥಾಶ್ರಮದಲ್ಲಿ ಕ್ರಿಯೆ ಮಾಡಿದರೆ

Downloaded from: **www.lingayatreligion.com**

ಜಂಗಮಕ್ಕೆ ಹೇಳುವ ಅರಿವು ಕೊರಮಜೀವಿಯಂತಾಯಿತ್ತಾಗಿ-
ಇದು ಕಾರಣ ಲೋಕೋಪಚಾರಿಗಳಾಗಿ ಒಡಲ ಹೊರೆವವರ
ನಮ್ಮ ಗುಹೇಶ್ವರಲಿಂಗವು ಬಲ್ಲನಾಗಿ ಅವರ ಒಲ್ಲನಯ್ಯಾ.

1021
ಒಡಲಡಗ ಮಚ್ಚಿದಾತನ ಅಚ್ಚಶರಣನೆಂಬೆ.
ಮಡಿಲಡಗ ಮಚ್ಚಿದಾತನ ಅಚ್ಚ**ಲಿಂಗವಂತ**ನೆಂಬೆ.
(ಈ ಒಡಲಡಗು ಮಡಿಲಡಗಿನೊಳಗೆ ಒಂದ ಮಚ್ಚದಿದ್ದರೆ?)
ಉತ್ಪತ್ತಿ ಪ್ರಳಯ ತಪ್ಪದು.
ಶ್ರೀಗುರು ಮಹಾಲಿಂಗದಲ್ಲಿ ಒಡಲಡಗ ಮಚ್ಚಿ
ಅಚ್ಚಭವಿಯಾದ ಶರಣನೊಬ್ಬನೆ-ಗುಹೇಶ್ವರ.

1347
ಪರುಷವ ತಂದು ಕಬ್ಬುನಕ್ಕೆ ಮುಟ್ಟಿಸಲು
ಚಿನ್ನವಪ್ಪುದಲ್ಲದೆ ಪರುಷವಾಗಬಲ್ಲುದೆ ?
ಈ ಲೋಕದ ಮನುಜರು ಶಿವಲಿಂಗವ ಕಟ್ಟಿದರೇನು,
**ಲಿಂಗವಂತ**ರಲ್ಲದೆ ಪ್ರಾಣಲಿಂಗಸಂಬಂದಿಗಳಾಗಬಲ್ಲರೆ ?
ಶರಣ ಆವ ಕುಲದಲ್ಲಿ ಹುಟ್ಟಿದರೇನು ಆತನು,
ಆಚಾರ ವೀರಶೈವಸಂಪನ್ನಸಿದ್ಧಾಂತ
ಕ್ರಿಯಾ ಜ್ಞಾನ ಅನುಭಾವಯುಕ್ತವಾದ ಪ್ರಾಣಲಿಂಗಸಂಪನ್ನ.
ಆದಿ ಅನಾದಿಯಿಲ್ಲದಂದಿನ ನಿಃಕಲ ನಿಶ್ಶೂನ್ಯ ನಿರ್ಭೆದ್ಯ
ನಿರಾಳ ನಿರಂಜನ ಪರಾತ್ಪರತರನು ತಾನೆ ನೋಡಾ.
ಅಂತಪ್ಪ ಮಹಾತ್ಮನ ಕುಲಜನಕುಲಜನೆಂದು ಸಂದೇಹ ಸಂಕಲ್ಪದಿಂದ ದೂಷಿಸಿ
ಜರೆವ ದುರಾಚಾರಿ [ಗಳ] ಬಾಯಲ್ಲಿ
ಬಾಲಹುಳ ಸುರಿಯದೆ ಮಾಣ್ಬುದೆ ಗುಹೇಶ್ವರಾ.

1361
ಪೌರ್ಣಮಿ ಬಪ್ಪನ್ನಕ್ಕ,
ಬಾಯಿಬಂಧನದಲ್ಲಿದ್ದ ಚಕೋರನಂತಿದ್ದೆನಯ್ಯಾ.
ಉಣಲಾಗದೆಂಬ ಶಾಸ್ತ್ರವಿಡಿದು ಇದ್ದವನಲ್ಲ.
ಉಣಲಾಗದೆಂಬ ಶಾಸ್ತ್ರವುಂಟೆ **ಲಿಂಗವಂತಂಗೆ** ?
ಅಹೋರಾತ್ರಿ ಅಷ್ಟಭೋಗಂಗಳ ಲಿಂಗಕ್ಕೆ ಕೊಟ್ಟು ಕೊಳಬೇಕು.
ಮಾಡುವ ನೀಡುವ ನಿಜಭಕ್ತರಿಲ್ಲದ ಕಾರಣ, ಬಾಯ್ದೆರೆಯದಿದ್ದೆನು.
ಮಾಡಿಹೆ ನೀಡಿಹೆನೆಂಬ ಸಂತೋಷದ ಆಪ್ಯಾಯನ ಹಿರಿದಾಯಿತ್ತು.
ನೀಡಯ್ಯಾ ಸಂಗನಬಸವಣ್ಣಾ ಗುಹೇಶ್ವರಂಗೆ !

1503
**ಲಿಂಗವಂತಂಗೆ** ಲಿಂಗದ ವಾರ್ತೆಯ ನುಡಿವುದೆ ಭಂಗ.
ಹಂಗು ನೋಡಾ ಹಂಗಿನ ಶಬ್ದ ನೋಡಾ !
ಕೊಡನ ತುಂಬಿದ ಹಾಲನೊಡೆಯ ಹಾಯ್ಕಿ
ಇನ್ನು ಉಡಿಗಿಹೆನೆಂದಡೆ ಉಂಟೆ ? ಗುಹೇಶ್ವರಾ ?

Downloaded from: **www.lingayatreligion.com** 

## 6. ಅಂಬಿಗರ ಚೌಡಯ್ಯ

143
ಜಂಗಮವ ಕರತಂದು ಮನೆಯಲ್ಲಿ ಕುಳ್ಳಿರಿಸಿ,
ಅಂಗದ ಮೇಲಣ ಜಪವನೆಣಿಸುವ ಭಕ್ತನ ಜಪದ ಬಾಯಲ್ಲಿ ಕೆರಹನಿಕ್ಕಲಿ!
ಅವನ ಲಿಂಗಾರ್ಚನೆಯ ಬಾಯಲ್ಲಿ ಹುಡಿಯ ಹೊಯ್ಯಲಿ!
ಜಂಗಮದ ತೃಪ್ತಿಯನರಿಯದೆ **ಲಿಂಗವಂತ**ನೆಂತಾದನೊ ? ಮರುಳೆ!
ಅವ ಪಿಸುಣ, ಹೊಲೆಯನೆಂದಾತನಂಬಿಗರ ಚೌಡಯ್ಯ.

## 7. ಅವಸರದ ರೇಕಣ್ಣ

724
ಗುರುವೆಂಬುದ ಪ್ರಮಾಣಿಸಿದ ಶಿಷ್ಯನಾದಡೆ
ತನ್ನಯ ಉಭಯದ ಗುರುವ ತಿಂದು ತೇಗಬೇಕು.
ಲಿಂಗ ಭಕ್ತನಾದಡೆ ಅಂಗ ಲಿಂಗವೆಂಬ ಉಭಯವನೊಡೆದು
ಉಭಯದ ಸಂದಿಯಲ್ಲಿ ಸಿಕ್ಕದೆ ನಿಜ**ಲಿಂಗವಂತ**ನಾಗಬೇಕು.
ಜಂಗಮ ಅಳಿದು ವಿರಕ್ತನಾಗಬಲ್ಲಡೆ ಆ ಗುರು, ಆ ಶಿಷ್ಯ, ಆ ಲಿಂಗ, ಆ ಭಕ್ತನ,
ಈ ಜಂಗಮ, ಈ ವಿರಕ್ತನ ಕೊಂದು ತಿಂದು
ಅಂಗ ನಿರಂಗವಾಗಬಲ್ಲಡೆ ಸದ್ಭಾವಸಂಗಿ, ಷಟ್ಸ್ಥಲಬ್ರಹ್ಮಿ.
ಸರ್ವಾರ್ಪಣ ಅಂತಸ್ಥಲೇಪ, ತದ್ಭಾವ ನಾಶ.
ಈ ಸಂದನಳಿದಲ್ಲಿ ಸದ್ಯೋಜಾತಲಿಂಗದಲ್ಲಿ ವಿನಾಶವಾದ ನಿರ್ಲೆಪ

742
ಗುರುಭಕ್ತ ಗುರುವಿಲ್ಲದೆ ಶಿಷ್ಯನಾಗಿ,
ಲಿಂಗಭಕ್ತ ಲಿಂಗವಿಲ್ಲದೆ **ಲಿಂಗವಂತ**ನಾಗಿ,
ಜಂಗಮಭಕ್ತ ಜಂಗಮವಿಲ್ಲದೆ ಜಂಗಮಕ್ಕಿಕ್ಕಿ ಮುಕ್ತನಾದ.
ಇಂತೀ ಮೂವರ ಮುದ್ದು ಎನಗೆ ಸತ್ತುಹೋಯಿತ್ತಲ್ಲಾ ಎಂದು,
ಬಿಕ್ಕದೆ ಕಣ್ಣನೀರಿಲ್ಲದೆ ಒಂದೆ ಸ್ವರದಲ್ಲಿ ಅಳುತ್ತಿದ್ದ
ಸದ್ಯೋಜಾತಲಿಂಗ ಕೇಳಬೇಕೆಂದು.

Downloaded from: **www.lingayatreligion.com** 

## 8. ಚೆನ್ನಬಸವಣ್ಣ

58
ಉದಯಮುಖದಲ್ಲಿ ಲಿಂಗದರುಶನ,
ಹಗಲಿನ ಮುಖದಲ್ಲಿ ಜಂಗಮ ದರುಶನ,
ಲೇಸು, ಲೇಸು, **ಲಿಂಗವಂತಂಗೆ** ಇದೇ ಪಥವು, ಸದ್ಭಕ್ತಂಗೆ ಇದೇ ಪಥವು.
ಲೇಸು ಲೇಸು ಕೂಡಲಚೆನ್ನಸಂಗಯ್ಯನಲ್ಲಿ, ಅಚ್ಚ ಲಿಂಗೈಕ್ಯಂಗೆ!

249
ಲಿಂಗಸಾರಾಯಸುಖಸಂಗಿಗಳನುಭಾವ
**ಲಿಂಗವಂತಂ**ಗಲ್ಲದೆ ಕಾಣಬಾರದು.
ಏಕೋ ಲಿಂಗ ಪ್ರತಿಗ್ರಾಹಕನಾದರೆ, ಅನ್ಯಲಿಂಗವ ಮುಟ್ಟಲಾಗದು.
ದೃಷ್ಟಲಿಂಗವಲ್ಲದೆ ಬಹುಲಿಂಗದ ಅರ್ಪಿತ ಕಿಲ್ಬಿಷವೆಂದುದು.
ಅನರ್ಪಿತವ ಮುಟ್ಟಲಾಗದು ಲಿಂಗಸಜ್ಜನರಿಗೆ
ಅನುಭಾವದಿಂದಲ್ಲದೆ ಲಿಂಗಜಂಗಮ ಪ್ರಸಾದವರಿಯಬಾರದು.
ಇದು ಕಾರಣ ಕೂಡಲಚೆನ್ನಸಂಗಯ್ಯಾ
ನಿಮ್ಮ ಶರಣಸಂಬಂಧವಪೂರ್ವ.

252
ರೂಹಿಲ್ಲದ ನೆಳಲಿಂಗೆ ಮಳಲ ಬೊಂಬೆಯ ಮಾಡಿ,
ನಾದ ಬಿಂದುವಿನಲ್ಲಿ ಪುದಿಸಿ, ಆರಿಗೂ ಮೈದೋರದೆ
ಏಡಿಸಿ ಕಾಡಿತ್ತು ಶಿವನ ಮಾಯೆ.
ಕಾಯದ ಕಳವಳಕ್ಕೆ ಮುಂದೆ ರೂಪಾಗಿ ತೋರಿತ್ತಲ್ಲದೆ,
ಅದು ತನ್ನ ಗುಣವಲ್ಲದೆ [ಬೇರೆ] ತೋರುತ್ತಿಲ್ಲ.
ಅಂಗಭೋಗವನೆ ಕುಂದಿಸಿ ಪ್ರಸಾದವ ರುಚಿಸಿಹೆನೆಂಬ
**ಲಿಂಗವಂತ**ರೆಲ್ಲರೂ ಅರಿವೆಣಗಳಾಗಿ ಹೋದರು.
ಅಂಗಭೋಗವೆ ಲಿಂಗಭೋಗ, ಲಿಂಗಭೋಗವೆ ಅರ್ಪಿತ.
ಸ್ವಕೀಯಃ ಪಾಕಸಂಬಂದಿ ಭೋಗೋ ಜಂಗಮವರ್ಜಿತಃ
ನಾಸ್ತಿ ಲಿಂಗಾರ್ಚನಂ ಚೈವ ಪ್ರಸಾದೋ ನಿಷ್ಫಲೋ ಭವೇತ್
ಲಿಂಗಕ್ಕೆಂದು ಬಂದ ರುಚಿ ಜಂಗಮಕ್ಕೆ ಬಾರದಿದ್ದಡೆ,
ಜಂಗಮಕ್ಕೆಂದು ಬಂದ ರುಚಿ ಲಿಂಗಕ್ಕೆ ಬಾರದಿದ್ದಡೆ. [ಲಿಂಗಜಂಗಮಭರಿತವರಿಲ್ಲ.]
ಇದು ಕಾರಣ, ಕೂಡಲಚೆನ್ನಸಂಗಯ್ಯಾ
ಪಾಕಸಂಬಂದಿಗೆ ಪ್ರಸಾದ ದೂರ.

316
ದೇವನಾಮ ಸೊಗಸದು **ಲಿಂಗಾಯತಂ**ಗೆ,
ಮಾನವನಾಮ ಸೊಗಸದು ಜಂಗಮ ಭಕ್ತಂಗೆ,
ಅನ್ಯನಾಮವರಿಯ ಪ್ರಸಾದಸಮ್ಯಕನಾಗಿ,
ಈ ತ್ರಿವಿಧ ಮಾಟದರ್ಥ[ಏಕಾರ್ಥಳ]
ಕೂಡಲಚೆನ್ನಸಂಗಾ ನಿಮ್ಮ ಶರಣಂಗೆ.

402
(ಲಿಂಗಾಂಗಿಗಳೆಂಬರು) ತ್ರಿಪುರಮರ್ದನವರಿಯರು.
**ಲಿಂಗವಂತ**ರೆಂಬರು ಕಾಮದಹನವ ಮಾಡಲರಿಯರು.

Downloaded from: **www.lingayatreligion.com**

ಪ್ರಾಣಲಿಂಗಿಗಳೆಂಬರು ಹರಿಯ ನಷ್ಟವನರಿಯರು.
ಲಿಂಗಪ್ರಾಣಿಗಳೆಂಬರು ಬ್ರಹ್ಮನ ಕೊಲಲರಿಯರು.
ಇಂತಪ್ಪ ಶಬ್ದಸೂತಕಿಗಳ ಕಂಡು ಕೂಡಲಚೆನ್ನಸಂಗನಲ್ಲಿ
ನಾಚಿತ್ತೆನ್ನ ಮನವು.

573
ಲಿಂಗಭಾಜನದಲ್ಲಿ ಸಹಭೋಜನವ ಮಾಡಿಹೆವೆಂದೆಂಬರು,
ಲಿಂಗಭಾಜನದಲ್ಲಿ ಸಹಭೋಜನವ ಮಾಡುವವರ ನೋಡಿರೇ.
**ಲಿಂಗವಂತ**ರೆಲ್ಲಾ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ ಆಸೆವುಳ್ಳನ್ನಕ್ಕ
ಲಿಂಗಭಾಜನದಲ್ಲಿ ಸಹಭೋಜನವ ಮಾಡುವ ಪರಿಯೆಂತೊ ?
ಹಸಿವು ತೃಷೆ ನಿದ್ರೆ ಆಲಸ್ಯ ವ್ಯಸನವುಳ್ಳನ್ನಕ್ಕ,
(ಲಿಂಗಭಾಜನದಲ್ಲಿ ಸಹಭೋಜನವ ಮಾಡುವ ಪರಿಯೆಂತೊ ?)
ಗುರುಲಿಂಗಜಂಗಮತ್ರಿವಿಧಸಂಪನ್ನತೆವುಳ್ಳನ್ನಕ್ಕ,
ಲಿಂಗಭಾಜನದಲ್ಲಿ ಸಹಭೋಜನವ ಮಾಡುವಜ್ಞಾನಿಗಳು
ತಾವೇ ಲಿಂಗವೆಂಬರು, ಲಿಂಗವೇ ತಾವೆಂಬರು.
ತಾವೆ ಲಿಂಗವಾದರೆ ಜನನ ಮರಣ ರುಜೆ ತಾಗು ನಿರೋಧವಿಲ್ಲದಿರಬೇಡಾ?
ಮಹಾಜ್ಞಾನವ ಬಲ್ಲೆವೆಂದು ತಮ್ಮ ಭಾಜನದಲ್ಲಿ ಲಿಂಗಕ್ಕೆ ನೀಡುವ
ಪಾತಕರ ತೋರದಿರು ಕೂಡಲಚೆನ್ನಸಂಗಮದೇವಾ.

585
ಶೀಲವಂತರು ಶೀಲವಂತರೆಂದೆಂಬರು,
ಶೀಲ ಸಂಬಂಧದ ಹೊಲಬನರಿಯದ ಭ್ರಮಿತ ಪ್ರಾಣಿಗಳು ನೀವು ಕೇಳಿ ಭೋ
ಕಾಮವೆಂಬುದೊಂದು ಪಾಪಿ, ಮದವೆಂಬುದೊಂದು ದ್ರೋಹಿ,
ಮತ್ಸರವೆಂಬುದೊಂದು ಹೊಲೆಯ,
ಕ್ರೋಧವೆಂಬುದೊಂದು ಕೈಸೂನೆಗಾರ,
ಮನವ್ಯಾಪಕಂಗಳು ಭವಿ.
ಇಂತಿವನರಿದು ಮರೆದು ಹರವಸಂಬೋಗಿ ಹೊಯಿ ಹಡೆದಂತಿದ್ದರೆ
ಕೂಡಲಚೆನ್ನಸಂಗನಲ್ಲಿ ಅವರ **ಲಿಂಗವಂತ**ರೆಂಬೆ.

589
ಶೀಲವಂತರೆಲ್ಲಾ ಶೀಲವಂತರಯ್ಯಾ
ಭಾಷೆವಂತರೆಲ್ಲಾ ಭಾಷೆವಂತರಯ್ಯಾ
ವ್ರತವಂತರೆಲ್ಲಾ ವ್ರತವಂತರಯ್ಯಾ
ಸತ್ಯವಂತರೆಲ್ಲಾ ಸತ್ಯವಂತರಯ್ಯಾ
ನೇಮವಂತರೆಲ್ಲಾ ನೇಮವಂತರಯ್ಯಾ
ಕೂಡಲಚೆನ್ನಸಂಗಮದೇವಯ್ಯಾ
ಸಂಗನಬಸವಣ್ಣನೊಬ್ಬನೆ **ಲಿಂಗವಂತ**.

605
ಅರ್ಪಿತ ಆನರ್ಪಿತವೆಂಬ ಉಭಯಕುಳದ ಶಂಕೆವುಳ್ಳನ್ನಕ್ಕ ಅಚ್ಚಸಂಸಾರಿಯೆಂಬೆ.
ಅರ್ಪಿತ ಅನರ್ಪಿತವೆಂಬೆರಡ ಕಳೆದು ನಿಂದಾತನ ಅಚ್ಚ**ಲಿಂಗವಂತ**ನೆಂಬೆ.
ಅರ್ಪಿತ ಅನರ್ಪಿತವನರ್ಪಿಸಿ ಪ್ರಸಾದ ಸ್ವೀಕರಿಸಬಲ್ಲಡಾತನ
ವಾಙ್ಮನಾತೀತನೆಂಬೆ.
ಅರ್ಪಿತವಿಲ್ಲ, ಅನರ್ಪಿತವಿಲ್ಲ, ಅಕಲ್ಪಿತವಯ್ಯಾ, ಕೂಡಲಚೆನ್ನಸಂಗಮದೇವಾ.

Downloaded from: **www.lingayatreligion.com** 

862
ಅಂಗಭೋಗವನೆ ಕುಂದಿಸಿ ಪ್ರಸಾದವನು ರುಚಿಸುವೆವೆಂಬ
**ಲಿಂಗವಂತ**ರೆಲ್ಲ ಅರಿವುಗೇಡಿಗಳಾಗಿ ಹೋದರು.
ಅಂಗಭೋಗವೆ ಲಿಂಗಭೋಗ, ಅಂಗಭೋಗವು [ಲಿಂಗಕ್ಕೆ] ಅರ್ಪಿತವಾಗಿ.
ಸ್ವಕೀಯ ಪಾಕಸಂಬಂಧಭೋಗೋ ಜಂಗಮವರ್ಜಿತಃ
ನಾಸ್ತಿ ಲಿಂಗಾರ್ಚನಂ ಚೈವ ಪ್ರಸಾದೋ ನಿಷ್ಫಲೋ ಭವೇತ್
ಅಂಗಕ್ಕೆ ಬಂದ ರುಚಿ, ಲಿಂಗಕ್ಕೆ ಬಾರದೆ ?
ಇದು ಕಾರಣ-ಕೂಡಲಚೆನ್ನಸಂಗಯ್ಯಾ
ಪಾಕಸಂಬಂದಿಗೆ ಪ್ರಸಾದ ದೂರ.

873
ಅಂಗಸ್ಥಲ ಮೂವತ್ತಾರು ಕಲ್ಪನಾಡಿಭೇದಮಂ ಭೇದಿಸುತ್ತ
ವಾಕು ಪಾಣಿ ಪಾದ ಪಾಯು ಗುಹ್ಯವೆಂಬ
ಕರ್ಮೆಂದ್ರಿಯಂಗಳ ವರ್ಮದಲ್ಲಿರಿಸಿ
ಶಬ್ದ ಸ್ಪರ್ಶ ರೂಪ ರಸ ಗಂಧವೆಂಬ ಪಂಚೇಂದ್ರಿಯ[ವಿಷಯಂ]ಗಳ
ಪೂರ್ವನಾಮವಿಮೋಚನೆಯಂ ಮಾಡುವ ಪರಿ :
ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ,
ಘ್ರಾಣವೆಂಬ ಪಂಚೇಂದ್ರಿಯಂಗಳ
ಬಾಹ್ಯಾಭ್ಯಂತರವನರಿವ ಪರಿ,
ಆದ್ಯಕ್ಷರವೊಂದಾದಡೆ ಅಂತ್ಯಕ್ಷರ ಶೂನ್ಯ,
ಅದಕ್ಕೆ ಶಾಸ್ತ್ರಕ್ರಮದೊಳಗಾಡುವ
ಭೇದಖಂಡದಿಂದ ಲಿಂಗಪ್ರಸಾದವ ಭೇದಿಸಿ,
ಆ ಲಿಂಗವಂ ಭೂಮಿಯ ಬಿಡಿಸುವುದು.
ಕಳಾವಿಧಸ್ಥಾನಕ್ಕೆ ತಂದಲ್ಲಿ ಸರ್ಪನು ಹಲವ ರುಚಿಸುವುದು.
ಆ ರುಚಿಸುವ ಸರ್ಪನನು ತನ್ನಿಚ್ಛೆಗೆ ಹರಿಯಲೀಯದೆ
ಅರಿವೆ ಪ್ರಾಣವಾಗಿ ಆ ಅರಿವಿನಿಂ ದೃಢವಿಡಿದು,
ಹರಿವ ಹತ್ತುವ ಪರಿಯನೊಡೆದು
ಮೂವತ್ತೆರಡು ಜವೆಯ ತೊರೆದಲ್ಲಿ ತೋರುವ, ನಾಡಿ ಮಧ್ಯಮಸ್ವರ
ಮಹಿತಸ್ವರ, ಭೂಸ್ವರವೆಂಬ ಮಧ್ಯನಾಡಿ ಮಥನಂಗಳಂ ಮಥಿಸುವುದು.
ಅಂಗಕ್ಕೆ ಲಿಂಗ ಬಂದಡೆ ಅಂಗದಾಪ್ಯಾಯನವನರಿವುದು.
ಗುರುವಿನಿಂದ ಕರಣಾದಿಗಳು ಶುದ್ಧವಹವು,
ಆದಿಪ್ರಭೆಯ ಕಿರಣಂಗಳು ಶುದ್ಧವಹವು,
ಕರಣಂಗಳ ಆರತವಡಗುವುದು,
ಕಾದ್ರುಮಾ ಕಾದು ಕಾವುದು;
ಆ ಲಿಂಗವನು ಉದಯದಲ್ಲಿ
ನಾಲ್ಕು ಘಳಿಗೆ ತನಕ ಲಿಂಗಾರ್ಚನೆಯಂ ಮಾಡುವುದು.
ಆ ಲಿಂಗವನು ವಾಮಕ್ಕೆ ಆ ಲಿಂಗವನು ದಕ್ಷಿಣಕ್ಕೆ
ಆ ಲಿಂಗವನು ಪೂರ್ವಕ್ಕೆ, ಆ ಲಿಂಗವನು ಪಶ್ಚಿಮಕ್ಕೆ
ಆ ಲಿಂಗವನು ಅಧಕ್ಕೆ,
ಆ ಲಿಂಗವನು ಊರ್ಧ್ವಕ್ಕೆ ಆ ಲಿಂಗವನು ಜಡಿವುದು.
ಪ್ರಭಾಲಿಂಗವೆಂಬ ಭಾವವನು ಭಾವಿಸಿ,
ವಾತ ಪಿತ್ತ ಶ್ಲೇಷ್ಮವೆಂಬ ತ್ರಿಧಾತುವನರಿವುದು.
ವಾತೋದ್ರೇಕವಾದಡೆ ಶೀತೋಷ್ಣಂಗಳ ಲಿಂಗಕ್ಕೆ ಸಮ ಮಾಡುವುದು,
ಪಿತ್ತೋದ್ರೇಕವಾದಡೆ ಶೈತ್ಯವಂ ಮಾಡಿ ಕಾವುದು.

Downloaded from: **www.lingayatreligion.com**

ಶ್ಲೇಷ್ಮೋದ್ರೇಕವಾದಡೆ ಬಿಗಿದು ಲಿಂಗಾರ್ಚನೆಯಂ ಮಾಡುವುದು.
ವಾತಪ್ರಕೃತಿಯಲ್ಲಿ ಲಿಂಗದ ಮೊದಲು ದೊಡ್ಡ ತುದಿ ಸಣ್ಣದಾಗಿಹುದು
ಪಿತ್ತಪ್ರಕೃತಿಯಲ್ಲಿ ತುದಿ ಮೊದಲು ಸಣ್ಣದಾಗಿ ನಡು ದೊಡ್ಡದಾಗಿಹುದು.
ಶ್ಲೇಷ್ಮಪ್ರಕೃತಿಯಲ್ಲಿ ಲಿಂಗತುದಿ ಮೊದಲೊಂದಾಗಿ ದೊಡ್ಡದಾಗಿಹುದು.
ಇಂತು ತ್ರಿಧಾತುವನರಿದು ಲಿಂಗಾರ್ಚನೆಯ ಮಾಡುವುದು-
ಇದು ವರ್ತನಾಕ್ರಮ.
ಆದಿಕ್ರಮ ಅಂತ್ಯಕ್ರಮ ಅನ್ವಯಕ್ರಮ ನಿನಾದಾದಿಕ್ರಮವೆಂಬ
ಭೇದಾದಿ ಭೇದಂಗಳಂ ಭೇದಿಸುವುದು.
ಶಾಸ್ತ್ರಸಂದಿಯಲ್ಲಿ ಬಾಹ್ಯಂಗಳನರಿವುದು, ಕ್ರಮಾದಿಕ್ರಮಂಗ?ಂ ತಿಳಿವುದು.
ವಿನಾದದಲ್ಲಿ ಚಿತ್ರಪತ್ರಂಗಳನರಿವುದು, ಕರಣಂಗಳಂ ಶುದ್ಧಮಂ ಮಾಡುವುದು.
ಹಿರಿದು ನಡೆಯದೆ, ಹಿರಿದು ನುಡಿಯದೆ
ಹಿರಿದುಂ ದಿವಾರಾತ್ರಿಯಲ್ಲಿ ಶೀತೋಷ್ಣಾದಿಗಳಂ ಮುಟ್ಟಿಸಿಕೊಳದೆ
ಮಹಾಮಾರ್ಗವ ತಿಳಿವುದು.
ಇದರಿಂಗೆ ತನ್ನ ಮಾರ್ಗಮಂ ತೋರದೆ ಮಹಾಮಾರ್ಗದಲ್ಲಿ ಮಾರ್ಗಿಯಾಗಿ
ಇದರ ಭೇದಸಂಬಂಧದಲ್ಲಿ ಉಚ್ಛ್ವಾಸ ನಿಶ್ವಾಸಕ್ರಮವನು ಓದಿ
ಭರತಕ್ರಮವನು ಅನುಕ್ರಮಿಸಿ ಮೂಲಕಸ್ಥಾನದಲ್ಲಿ ಹೊರೆಹೊಗದೆ
ಇಕ್ಕುವ ಚಿತ್ರಕ್ರಮದಲ್ಲಿ ಹೊರೆಹೊಗದೆ
ಇಂತಿವನರಿತು ಲಿಂಗಾರ್ಚನೆಯಂ ಮಾಡುವ ಪ್ರಕರಣ :
ಭ್ರಾಹ್ಮೀ ಮಹಾಮುಹೂರ್ತದಲ್ಲಿ ಎದ್ದು, ಅಂಗಪ್ರಕ್ಷಾಲನಮಂ ಮಾಡಿ
ಕಂಬುವಂ ವಿಸರ್ಜಿಸಿ, ಶಿಶು ಪ್ರಕಾರವಂ ಮಾಡಿ
ಶಮೆಯೆಂಬ ಸಮಾದಿಯಲ್ಲಿ ಕುಳ್ಳಿರ್ದು, ದಮೆಯೆಂಬ ಪೀಠವನಿಕ್ಕಿ,
ಶಾಂತಿಯೆಂಬ ನಿಜವಸ್ತ್ರವ ತಂದು, ಆದಿ ಶಿಶುವಿಂಗೆ ಅನುಬಂಧವಂಮಾಡಿ
ತಲೆವಲದಲ್ಲಿ ಶಿಶುವಂ ತೆಗೆದು ಕರವೆಂಬ ತೊಟ್ಟಿಲಲ್ಲಿಕ್ಕಿ ಜೋಗೈಸಿ
ಕೈಗೆ ಬಾಯಿಗೆ ಬಂದಿತ್ತು ನೋಡಾ,
ಬಾಯಿಗೆ ಬಂದಲ್ಲಿ ಭಾವ ಶುದ್ಧವಾಯಿತ್ತು, ಕೈಗೆ ಬಂದಲ್ಲಿ ಆದಿ ಶುದ್ಧವಾಯಿತ್ತು,
ಭಾವಲಿಂಗ ಜೀವಕರವಾಯವೆಂಬ ಪಟ್ಟಣದಲ್ಲಿ
ಸೀಮೆ ಸಂಬಂಧವಂ ಮೀರಿ, ಮಂತ್ರಮಯವಾಯಿತ್ತು ನೋಡಾ !
ಮಂತ್ರಲಿಂಗವೊ ! ಅಮಂತ್ರ ಲಿಂಗವೊ ಹೇಳಾ !
ಮತ್ರದಿಂ ವಸ್ತ್ರ, ಅಮಂತ್ರದಿಂ ಹಸ್ತ
ಇಂತು ಮಂತ್ರ ಆಮಂತ್ರಗಳೆರಡನು ಕೂಡಿ ರಕ್ಷಿಸುತ್ತಿದ್ದಿತ್ತು ನೋಡಾ !
ಶಿರಸ್ಸೆಂಬ ಧೇನು ಲಿಂಗವೆಂಬ ಮೊಲೆಯ ಕರವೆಂಬ ವತ್ಸ ತೊರೆಯಿತ್ತು ನೋಡಾ!
ಮಂತ್ರವೆಂಬ ಅಮೃತವ ಕರೆಯಿತ್ತು ನೋಡಾ !
ಬಸವಯ್ಯ ನೋಡಾ ಊಡದ ಹಸು, ಉಣ್ಣದ ಕರು, ಆರೂಢದ ಭಾಂಡ !
ಅಂಗದಲ್ಲಿ ಹುಟ್ಟಿದ ಅಮೃತಜಲವನು ಲಿಂಗಕ್ಕೆ ಕೊಡದೆ
ಧರೆಯಲ್ಲಿ ಬಿಟ್ಟಡೆ ಎಂತೊ ಲಿಂಗೋದಯವಹುದು ?
ಎಂತೋ ಪಾದೋದಕ ಪ್ರಸಾದಜೀವಿಯಹನು ?
ಜೀವ ಪರಮರ ಐಕ್ಯಬಾವವನರಿದ(ವ?)ಡೆ
ಲಿಂಗೋದಯದಲಲ್ಲದೆ ಅರಿಯಬಾರದು
ನಿಜಭಾವ ನಿಜಭಕ್ತಿ ನಿಜಸಮರಸವಾದಲ್ಲದೆ ಲಿಂಗೋದಯವಾಗದು.
ನಿಜಮರ್ತ್ಯದಲ್ಲಿ ಜನಿಸಿದ ಅಂಗ ಅಂಗಿಗಳೆಲ್ಲರು
ಪ್ರಾಣಲಿಂಗ ಸಂಬಂಧವನರಿಯರು.
ಅಂತು ಅಂಗಲಿಂಗಿಗಳು ಪ್ರಾಣಲಿಂಗಿಗಳಿಗೆ ಭವಿಗಳು
ಅಂತು ಪ್ರಾಣಲಿಂಗಿಗಳು ಅಂಗಲಿಂಗಿಗಳನೊಲ್ಲರು.
ಅದು ಹೇಗೆಂದಡೆ:

Downloaded from: **www.lingayatreligion.com** 

ಅವರಿಗೆ ಪ್ರಸಾದ ಪ್ರಾಣಲಿಂಗವಾಗಿ
ನಾಮಗೋಪ್ಯ ಮಂತ್ರಗೋಪ್ಯಂಗಳಲ್ಲಿ ಆ ಮಹಾಮಾರ್ಗವನರಿಯರಾಗಿ,
ಅಂಗಲಿಂಗಿಗಳಲ್ಲದೆ ಪ್ರಾಣಲಿಂಗಿಗಳಲ್ಲ
ಪ್ರಸಾದಸೇವನಧ್ಯಾನಾದರ್ಚನಾದರ್ಪಣಾತ್ ಶುಚಿಃ
ಪ್ರಸಾದಹೀನಸ್ಯಾಂಗೇ ತು ಲಿಂಗಂ ನಾಸ್ತಿ ಪುನಃ ಪುನಃ
ಎಂದುದಾಗಿ
ಇಂತು ಲಿಂಗಾರ್ಚನೆಯಂ ಮಾಡುವುದು
ಲಿಂಗಪಾದೋದಕ ಪ್ರಸಾದವನು ಬಾಹ್ಯಾಂತರಂಗದಲ್ಲಿ ವಿರ?ವಿಲ್ಲದೆ
ಅವಿರಳಭಾವಸಂಬಂಧದಲ್ಲಿ ಧರಿಸುವುದು; ಧರಿಸುವಾತ **ಲಿಂಗವಂತ**ನು.
ಅಂಗಲಿಂಗಿ ಪ್ರಾಣಲಿಂಗಿ ಪ್ರಸಾದಲಿಂಗಿ
ನಿಜನಿಂದ ಮಾರ್ಗವಿರಳ ಪಂಚಕನಾಡಿಯಲ್ಲಿ ಹೊರಹೊಗದೆ
ನಿರ್ನಾದಮಂ ಆಶ್ರಯಿಸುವುದು.
ಇದು ಮಹಾಮಾರ್ಗ ಪುರಾತನರ ಪೂರ್ವ;
ಅಪರದಲ್ಲಿ ಅಂಥ ಲಿಂಗವನರಿ, ಆದಿಯಲ್ಲಿ ಅನಾಹತಲಿಂಗವನರಿ.
ಲಿಂಗವಾರು ಅಂಗಾಂಗಲಿಂಗ ಸರ್ವಾಂಗಲಿಂಗ, ಲಿಂಗಸನುಮತವಾಯಿತ್ತು,
ಮಹಾವೃತ್ತಿಗೆ ಅನುಮತವಾಯಿತು, ನಿರ್ವಿಕಲ್ಪ ಪರಮಪದಕ್ಕೆ ತಾನೆ ಆಯಿತ್ತು.
ಇನ್ನು ಮಾನಸ ವಾಚಕ ಕಾಯಕದಲ್ಲಿ ಅವಿತಥವಿಲ್ಲದೆ
ಲಿಂಗಾರ್ಚನೆಯಂ ಮಾಡುವರ ತೋರಿ ಬದುಕಿಸಾ
ಕೂಡಲಚೆನ್ನಸಂಗಮದೇವಯ್ಯ.

903
ಅನ್ಯದೈವವ ಬಿಟ್ಟುದಕ್ಕೆ ಆವುದು ಕ್ರಮವೆಂದರೆ:
ಅನ್ಯದೈವವ ಮನದಲ್ಲಿ ನೆನೆಯಲಾಗದು, ಅನ್ಯದೈವವ ಮಾತನಾಡಲಾಗದು.
ಅನ್ಯದೈವದ ಪೂಜೆಯ ಮಾಡಲಾಗದು. ಸ್ಥಾವರಲಿಂಗಕ್ಕೆರಗಲಾಗದು.
ಆ ಲಿಂಗ ಪ್ರಸಾದವ ಕೊಳಲೆಂತೂ ಬಾರದು.
ಇಷ್ಟು ನಾಸ್ತಿಯಾದರೆ ಆತ ಅನ್ಯದೈವವ ಬಿಟ್ಟು **ಲಿಂಗವಂತ**ನೆನಿಸಿಕೊಂಬನು.
ಇವರೊಳಗೆ ಅನುಸರಣೆಯ ಮಾಡಿಕೊಂಡು
ನಡೆದನಾದೊಡೆ ಅವಂಗೆ ಕುಂಬಿಪಾತಕ
ನಾಯಕನರಕ ತಪ್ಪದು ಕಾಣಾ ಕೂಡಲಚೆನ್ನಸಂಗಯ್ಯ.

973
ಆಣವಮಲ ಮಾಯಾಮಲ ಕಾರ್ಮಿಕಮಲವೆಂಬ ಮಲತ್ರಯಂಗಳಂ ಕಳೆದು
ಆಜ್ಞಾದೀಕ್ಷೆ ಉಪಮಾದೀಕ್ಷೆ ಸ್ವಸ್ತಿಕಾರೋಹಣ ಕಳಶಾಬಿಷೇಕ,
ವಿಭೂತಿಯ ಪಟ್ಟ **ಲಿಂಗಾಯತ** ಲಿಂಗಸ್ವಾಯತ-
ಈ ಏಳನು ಕಾಯಕ್ಕುಪದೇಶವ ಮಾಡುವುದು.
ಸಮಯ ನಿಸ್ಸಂಸಾರ ನಿರ್ವಾಣ ತತ್ತ್ವದೀಕ್ಷೆ ಆಧ್ಯಾತ್ಮ ಅನುಗ್ರಹ ಶುದ್ಧವಿದ್ಯೆ-
ಈ ಏಳನು ಪ್ರಾಣಕ್ಕುಪದೇಶವ ಮಾಡುವುದು.
ಏಕಾಗ್ರಚಿತ್ತ, ದೃಢವ್ರತ, ಪಂಚೇಂದ್ರಿಯಾರ್ಪಿತ, ಅಹಿಂಸೆ
ಮನೋಲಯ ಲಿಂಗನಿಜ ಸದ್ಯೋನ್ಮುಕ್ತಿ-
ಈ ಏಳನು ಮನಕ್ಕುಪದೇಶವ ಮಾಡುವದು.
ಈ ಪ್ರಕಾರದುಪದೇಶ ಕೂಡಲಚೆನ್ನಸಂಗಯ್ಯನಲ್ಲಿ ಸಹಜದೀಕ್ಷೆ.

1093
ಕರಸ್ಥಲದಲ್ಲಿ ಲಿಂಗವ ಧರಿಸಿ
ಅನ್ಯದೈವಕ್ಕೆ ತಲೆವಾಗದಾತನ **ಲಿಂಗವಂತ**ನೆಂಬೆನಯ್ಯಾ.

Downloaded from: **www.lingayatreligion.com**

ಕರಸ್ಥಲದಲ್ಲಿ ಲಿಂಗವ ಧರಿಸಿ ಭವಿಸಂಗವ ಮಾಡದಾತನ **ಲಿಂಗವಂತ**ನೆಂಬೆನಯ್ಯಾ.
ಕರಸ್ಥಲದಲ್ಲಿ ಲಿಂಗವ ಧರಿಸಿದಾತ ಜಡಶೈವರ ಹೊದ್ದಲಾಗದು,
ಶೈವರು ಹೇಳಿದ ಶಾಸ್ತ್ರವ ಓದಲಾಗದು,
ಅನ್ಯಮಂತ್ರ ಅನ್ಯಜಪಮಾಲಿಕೆಯ ಮಾಡಲಾಗದು,
ಲಿಂಗಬಾಹ್ಯ ಸತಿಸುತರ ಸೋಂಕಲಾಗದು.
ಕರಸ್ಥಲದಲ್ಲಿ ಲಿಂಗವ ಧರಿಸಿದಾತ ಉದಯಾಸ್ತಮಾನವೆನ್ನದೆ
ಶಿವಪೂಜೆ ಶಿವಮಂತ್ರ ಶಿವಾರ್ಪಣ ಶಿವಶಾಸ್ತ್ರ,
ಶಿವಯೋಗದಲ್ಲಿರುವಾತನೆ **ಲಿಂಗವಂತ**ನೆಂಬೆನಯ್ಯಾ.
ಇದಮೀರಿ; ಕರಸ್ಥಲದಲ್ಲಿ ಲಿಂಗವ ಧರಿಸಿ
ತನ್ನ ಮನೆಯಲ್ಲಿ ಅನ್ಯದೈವ ಭವಿಮಿಶ್ರ ಅನ್ಯಬೋಧೆ
ಭವಿಶಾಸ್ತ್ರವುಳ್ಳಾತನ ಶುದ್ಧಭವಿಯೆಂಬೆನಯ್ಯಾ.
ಅದೆಂತೆಂದಡೆ;
``ಅಭಕ್ತಜನಸಂಗಶ್ಚ ಆಮಂತ್ರಂಚ ಅನಾಗಮಃ
ಅನ್ಯದೈವಪರಿತ್ಯಾಗೋ ಲಿಂಗಭಕ್ತಸ್ಯ ಲಕ್ಷಣಂ
ಶಿವಸ್ಯ ಶಿವಮಂತ್ರಸ್ಯ ಶಿವಾಗಮಸ್ಯ ಪೂಜನಂ
ಶಿವಶೇಷಶೀಲಸಂಬಂಧೋ ಲಿಂಗಭಕ್ತಸ್ಯ ಲಕ್ಷಣಂ
ಲಿಂಗಧಾರೀ ಸುಭಕ್ತಶ್ಚ ಲಿಂಗಬಾಹ್ಯಸತೀಸುತಃ
ಅಲಿಂಗಿನೀ ಚುಂಬಕಶ್ಚ ರೌರವಂ ನರಕಂ ವ್ರಜೇತ್ ಎಂದುದಾಗಿ
ಗುರುವಾಕ್ಯವ ಮೀರಿ ನಡೆವ ಮಹಾಪಾತಕರ ಮುಖವ ತೋರದಿರಾ,
ಸೆರೆಗೊಡ್ಡಿ ಬೇಡಿಕೊಂಬೆ, ದಯದಿಂದ ನೋಡಿ ರಕ್ಷಿಸು
ಕೂಡಲಚೆನ್ನಸಂಗಮದೇವಾ.

1348
ಪೂರ್ವಜಾತವಳಿದು ಪುನರ್ಜಾತರೆನಿಸಿ, ಅಂಗದ ಮೇಲೆ ಲಿಂಗವ ಧರಿಸಿ
**ಲಿಂಗವಂತ**ರೆನಿಸಿದ ಮೇಲೆ;
ಮತ್ತೆ ಜಾತಿಸೂತಕ ಜನನಸೂತಕ ಪ್ರೇತಸೂತಕ ರಜಸ್ಸೂತಕ,
ಎಂಜಲಸೂತಕ ಬಿಡದನ್ನಕ್ಕರ ಇವರನೆಂತು ಭಕ್ತರೆಂಬೆನಯ್ಯಾ ?
ಇವರನೆಂತು ಯುಕ್ತರೆಂಬೆನಯ್ಯಾ ? ಇವರನೆಂತು ಮುಕ್ತರೆಂಬೆನಯ್ಯಾ ?
ಶ್ರೀಗುರುಸ್ವಾಮಿ ಶಿಷ್ಯನ ಪೂರ್ವಾಶ್ರಯಮಂ ಕಳೆದು,
ಹಸ್ತಮಸ್ತಕಸಂಯೋಗವಂ ಮಾಡಿ, ಕರ್ಣಮಂತ್ರಮಂ ತುಂಬಿ,
ಕರಸ್ಥಲಕೆ ಶಿವಲಿಂಗಮಂ ಬಿಜಯಂಗೈಸಿ ಕೊಟ್ಟ ಬಳಿಕ
ಕಾಡ್ಗಿಚ್ಚಿನ ಕೈಯಲ್ಲಿ ಕರಡವ ಕೊಯ್ಸಿದಂತಿರಬೇಕು ಭಕ್ತನು !
ಹಿಂದೆ ಮೆದೆಯಿಲ್ಲ ಮುಂದೆ ನಿಲವಿಲ್ಲ-ಇದು ಕಾರಣ
ಕೂಡಲಚೆನ್ನಸಂಗಯ್ಯಾ, ನಿಮ್ಮ ಸದ್ಭಕ್ತರು ಸೂತಕವ ಮಾಡಲಿಲ್ಲ

1374
ಪ್ರಾಣಾದಿ ವಾಯುಗಳ ಕಳೆದು ಭಕ್ತರಾದರೆಮ್ಮವರು, -ಅದೆಂತೆಂದಡೆ:
ಅಲ್ಲಲ್ಲಿರ್ದ ದಶವಾಯುಗಳ ದಶಸ್ಥಾನದಲ್ಲಿ ನಿಲಿಸಿ
ಭಕ್ತಿಯ ಮಾಡುವ ಪರಿಯ ಹೇಳಿಹೆ ಕೇಳಿರಣ್ಣಾ:
ಪ್ರಾಣವಾಯುವ ನಿಲಿಸಿದರು ಪ್ರಾಣಲಿಂಗದಲ್ಲಿ,
ಅಪಾನವಾಯುವ ನಿಲಿಸಿದರು ಪ್ರಸಾದಲಿಂಗದಲ್ಲಿ,
ವ್ಯಾನವಾಯುವ ನಿಲಿಸಿದರು ಚತುರ್ವಿಧಪದದ ಬಯಕೆಯಳಿದ ಲಿಂಗಧ್ಯಾನದಲ್ಲಿ.
ಉದಾನ ವಾಯುವ ನಿಲಿಸಿದರು ಉದ್ದೇಶದಿಂದ ನಡೆವ ಅನ್ಯಗಮನವ ಕೆಡಿಸಿ
ನಿರ್ಗಮನವೆಂಬ ಸುಚಿತ್ತದಲ್ಲಿ.

Downloaded from: **www.lingayatreligion.com**

ಸಮಾನವಾಯುವ ನಿಲಿಸಿದರು ಸಮ್ಯಗ್ ಜ್ಞಾನದ ಸ್ವಯಂಜ್ಯೋತಿಯ
ಬೆಳಕಿನ ಕಳೆಯಲ್ಲಿ.
ನಾಗವಾಯುವ ನಿಲಿಸಿದರು ಸುಚಿತ್ತ ಸುಬುದ್ಧಿ ಸುಗೋಷ್ಠಿಯ ಸುಜ್ಞಾನದ
ಬೆಳಗಿನ ಕಳೆಯೊಡನೆ ಸುಳಿದಾಡುವ ಮಹಾ**ಲಿಂಗವಂತ**ರ ಅನುಭಾವದಲ್ಲಿ.
ಕೂರ್ಮವಾಯುವ ನಿಲಿಸಿದರು,
ಶಿವಶ್ರುತಿ ಶಿವಮಂತ್ರ ಷಡಕ್ಷರಿ ಬೀಜಂಗಳ ಜಪಿಸುವಲ್ಲಿ.
ಕೃಕರ ವಾಯುವ ನಿಲಿಸಿದರು
ಚತುರ್ವಿಧ ಪುರುಷಾರ್ಥಂಗಳ ಕಳೆದು ಷಡ್ವಿಧ ದಾಸೋಹ ಭಕ್ತರತಿಯಾನಂದ
ಸೂಕ್ಷ್ಮಸಂಬಂಧದ ಕೂಟದಲ್ಲಿ ತೆರಹಿಲ್ಲದ ತನ್ನ ತಾನರಿವಲ್ಲಿ.
ದೇವದತ್ತವಾಯುವ ನಿಲಿಸಿದರು ಶಿವಲಿಂಗವೆ ಲಿಂಗ ಶಿವಭಕ್ತರೆ ಕುಲಜರು,
ಶಿವಾಗಮವೆ ಆಗಮ, ಶಿವಾಚಾರವೆ ಆಚಾರವೆಂಬ ಏಕೋಭಾವದ
ನಿಷ್ಠೆಯಿಂದ ಭಾಷೆಯ ನುಡಿದು
ದೃಢವಿಡಿದು ಅನ್ಯವ ಜರಿವಲ್ಲಿ.
ಧನಂಜಯ ವಾಯುವ ನಿಲಿಸಿದರು, ಅನಂತ ಪರಿಯಲ್ಲಿ ಧಾವತಿಗೊಂಡು
ಕಾಯಕ್ಲೇಶದಿಂದ ತನು ಮನ ಬಳಲಿ ಗಳಿಸಿದಂತಹ ಧನವ
ಅನರ್ಥವ ಮಾಡಿ ಕೆಡಿಸದೆ, ಲಿಂಗಾರ್ಚನೆಯ ಮಾಡಿ
ಗುರುಲಿಂಗಜಂಗಮವೆಂಬ ತ್ರಿವಿಧ ದಾಸೋಹದ ಪರಿಣಾಮದಲ್ಲಿ,
ಈ ದಶವಾಯುಗಳ ಪ್ರಯತ್ನಕ್ಕೆ ಧ್ಯಾನ ಗಮನ ಸಂಗ ಸುಬುದ್ಧಿ ನಿರ್ಗುಣ
ತಮಂಧ ಕೋಪ ಚಿಂತೆ ಎಂಬಿವನರಿದು, ದುಶ್ಚಿತ್ತವ ಮುರಿದು,
ಅಹಂಕಾರವಳಿದು, ದಶವಾಯುಗಳ ದಶಸ್ಥಾನದಲ್ಲಿ ನಿಲಿಸಿ
ಭಕ್ತರಾಗಬೇಕು ಕಾಣಿರೆ, ಎಲೆ ಅಣ್ಣಗಳಿರಾ !
ಅಲ್ಲಲ್ಲಿ ಇವರ ಓತು, ಭರವ ಕೆಡಿಸಿ ತಗ್ಗಲೊತ್ತಿ, ಮೇಲೆ ತಲೆಯೆತ್ತಲೀಯದೆ
ದಶವಾಯುಗಳ ದಶಸ್ಥಾನದಲ್ಲಿ [ನಿಲಿಸಿ] ದಶಾವಸ್ಥೆಯಿಂದ ಲಿಂಗವನೊಲಿಸಿದ
ಮಹಾಮಹಿಮನ ಮಸ್ತಕವೆ ಶ್ರೀಪರ್ವತ, ಲಲಾಟವೆ ಕೇತಾರವೆನಿಸುವುದು.
ಆತನ ಹೃದಯದಲ್ಲಿ ಅಷ್ಟಷಷ್ಟಿ ತೀರ್ಥಂಗಳಿಪ್ಪವು.
ಆತನ ಶ್ರೀಪಾದ ವಾರಣಾಸಿ ಅವಿಮುಕ್ತಕ್ಷೇತ್ರದಿಂದ ವಿಶೇಷ.
ಆತನ ಪಾದಾಂಗುಷ್ಠಕ್ಕೆ ಸಮಸ್ತ ತೀರ್ಥಕ್ಷೇತ್ರ ಸಪ್ತಸಮುದ್ರಂಗಳ ತಿರುಗಿ ಮಿಂದ
ಒಂದು ಕೋಟಿ ಫಲ ಸರಿಯಲ್ಲ.
ಆತನು ಸತ್ಯವೆಂಬ ವೃಕ್ಷವನೇರಿ, ನಿಷ್ಠೆಯೆಂಬ ಕೊನೆಯ ಹಿಡಿದು
ಪರಬ್ರಹ್ಮವೆಂಬ ಫಲವ ಸುವಿವೇಕದಿಂದ ಸವಿದು ಸುಖಿಯಾಗಿರ್ಪನಾಗಿ,
ಆತನು ಪುಣ್ಯಪಾಪವೆಂಬೆರಡರ ಸುಖದುಃಖದವನಲ್ಲ;
ಗತಿ ಅವಗತಿಯೆಂಬೆರಡರ ಮತಿಗೇಡಿಯಲ್ಲ;
ಧರ್ಮ ಕರ್ಮವೆಂಬೆರಡರ ಭ್ರಮೆಯವನಲ್ಲ;
ಆತನ ನಿಲವು ಪುಷ್ಪ ನುಂಗಿದ ಪರಿಮಳದಂತೆ, ಆಲಿಕಲ್ಲು ನುಂಗಿದ ಅಪ್ಪುವಿನಂತೆ,
ಅಗ್ನಿ ಆಹುತಿಗೊಂಡ ಘೃತದಂತೆ, ಕಬ್ಬುನವುಂಡ ನೀರಿನಂತೆ,
ಉರಿಯುಂಡ ಕರ್ಪುರದಂತೆ !
ಆತಂಗೆ ತೋರಲೊಂದು ಪ್ರತಿಯಿಲ್ಲ, ಎಣೆಯಿಲ್ಲ.
ಆತ ನಿತ್ಯ ನಿರಂಜನ ಚಿನ್ಮಯ ಚಿದ್ರೂಪ ನಿಶ್ಚಿಂತ ನಿರಾಳನಯ್ಯಾ.
ಕೂಡಲಚೆನ್ನಸಂಗಮದೇವಾ, ನಿಮ್ಮ ಪ್ರಾಣಲಿಂಗ ಸಂಬಂಧಿಯ ನಿಲವು
ಮಹವ ನುಂಗಿದ ಬಯಲೊ !

1383
ಬಸವಣ್ಣನುದ್ಧರಿಸಿದ ಭಕ್ತಿವಿಡಿದು, ಅಂಗದ ಮೇಲೆ ಲಿಂಗವ ಧರಿಸಿ
ಗುರುಲಿಂಗಜಂಗಮವನಾರಾದಿಸಿ, ಅವರೊಕ್ಕುದ ಕೊಂಡು ಮುಕ್ತರಾಗಲರಿಯದೆ,

Downloaded from: **www.lingayatreligion.com**

ಬೇರೆ ಇದಿರಿಟ್ಟು ನಂದಿ ವೀರಭದ್ರ ಮತ್ತೆ ಕೆಲವು ಲಿಂಗಂಗಳೆಂದು ಪೂಜಿಸುವ
ಲಿಂಗದ್ರೋಹಿಯ ಮುಖವ ನೋಡಲಾಗದು. ಅದೇನು ಕಾರಣವೆಂದಡೆ:
ಗಂಡನುಳ್ಳ ಸತಿ ಅನ್ಯಪುರುಷನನಪ್ಪುವಲ್ಲಿ ಪಾಣ್ಬರಪ್ಪರಲ್ಲದೆ ಸತ್ಯರಪ್ಪರೆರಿ
ಅದು ಕಾರಣ - **ಲಿಂಗವಂತ**ನ ಕೈಯಲ್ಲಿ ಪೂಜಿಸಿಕೊಂಬ ಅನ್ಯಲಿಂಗಂಗಳೆಲ್ಲವು
ಹಾದರಕ್ಕೆ ಹೊಕ್ಕ ಹೊಲೆಗೆಟ್ಟವಪ್ಪುವಲ್ಲದೆ ಅವು ಲಿಂಗಂಗಳಲ್ಲ.
ತನ್ನ ಲಿಂಗದಲ್ಲಿ ಅವಿಶ್ವಾಸವ ಮಾಡಿ ಅನ್ಯಲಿಂಗಂಗಳ ಭಜಿಸುವಲ್ಲಿ
ಆ **ಲಿಂಗವಂತ** ಕರ್ಪ ಕಚ್ಚಿದ ಶ್ವಾನನಪ್ಪನಲ್ಲದೆ ಭಕ್ತನಲ್ಲ. ಅದೆಂತೆಂದಡೆ:
ಲಿಂಗದೇಹೀ ಶಿವಾತ್ಮಾಚ ಸ್ವಗೃಹಂ ಪ್ರತಿಪೂಜನಾತ್ (ಪೂಜನಂರಿ)
ಉಭಯಂ ಪಾಪಸಂಬಂಧಂ ಶ್ವಾನಶ್ವಪಚಪಾದುಕೈಃ - ಎಂದುದಾಗಿ
ಇದುಕಾರಣ, ಈ ಉಭಯವನು ಕೂಡಲಚೆನ್ನಸಂಗಯ್ಯ ಛಿದ್ರಿಸಿ
ಚಿನಿಖಂಡವನಾಯ್ದು ದಿಗ್ಬಲಿ ಕೊಟ್ಟುಅಘೋರ ನರಕದಲ್ಲಿಕ್ಕುವನು

1538
**ಲಿಂಗವಂತ**ನ ಲಿಂಗವೆಂಬುದೆ ಶೀಲ.
**ಲಿಂಗವಂತ**ನ ರಾಣಿವಾಸವ ಲಿಂಗದ ರಾಣಿವಾಸವೆಂಬುದೆ ಶೀಲ.
**ಲಿಂಗವಂತ**ನ ಅರ್ಥ-ಪ್ರಾಣ-ಅಬಿಮಾನಕ್ಕೆ ತಪ್ಪದಿಪ್ಪುದೆ ಶೀಲ.
**ಲಿಂಗವಂತ**ನ ಪಾದೋದಕ-ಪ್ರಸಾದಸೇವೆಯ ಮಾಡುವುದೆ ಶೀಲ.
ಇಂತಪ್ಪ ಶೀಲವೇ ಶೀಲ.
ಉಳಿದ ಶೀಲಕ್ಕೆ ಮೆಚ್ಚುವನೆ ಕೂಡಲಚೆನ್ನಸಂಗಮದೇವ ?

1539
**ಲಿಂಗವಂತ** ಲಿಂಗಪ್ರಾಣಿ ಸರ್ವಾಂಗಲಿಂಗಿ ಎಂಬಿರಿ.
ಭಂಗವಾಯಿತ್ತಲ್ಲಾ ಈ ಮಾತನಾಡಿದಡೆ !
ಕೊಂಬುದು ಪಾದೋದಕ ಪ್ರಸಾದ, ಕಳಚುವುದು ಮಲಮೂತ್ರ.
ಅಂಗ ಸೋಂಕಿದ ಪಾದೋದಕಕ್ಕೀ ವಿದಿ
ಕೂಡಲಚೆನ್ನಸಂಗಯ್ಯನಲ್ಲಿ ಸಂಗಸುಖದ ಪರಿ ಬೇರೆ.

1683
ಹಸಿವು ತೃಷೆ ವಿಷಯವೆಂಬ ಮರಂಗಳನೆ ಕಂಡು,
ಪರಿಣಾಮವೆಂಬ ಕೊಡಲಿಯಲ್ಲಿ ತತ್ತರಿದರಿದು,
ಕಾಮ ಕ್ರೋಧ ಲೋಭ ಮೋಹ ಮದಮತ್ಸರಂಗಳ ತರಿದೊಟ್ಟಿದನೊಂದೆಡೆಯಲ್ಲಿ.
ಪಂಚೇಂದ್ರಿಯ, ಷಡುವರ್ಗ, ಸಪ್ತಧಾತು, ಅಷ್ಟಮದವೆಂಬ ಬಳ್ಳಿಯ ಸೀಳಿ,
ಏಳು ಕಟ್ಟಿನ ಮೋಳಿಗೆಯನೆ ಹೊತ್ತು ನಡೆದನಯ್ಯಾ.
ಆಶೆ ಆಮಿಷ ತಾಮಸವೆಂಬ ತುರಗವನೇರಿ
ಆತುರದ ತುರವನೆ ಕಳೆದನಯ್ಯಾ-ಈ ಮಹಾಮಹಿಮಂಗೆ,
ಜಗದ ಜತ್ತಿಗೆಯ, ಹಾದರಗಿತ್ತಿಯ,
ಹದಿನೆಂಟು ಜಾತಿಯ ಮನೆಯಲ್ಲಿ ತೊತ್ತಾಗಿಹ
ಶಿವದ್ರೋಹಿಯ **ಲಿಂಗವಂತ**ರ ಮನೆಯಲ್ಲಿ ಹೊಗಿಸುವರೆ ?
ಎಲೆ ಲಿಂಗತಂದೆ, ಜಡವಿಡಿದು ಕೆಟ್ಟೆನಯ್ಯಾ, ಭಕ್ತಿಯ ಕುಲವನರಿಯದೆ.
ಎಲೆ ಲಿಂಗದಾಜ್ಞಾಧಾರಕಾ, ಎಲೆ ಲಿಂಗಸನುಮತಾ, ಎಲೆ ಲಿಂಗೈಕಪ್ರತಿಗ್ರಾಹಕಾ.
ಕೂಡಲಚೆನ್ನಸಂಗಯ್ಯನಲ್ಲಿ, ಮೋಳಿಗೆಯ ಮಾರಿತಂದೆಗಳ ಶ್ರೀಪಾದಕ್ಕೆ
ನಮೋ ನಮೋ ಜಯ ಜಯತು.

## 9. ಗಜೇಶ ಮಸಣಯ್ಯ

208
ಈ ಸಕಲದೊಳಗೆ ಒಂದು ಸಯವಿಲ್ಲದೆ
ನಾವು ಹಿರಿಯರು ನಾವು **ಲಿಂಗವಂತ**ರೆಂಬರು.
ಇದಿರ ಕೈಯಲ್ಲಿ ಎನಿಸಿಕೊಳ್ಳುತ್ತಿಹರು ಮನ ನಾಚದೆ.
ಇಂಥ ಮೂಗುನಾಚಿಗಳ ಮೆಚ್ಚುವನೆ
ಮಹಾಲಿಂಗ ಗಜೇಶ್ವರನಲ್ಲಿ
ಎನ್ನ ಹೆತ್ತ ತಂದೆ ಪೂರ್ವಾಚಾರ್ಯ ಸಂಗನಬಸವಣ

## 10. ಹೊಡೆಹುಲ್ಲ ಬಂಕಣ್ಣ

1213
**ಲಿಂಗವಂತ**ರು, ಲಿಂಗಾಚಾರಿಗಳಂಗಣಕ್ಕೆ.
ಲಿಂಗಾರ್ಪಿತ ಭಿಕ್ಷಕ್ಕೆ ಹೋದಲ್ಲಿ, ಲಿಂಗಾರ್ಪಿತವ ಮಾಡುವಲ್ಲಿ,
ಸಂದೇಹವಿಲ್ಲದೆ ಕಾಣದುದನೆಚ್ಚರಿಸದೆ,
ಕಂಡುದ ನುಡಿಯದೆ, ಕಂಡುದನು ಕಾಣದುದನು,
ಒಂದೆಸಮವೆಂದುತಿಳಿಯಬಲ್ಲಡೆ, ಕುಂಭೇಶ್ವರಲಿಂಗವೆಂಬೆನು.

## 11. ಮಡಿವಾಳ ಮಾಚಿದೇವ

439
ಅಂಗದ ಮೇಲೆ ಲಿಂಗವ ಧರಿಸಿ
**ಲಿಂಗವಂತ**ರೆನಿಸಿಕೊಂಬ ಮಹಾ**ಲಿಂಗವಂತ**ರು ನೀವು ಕೇಳಿರೊ.
ಮನೆಗೊಂದು ದೈವ, ನಿಮಗೊಂದು ದೈವ.
ನಿಮ್ಮಂಗನೆ ಅನ್ಯದೈವಕ್ಕೆಂದು ನಿಯಾಮಿಸಿ ಮಾಡಿದ ಪಾಕವ,
ನಿಮ್ಮ ಇಷ್ಟಲಿಂಗಕ್ಕೆ ಕೊಟ್ಟು ಭುಂಜಿಸುತ್ತಿರ್ದು,
ಮತ್ತೆ ಮರಳಿ **ಲಿಂಗವಂತ**ರೆನಿಸಿಕೊಂಬ ಲಿಂಗದ್ರೋಹಿಗಳಿಗೆ
ಕುಂಭೀಪಾತಕ, ನಾಯಕನರಕ ತಪ್ಪದೆಂದ ಕಲಿದೇವಯ್ಯ.

449
ಅಕ್ಕರ ಗಣಿತ ಗಾಂಧರ್ವ ಜ್ಯೋತಿಷ ಆತ್ಮವಿದ್ಯೆ ತರ್ಕ ವ್ಯಾಕರಣ
ಅಮರಸಿಂಹ ಛಂದಸ್ಸು ನಿಘಂಟು ಶಾಲಿಹೋತ್ರ ಗ್ರಹವಾದ ಗಾರುಡ
ದ್ಯೂತ ವೈದಿಕಶಾಸ್ತ್ರ, ಸಾಮುದ್ರಿಕಶಾಸ್ತ್ರ, ಲಕ್ಷಣಶಾಸ್ತ್ರ, ಅಶ್ವಶಿಕ್ಷೆ
ಗಜಶಿಕ್ಷೆ ಗೋಕರ್ಣ ದಾಡಾಬಂಧ ಮೂಲಿಕಾಸಿದ್ಧಿ ಭೂಚರತ್ವ
ಖೇಚರತ್ವ ಅತೀತ ಅನಾಗತ ವರ್ತಮಾನ ಸ್ಥೂಲ ಸೂಕ್ಷ್ಮ
ಇಂದ್ರಜಾಲ ಮಹೇಂದ್ರಜಾಲ ವಡ್ಯಾನಚೇಷ್ಟೆ ಪರಕಾಯಪ್ರವೇಶ
ದೂರದೃಷ್ಟಿ ದೂರಶ್ರವಣ ಋಗ್ಯಜುಃಸಾಮಾಥರ್ವಣ ಶ್ರುತಿಸ್ಮೃತಿ
ಆಯುರ್ದಾಯ ನಷ್ಟಿಕಾಮುಷ್ಟಿಚಿಂತನೆ ಚೋರವಿದ್ಯೆ ಅಮೃತೋದಯ
ಭಾಷಾಪರೀಕ್ಷೆ ವೀಣಾವಿದ್ಯೆ ಭೃಂಗಿವಿದ್ಯೆ ಮಲ್ಲವಿದ್ಯೆ ಶಸ್ತ್ರವಿದ್ಯೆ
ಧನುರ್ವಿದ್ಯೆ ಅಗ್ನಿಸ್ತಂಭ ಜಲಸ್ತಂಭ ವಾಯುಸ್ತಂಭ ವಾದವಶ್ಯ
ಅಂಜನಾಸಿದ್ಧಿ ಘುಟಿಕಾಸಿದ್ಧಿ ಮಂತ್ರತಂತ್ರಸಿದ್ಧಿ
ಇವೆಲ್ಲವ ಕಲಿತಡೇನು ಅರುವತ್ನಾಲ್ಕು ವಿದ್ಯಾಪ್ರವೀಣನೆನಿಸಿಕೊಂಬನಲ್ಲದೆ
**ಲಿಂಗವಂತ**ನೆನಿಸಿಕೊಂಬುದಿಲ್ಲ. ಲಿಂಗವುಳ್ಳ ಶಿವಭಕ್ತಂಗೆ

Downloaded from: **www.lingayatreligion.com** 

ಇವರೆಲ್ಲರೂ ಕೂಡಿ ಸರಿಬಾರದೆಂದ ನಮ್ಮ ಕಲಿದೇವರದೇವ.

503
ಆ ಮಹಾ **ಲಿಂಗವಂತ**ನೊಬ್ಬನುಂಡನೆನಬೇಡ.
ಆತನ ದಂತಂಗಳೆಲ್ಲ ಪಂತಿಕಾರರು.
ಆತನ ನಡುವಿಪ್ಪ ಕಾಂತಿರೂಪ ನೀನು ಕಾಣಾ, ಕಲಿದೇವಯ್ಯ.

514
ಈರೇಳುಭುವನಕ್ಕೆ ಕರ್ತನೊಬ್ಬನೆಂಬ ಆದಿಯನರಿಯದೆ,
**ಲಿಂಗವಂತಂಗೆ** ಸೂತಕವೆಂಬ ನುಡಿಯ ಕೇಳಲಾಗದು.
ಸತ್ತ ಕೋಣ ಕುರಿ ಕೋಳಿ ತಿಂಬ
ಭೂತಪ್ರೇತ ದೈವದೆಂಜಲು ಭುಂಜಿಸುವವಗೆ,
ಏಳೇಳುಜನ್ಮ ನರಕ ತಪ್ಪದೆಂದ ಕಲಿದೇವರದೇವಯ್ಯ.

637
ನಮಗೆ ಲಿಂಗವುಂಟು,
ನಾವು **ಲಿಂಗವಂತ**ರೆಂದು ನುಡಿವರು.
ಮತ್ತೆ ಮರಳಿ ಭವಿಶೈವದೈವಂಗಳಿಗೆರಗುವ
ಈ ಮಂಗಮಾನವರನೇನೆಂಬೆನಯ್ಯಾ,
ಕಲಿದೇವಯ್ಯ.

724
ಲಿಂಗೈಕ್ಯ **ಲಿಂಗವಂತ** ಲಿಂಗಪ್ರಾಣಿ ಪ್ರಾಣಲಿಂಗಿಗಳೆಂದೆನಬಹುದು.
ಉದಯಕಾಲ ಮಧ್ಯಾಹ್ನ ಕಾಲ ವಿಚಿತ್ರಕಾಲ ತ್ರಿಕಾಲ
ಲಿಂಗಾರ್ಚಕರೆಂದೆನಬಹುದು, ಎನಬಹುದು.
ಹೊನ್ನು ಹೆಣ್ಣು ಮಣ್ಣು ತ್ರಿವಿಧವ ತೋರಿದ
ನಿಷ್ಪೃಹರೆಂದೆನಬುಹುದು, ಎನಬಹುದು.
ಧಾರಣೆ ಪಾರಣೆ ಒಡಲ ದಂಡಣೆ ಕರಣ ದಂಡಣೆ
ಉಳ್ಳವರೆಂದೆನಬಹುದು.
ಶೀಲವಂತರು ಸಂಬಂಧಿಗಳು ಒರತೆಯಗ್ಘ[ವ]ಣಿಯ
ನೇಮಿಗಳೆಂದೆನಬುಹು, ಎನಬಹುದು.
ನೇಮ ವ್ರತ ಪಾಕದ್ರವ್ಯವ ಒಲ್ಲೆವೆಂದೆನಬಹುದು, ಎನಬಹುದು.
ಶುದ್ಧಶೈವ ಪೂರ್ವಶೈವ ವೀರಶೈವವೆಂದೆನಬುಹುದು, ಎನಬಹುದು.
ಸರವೇದಿಗಳು ಶಬ್ದವೇದಿಗಳು
ಮಹಾನುಭಾವಿಗಳೆಂದೆನಬಹುದು, ಎನಬಹುದು.
ಇಂತಿವರೆಲ್ಲರೂ
ಶಿವಪಥದೊಳಗೆ ಮಾಡುತ್ತ ಆಡುತ್ತ ಇದ್ದರಲ್ಲದೆ
ಒಂದರ ಕುಳವು ತಿಳಿಯದು ನೋಡಾ.
ಆ ಒಂದು ದಾಸೋಹದಲ್ಲಿ ಬಸವಣ್ಣ ಸ್ವತಂತ್ರ.
ಆ ಲಿಂಗವು ಬಸವಣ್ಣನ ಒಡನೊಡನೆ ಆಡುತಿರ್ದನು ನೋಡಾ.

Downloaded from: **www.lingayatreligion.com** 

## 12. ಮನುಮುನಿ ಗುಮ್ಮಟದೇವ

1020
ಆರೂ ಇಲ್ಲದ ಮನೆಯಲ್ಲಿ ಹಾದರಿಗ ಹೊಕ್ಕು,
ಹೆಂಡತಿಯಿಲ್ಲದ ಪುಂಡ ಬಂದು ಅವನಂಗವ ಹೊಯ್ಯಲಾಗಿ,
ಕಂಡರು ಗ್ರಾಮದ ಪುಂಡೆಯರೆಲ್ಲರೂ ಕೂಡಿ.
ಮಿಂಡನೊಬ್ಬನೆ ಸತ್ತ.
ಅಂಗವಿಲ್ಲದ ಕಳವು, ಹೆಂಗೂಸು ಇಲ್ಲದ ಹಾದರ,
ಈ ಊರ ಅಂಗವಲ್ಲಾ ಎಂದು, **ಲಿಂಗವಂತ**ರೆಲ್ಲರೂ ಕೂಡಿ
ಕೊಂಡಾಡುತ್ತಿದ್ದುದ ಕಂಡೆ.
ಗೂಡಿನ ಗುಮ್ಮಟನಾಥನ ಒಡೆಯ ಅಗಮ್ಯೇಶ್ವರಲಿಂಗದಲ್ಲಿ,
ನಂಬಲರಿಯದ ಸಂದೇಹಿಗಳಿಗುಂಟೆ ಮಹಾಸಂಗದ ಕೂಟ ?

## 13. ಮರುಳಶಂಕರದೇವ

1093
ಆಯತದಲ್ಲಿ ಅಂಗಭೋಗಿಯಾಗಿರಬೇಕು.
ಸ್ವಾಯತದಲ್ಲಿ ಸನ್ನಹಿತನಾಗಿರಬೇಕು.
ಸನ್ನಹಿತದಲ್ಲಿ ಸದಾಚಾರಿಯಾಗಿರಬೇಕು.
ಇಂತೀ ತ್ರಿವಿಧದಲ್ಲಿ ಏಕವಾಗಿರಬಲ್ಲಡೆ,
ಅದು ವರ್ಮ, ಅದು ಸಂಬಂಧ, ಅದು ನಿಯತಾಚಾರವೆಂದೆಂಬೆನು.
ಅದಲ್ಲದೆ ಲಿಂಗವ ಮರೆದು, ಅಂಗ[ವ]ಭೋಗಿಸಿ,
ಅಂಗಸಂಗದಲ್ಲಿರ್ದು, ಅಂಗವೆ ಪ್ರಾಣವಾಗಿಹರಿಗೆಲ್ಲರಿಗೆಯೂ
ಲಿಂಗದ ಶುದ್ಧಿ ನಿಮಗೇಕೆ ಕೇಳಿರಣ್ಣಾ.
**ಲಿಂಗವಂತ**ನು ಅಂಗಸೂತಕಿಯಲ್ಲ.
ಅಲಗಿನ ಕೊನೆಯ ಮೊನೆಯ ಮೇಲಣ ಸಿಂಹಾಸನದ ಮೇಲೆ
ಲಿಂಗದ ಪ್ರಾಣವ ತನ್ನಲ್ಲಿ ಕೂಡಿಕೊಂಡು,
ತನ್ನ ಪ್ರಾಣವ ಲಿಂಗದಲ್ಲಿ ಕೂಡಿಕೊಂಡು,
ಏಕಪ್ರಾಣವ ಮಾಡಿಕೊಂಡಿಪ್ಪ ಶರಣನ ಜ್ಯೋತಿರ್ಮಯನೆಂಬೆನು,
ಜಗದ ಕರ್ತನೆಂಬೆನು, ಜಗದಾರಾಧ್ಯನೆಂದೆಂಬೆನು ಕಾಣಾ,
ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ.
ನಿಮ್ಮ ಸಂಗಿಯ ನಿಲವಿನ ಪರಿಯ ನೀವೇ ಬಲ್ಲಿರಲ್ಲದೆ,
ನಾನೆತ್ತ ಬಲ್ಲೆನಯ್ಯಾ, ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ.

1095
ಇಷ್ಟಲಿಂಗಕ್ಕೊಂದು ಕಷ್ಟ ಬಂದಿತ್ತೆಂದು ಮುಟ್ಟಲಾಗದು.
ಇನ್ನು ಕೆಟ್ಟೆನೆಂಬ ಪಾಪಿಗಳು ನೀವು ಕೇಳಿರೆ.
ಇಷ್ಟಲಿಂಗ, ಪ್ರಾಣಲಿಂಗದ ಆದಿ ಅಂತುವನಾರುಬಲ್ಲರು ?
ಹೃದಯಕಮಲ ಭ್ರೂಮಧ್ಯದಲ್ಲಿ[ಯ] ಸ್ವಯಂಜ್ಯೋತಿಯ ಪ್ರಕಾಶ[ನು]
ಆದಿ ಮಧ್ಯಸ್ಥಾನದಲ್ಲಿ ಚಿನ್ಮಯ ಚಿದ್ರೂಪನಾಗಿಹ.
ಇಂತಪ್ಪ ಮಹಾಘನವ ಬಲ್ಲ ಶರಣನ ಪರಿ ಬೇರೆ.
ಇಷ್ಟಲಿಂಗ ಹೋದ ಬಟ್ಟೆಯ ಹೊಗಲಾಗದು.

Downloaded from: **www.lingayatreligion.com**

ಈ ಕಷ್ಟದ ನುಡಿಯ ಕೇಳಲಾಗದು.
ಕೆಟ್ಟಿತ್ತು ಜ್ಯೋತಿಯ ಬೆಳಗು, ಅಟ್ಟಾಟಿಕೆಯಲ್ಲಿ ಅರಿವುದೇನೊ ?
ಆಲಿ ನುಂಗಿದ ನೋಟದಂತೆ, ಪುಷ್ಪ ನುಂಗಿದ ಪರಿಮಳದಂತೆ,
ಜಲ ನುಂಗಿದ ಮುತ್ತಿನಂತೆ, ಅಪ್ಪುವಿನೊಳಗಿಪ್ಪ ಉಪ್ಪಿನಂತೆ,
ಬೀಜದೊಳಗಿಪ್ಪ ವೃಕ್ಷದಂತೆ, ಶಬ್ದದೊಳಗಿನ ನಿಃಶಬ್ದದಂತೆ,
ಬಯಲ ನುಂಗಿದ ಬ್ರಹ್ಮಾಂಡದಂತೆ, ಉರಿವುಂಡ ಕರ್ಪುರದಂತೆ.
ಇಂತಪ್ಪ ಮಹಾಘನ ತೇಜೋಮೂರ್ತಿಯ ನಿಲವ ಬಲ್ಲ
ಮಹಾಶರಣನ ಮನೆಯ ಎತ್ತು ತೊತ್ತು ಮುಕ್ಕಳಿಸಿ
ಉಗುಳುವ ಪಡುಗ, ಮೆಟ್ಟುವ ಚಮ್ಮಾವುಗೆಯಾಗಿ ಬದುಕಿದೆನಯ್ಯಾ.
ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ,
ನಿಮ್ಮ **ಲಿಂಗವಂತ**ನ ನಿಲವಿನ ಪರಿಯ ನೀವೆ ಬಲ್ಲಿರಲ್ಲದೆ
ನಾನೆತ್ತ ಬಲ್ಲೆನಯ್ಯಾ, ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ.

1096
ಇಷ್ಟಲಿಂಗಾರ್ಪಿತಂ ಪ್ರಾಣಂ ತೃಪ್ತಿಲಿಂಗಾರ್ಪಿತಾ ಭವೇತ್
ಅಂಗಾಂಕಿತ ಲಿಂಗಾಂಗಿನಾಂ ತ್ರಿವಿಧಂ ಲಿಂಗಮುಚ್ಯತೇ ||
ಇಂತೆಂದುದಾಗಿ,
ಲಿಂಗಕ್ಕೂ ತನಗೂ ಎಡೆದೆರಹಿಲ್ಲದಿಪ್ಪ,
ಲಿಂಗಸಹಿತವಾಗಿಯೆ ಕೇಳುವ,
ಲಿಂಗಸಹಿತವಾಗಿಯೆ ನೋಡುವ,
ಲಿಂಗಸಹಿತವಾಗಿಯೆ ರುಚಿಸುವ,
ಲಿಂಗಸಹಿತವಾಗಿಯೆ ಸಂಗವ ಮಾಡುವ,
ಲಿಂಗಸಹಿತವಾಗಿಯೆ ಅಳಲುವ,
ಲಿಂಗಸಹಿತವಾಗಿಯೆ ಬಳಲುವ,
ಲಿಂಗಸಹಿತವಾಗಿಯೆ ತೊಳಲುವ.
ಇಂತಪ್ಪ ಮಹಾಮಹಿಮ **ಲಿಂಗವಂತ**ನ
ಅಂಗಕ್ರಿಯೆಗಳಲ್ಲಿ ಲಿಂಗಕ್ರಿಯೆಗಳಾದವು.
ಅಂಗಸಂಗವೆಲ್ಲ ಲಿಂಗಸಂಗವಾದವು.
ಅಂಗಭೋಗವೆಲ್ಲ ಲಿಂಗಭೋಗವಾದವು.
ಇಂತಪ್ಪ ಮಹಾಮಹಿಮ **ಲಿಂಗವಂತ**ನ ಚರಣಕ್ಕೆ
ಎನ್ನ ಶಿರವನರಿದು ಪೂಜಿಸುವೆ ಕಾಣಾ,
ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ.
ನಿಮ್ಮ **ಲಿಂಗವಂತ**ನ ನಿಲವಿನ ಪರಿಯ ನೀವೆ ಬಲ್ಲಿರಲ್ಲದೆ
ನಾನೆತ್ತ ಬಲ್ಲೆನಯ್ಯಾ, ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ.

1115
**ಲಿಂಗವಂತ**ನ ನಿಲವು ಸಂಗಸೂತಕಿಯಲ್ಲ.
ಕಂಗಳ ಕಳೆಯ ಬೆಳಗಳಿದು ಉಳಿದಾತ ಅಂಗಲಿಂಗೈಕ್ಯ ಕಾಣಾ,
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ.
ನಿಮ್ಮ **ಲಿಂಗವಂತ**ನ ನಿಲುವಿನ ಪರಿಯ ನೀವೆ ಬಲ್ಲಿರಲ್ಲದೆ
ನಾನೆತ್ತ ಬಲ್ಲೆನಯ್ಯಾ, ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ.

1116
**ಲಿಂಗವಂತ** ಲಿಂಗಭಕ್ತ ಲಿಂಗಾಚಾರಿಯೆನಿಸಿಕೊಂಡ ಬಳಿಕ,
ಲಿಂಗದ ನಚ್ಚು, ಲಿಂಗದ ಮಚ್ಚು, ಲಿಂಗವೇ ಪ್ರಾಣವಾಗಿರಬೇಕಲ್ಲದೆ,

Downloaded from: **www.lingayatreligion.com** 

ಮತ್ತೆ ತಪ್ಪಿ ನಡೆದು, ತಪ್ಪಿ ನುಡಿದು, ಪರಧನ ಪರಸ್ತ್ರೀಯರ ಸಂಗವ ಮಾಡಿ,
ದುರ್ಗುಣ ದುರಾಚಾರದಲ್ಲಿ ನಡೆದು,
ಮತ್ತೆ ತಾವು **ಲಿಂಗವಂತ**ರೆನಿಸಿಕೊಂಬ ಪರಿಯ ನೋಡಾ.
ಇದು ಲಿಂಗದ ನಡೆಯಲ್ಲ, ಲಿಂಗದ ನುಡಿಯಲ್ಲ.
ಇದ ನಮ್ಮ ಶಿವಶರಣರು ಮೆಚ್ಚರು.
**ಲಿಂಗವಂತ**ನ ಪರಿ ಬೇರೆ ಕಾಣಿರೆ.
ಲಿಂಗಕ್ಕೆ ಲಿಂಗವೆ ಪ್ರಾಣವಾಗಿರಲು ಬಲ್ಲ.
ಲಿಂಗಕ್ಕೆ ಲಿಂಗವೆ ಭೋಗವಾಗಿರಲು ಬಲ್ಲ.
ಲಿಂಗಕ್ಕೆ ಲಿಂಗವೆ ಸಂಗವಾಗಿ[ರಲು]ಬಲ್ಲ,
ಇಂತಪ್ಪ **ಲಿಂಗವಂತ**ನ ಸದಾಚಾರಿಯೆಂಬೆನು.
ಇಂತಪ್ಪ **ಲಿಂಗವಂತ**ನ ಸರ್ವಾಂಗಲಿಂಗಿಯೆಂಬೆನು.
ಇಂತಪ್ಪ **ಲಿಂಗವಂತ**ನ ಸರ್ವಕರಣ ನಿಮರ್ುಕ್ತನ
ಸರ್ವನಿರ್ವಾಣಿಕಾಯೆಂಬೆನು.
ಇಂತಪ್ಪ ಮಹಾಮಹಿಮನ ನಿಲವು ಎಲಗಳೆದ ವೃಕ್ಷದಂತೆ,
ಉಲುಹಡಗಿಪ್ಪ ಶರಣನ ಪರಿಯ ನೀವೇ ಬಲ್ಲಿರಲ್ಲದೆ,
ಮತ್ತೆ ಉಳಿದಾದ ಅಜ್ಞಾನ ಸಂದೇಹಿಮಾನವರೆತ್ತ ಬಲ್ಲರಯ್ಯಾ.
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ
ನಿಮ್ಮ ಲಿಂಗಾವಧಾನಿಯ ಪರಿಯ ನೀವೇ ಬಲ್ಲಿರಲ್ಲದೆ
ನಾನೆತ್ತ ಬಲ್ಲೆನಯ್ಯಾ, ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ.

1118
ಶೀಲದ ತುದಿಯ ಮೊದಲನರಿಯದೆ, ವ್ರತದಾಚರಣೆಯ ಕ್ರಮವನರಿಯದೆ,
ಆಚಾರದ ನೆಲೆಯನರಿಯದೆ, ಬರಿದೆ ವ್ರತ ಶೀಲಾಚಾರವೆಂದೆಂಬಿರಿ.
ವ್ರತಶೀಲಾಚಾರದ ಸ್ವರೂಪವನರಿಯದ,
ಅದರಾಚರಣೆಯನರಿಯದ ಶೀಲವಂತರು ನೀವು ಕೇಳಿ ಭೋ.
ತನುವಿನ [ಗುಣವ] ಮನದಲ್ಲಿಗೆ ತಂದು, ಆ ಮನದ ಅನುವನರಿದು,
ಶುಚಿ ಶೀಲ ಉಚ್ಯತೆಯೆಂದುದಾಗಿ, ಸಚ್ಚರಿತ್ರವನುಳ್ಳ ಆಚಾರವೆ ಸ್ವರೂಪವಾದ
ಘನಲಿಂಗವ ಬೆರಸಬಲ್ಲಡೆ ಅದು ಶೀಲ.
ಮನದ ತನುವ ಮಹಾಘನದರುವಿನಲ್ಲಿಗೆ ತಂದು
ಅರಿವಿನ ಆಚಾರವೆ ಗುರುಲಿಂಗಜಂಗಮ ಪ್ರಸಾದ ಪಾದತೀರ್ಥ
ಭಕ್ತಿ ಎಂದರಿದು, ಅವರ ಸ್ವರೂಪವನರಿದು, ಆಚರಿಸಿದ ಘನ ಶರಣರ
ಬೆರಸಬಲ್ಲಡೆ ಅದು ವ್ರತ.
ಸದಾಚಾರ ನಿಯತಾಚಾರ,
ಭಕ್ತ್ಯಾಚಾರ ಶಿವಾಚಾರ ಸಮಯಾಚಾರ ಗಣಾಚಾರವೆಂಬವುಗಳ
ಸ್ವರೂಪವನರಿದು ಆಚರಿಸಬಲ್ಲಡೆ ಅದು ಆಚಾರ.
ವ್ರತ ಶೀಲಾಚಾರದ ಅನುವನರಿಯದೆ,
ಘನ ಶರಣರ ಬೆರಸದೆ,
ತನುಮನಧನವ ಗುರುಲಿಂಗಜಂಗಮಕ್ಕೆ ಸವೆಸದೆ
ಬರಿದೆ ಅನುವಿನ ತನುವಿನ ಕೊನೆಯ ಮೊನೆಯ ಮೇಲಣ ಜ್ಯೋತಿಯ
ತಮ ತಮಗೆ ಅರಿದೆಹೆನೆಂಬವರೆಲ್ಲರೂ
ಅನುಮಾವನನರಿಯದೆ ಕೆಟ್ಟರು ಕಾಣಾ,
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ
ಶಾಂತಚೆನ್ನಮಲ್ಲಿಕಾರ್ಜುನ ದೇವಯ್ಯಾ.
ನಿಮ್ಮ ಶರಣರ ಅನುವನರಿದು, ಘನವ ಬೆರಸಬಲ್ಲ

ಶರಣ ಸಂಗನಬಸವಣ್ಣನು, ಇಂತಪ್ಪ ಮಹಾ**ಲಿಂಗವಂತ**ರ
ನಿಲವಿನ ಪರಿಯ ನೀವೇ ಬಲ್ಲಿರಲ್ಲದೆ, ನಾನೆತ್ತ ಬಲ್ಲೆನಯ್ಯಾ ?
ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ.

## 14. ಮೋಳಿಗೆ ಮಾರಯ್ಯ

1424
ಅಂಗ **ಲಿಂಗವಂತ**ವಾದ ಮತ್ತೆ
ಮುಟ್ಟುವ ತಟ್ಟುವ, ಸೋಂಕಿನಲ್ಲಿ ಸುಳಿವ,
ಇದಿರಿಟ್ಟು ಬಂದ ಪದಾರ್ಥವ
ಅಂಗಲಿಂಗಕ್ಕೆ ಕೊಟ್ಟುಕೊಳಬೇಕು.
ಪ್ರಾಣಲಿಂಗವಾದ ಮತ್ತೆ ಕರಣಂಗಳಿಗಿಂಬುಗೊಡದಿರಬೇಕು.
ತನ್ನನರಿದುದಕ್ಕೆ ಉಭಯಾರೂಢನಾಗಿರಬೇಕು.
ಉಭಯವೇಕವಾದ ಮತ್ತೆ ಸಾಕು ಸತ್ಕ್ರಿಯೆ, ನಿಃಕಳಂಕ ಮಲ್ಲಿಕಾರ್ಜುನಾ

1744
ಗುರುಸ್ಥಲ ಮೂರಾಗಿ ನಡೆವ ಭೇದವನಾರೂ ಅರಿಯರಲ್ಲಾ.
ಭವಿಗೆ ಲಿಂಗವ ಕೊಡುವಲ್ಲಿ, **ಲಿಂಗವಂತಂಗೆ** ಹರರೂಪ ಮಾಡುವಲ್ಲಿ,
ಹರರೂಪಿಂಗೆ ಅರಿವ ಹೇಳುವಲ್ಲಿ, ತ್ರಿವಿಧ ಗುರುರೂಪಾಯಿತ್ತು.
ಅಂಗಕ್ಕೆ ಲಿಂಗವ ಕೊಡುವಲ್ಲಿ, ಜಂಗಮಸ್ಥಲವ ಮಾಡುವಲ್ಲಿ,
ಆತ್ಮಬೋಧನೆಯ ಹೇಳುವಲ್ಲಿ, ಲಿಂಗಕ್ಕೆ ಆಚಾರ,
ಸಮಯಕ್ಕೆ ದರಿಸಿನ, ಆತ್ಮಕ್ಕೆ ಬೋಧೆ,
ಇಂತಿವನಾಧರಿಸಿ ಮಾಡಬೇಕು, ನಿಃಕಳಂಕ ಮಲ್ಲಿಕಾರ್ಜುನಾ.

1493
ಆಕಾಶ ಸತ್ತಿತ್ತು, ಬಯಲು ಅತ್ತಿತ್ತು, ವಾಯು ಹೊತ್ತಿತ್ತು,
ಬೆಂಕಿ ಸತ್ತ ಠಾವಿನಲ್ಲಿ ಸುಟ್ಟಿತ್ತು.
ಕೈಯಿಲ್ಲದ ಮೋಟ ಹಿಡಿ ಖಂಡವ ಕೊಯ್ದ.
ನಾಲಗೆಯಿಲ್ಲದೆ ಬಾಯಲ್ಲಿ ಮೆದ್ದ,
ಪರಿಣಾಮವಿಲ್ಲದ ಸಂತೋಷಿಯಾದನಯ್ಯಾ, ಆ ಶರಣ.
ಆತನ ಇರವು, ಇಹದಲ್ಲಿ ಅಜ್ಞಾನಿ, ಪರದಲ್ಲಿ ಸುಜ್ಞಾನಿ.
ಇಹಪರವೆಂಬ ಸಂದನಳಿದಲ್ಲದೆ **ಲಿಂಗವಂತ**ನಲ್ಲ.
ಲಿಂಗ ಪ್ರಾಣದ ಮೇಲೆ ನಿಂದುದಕ್ಕೆ ಸಾಕ್ಷಿ
ಉರಿ ಕೊಂಡ ಕರ್ಪುರದಂತೆ, ವಿಷ ಕೊಂಡ ಘಟದಂತೆ
ಘಟ ಕೊಂಡ ಸೂತ್ರದಂತೆ, ಶೌರ್ಯ ಕೊಂಡ ಪ್ರತಾಪದಂತೆ.
ಹಾಂಗಿರಬೇಕು ಮನ.
ಲಿಂಗ ಕೊಂಡ ಮನಕ್ಕೆ ಇದೇ ದೃಷ್ಟ,
ನಿಃಕಳಂಕ ಮಲ್ಲಿಕಾರ್ಜುನನಲ್ಲಿ ಸ್ವಾನುಭಾವಿಗೆ.
ಮೋಳಿಗೆ ಮಾರಯ್ಯ

Downloaded from: **www.lingayatreligion.com**

## 15. ನಿಜಗುರು ನಿರಾಲಂಬಪ್ರಭುವೆ

1331
ಮತ್ತಂ ಸಾಕ್ಷಿ :ಅಪ್ಪಯ್ಯ ಗುರುರಾಯ ಕೇಳು : ಜಂಗಮ ಜಗಭರಿತನೆಂದು
ಮಂಗಲಸ್ವರೂಪನಾದ ಆದಿಬಸವೇಶ್ವರನು
ಅನಾದಿ ಸಂಗಮೇಶ್ವರನೊಳಗಾಗಿ ಕೂಗುತಿರ್ಪನಲ್ಲದೆ,
ಈ ಭಂಗೇಡಿಗಳಾದ ಮಂಗಮನುಜರಿಗೆ ಎಚ್ಚರವಿಲ್ಲದೆ ಹೋಯಿತು.
ತಮ್ಮಂಗದ ಮೇಲೆ ಲಿಂಗವಿರುತಿರಲು, ಪ್ರಾಣಲಿಂಗದ ಹೊಲಬನರಿಯದೆ
ಜಂಗಮನಿಂದೆಯ ಮಾಡುತಿರ್ಪರಯ್ಯಾ,
**ಲಿಂಗವಂತ**ರೆಂದು ಹೇಳಿಕೊಂಬುತಿಪ್ಪರಯ್ಯಾ.
ಅಯ್ಯಾ ಗುರುರೂಪವಾದುದ, ಲಿಂಗಪ್ರತಾಪವಾದುದ,
ಜಂಗಮನಿರೂಪವಾದುದ
ಅನಂಗಸಂಗಿ ಸಂಗನಬಸವೇಶ್ವರನು ಬಲ್ಲನಯ್ಯಾ, ಅರಿದಿಪ್ಪನಯ್ಯಾ.
ಈ ಅಂಗವಿಕಾರಗೇಡಿಗಳ ಲಿಂಗಭಕ್ತರೆಂದು ಅಜ್ಞಾನ ಜಂಗಮವ ನಂಬಲು,
ಪಂಗಳನ ಕೈಯ ಅಂಧಕನು ಹಿಡಕೊಂಡು ಹಾಳುಗುಂಡಿಯ ಬಿದ್ದಂತಲ್ಲವೆ.
ಹಿಂಗಾರಿ ಮುಂಗಾರಿ ಬೆಳೆಯುವುದೆಂತಯ್ಯಾ.
ನಿಮ್ಮಂಗದೊಡಲದುರಿ ತಾಪಮಂ,
ವೀರಮಾಹೇಶ್ವರನೆಂಬ ವೀರಘಂಟೆ ಮಡಿವಾಳಪ್ಪಯ್ಯನು
ಕಾರಣಾಂಗದಲ್ಲಿ ಕಠೋರ ವಾಕ್ಯವನು,
ಜಂಗಮವು ಜಗದಾರಾಧ್ಯನೆಂದು ಮೇಂಗುಡಿ ಎತ್ತಿರ್ಪನಲ್ಲದೆ
ಈ ಜಂಗುಳಿದೈವ ನೀಚಾತ್ಮರಿಗೆ
ಸಂಗಸಮರಸಭಾವ ಅರಿಯದೆ ಹೋಯಿತ್ತಯ್ಯಾ.
ಅಪ್ಪಯ್ಯಾ ಗುರು ಶಂಭುಲಿಂಗವೆ, ನಿಜಗುರು ನಿರಾಲಂಬಪ್ರಭುವೆ.

## 16. ಸಕಲೇಶ ಮಾದರಸ

412
ಕಾಯದ ಕಳವಳದಲ್ಲಿ ಹುಟ್ಟಿ, ಸಂಸಾರವನೆ ತೊರೆದು,
ಲಿಂಗಮುಖವರಿಯದವರೆಲ್ಲಾ ಅಂತಿರಲಿ ಅಂತಿರಲಿ.
ಬ್ರಹ್ಮೋಪದೇಶವನೆ ಕೊರಳಲ್ಲಿರಿಸಿಕೊಂಡು,
ವಿಷಯಾದಿಗಳ ಕೊಂಡಾತನಂತಿರಲಿ, ಅಂತಿರಲಿ.
ಪಂಚಮಹಾವೇದಶಾಸ್ತ್ರವನೋದಿ,
ಲಿಂಗವುಂಟು ಇಲ್ಲಾಯೆಂಬ ಶ್ವಾನರಂತಿರಲಿ, ಅಂತಿರಲಿ.
ತನುವ ಹೊತ್ತು ತೊಳಲಿ ಬಳಲುವ
ಕಾಲವಂಚಕ ಯೋಗಿಗಳೆಲ್ಲಾ ಅಂತಿರಲಿ, ಅಂತಿರಲಿ.
ಪಂಚಮಹಾಶೈವರು ಭ್ರಷ್ಟರಾಗಿಹೋದರು.
ಎಂತು **ಲಿಂಗವಂತಂಗೆ** ಸರಿಯೆಂಬೆ ?
ಅದ್ವೈತಿಗಳೆಲ್ಲಾ ಲಿಂಗಾರಾಧನೆ ಹುಸಿಯೆಂದು,
ಬುದ್ಧಿ ತಪ್ಪಿ, ಗಮನಗೆಟ್ಟುಹೋದರು.
ಅದೃಶ್ಯಂ ಭಾವನೋ ನಾಸ್ತಿ ದೃಶ್ಯಮೇವ ವಿನಶ್ಯತಿ |
ಸದ್ಬ್ರಹ್ಮಂ ತು ನಿರಾಕಾರಂ, ತಥ್ಯಂ ಧ್ಯಾಯಂತಿ ಯೋಗಿನಃ ||

Downloaded from: **www.lingayatreligion.com**

ಎಂದುದಾಗಿ, ಬ್ರಾಹ್ಮಣನೆಂದಡೆ
ಬ್ರಹ್ಮನ ಶಿರವ ದಂಡವ ಕೊಂಡರು.
ಬ್ರಹ್ಮಾದಿಗಳು ಲಿಂಗಕ್ಕೆ ದೂರವಾಗಿ ಹೋದರು.
ಅಹಮಿಲ್ಲದ ಕಾರಣ, ಸಕಳೇಶ್ವರದೇವಯ್ಯಾ,
ನಿಮ್ಮ ಶರಣರು ಜಗವಂದಯರಾದರು.

## 17. ಸಿದ್ಧರಾಮೇಶ್ವರ

1890
**ಲಿಂಗವಂತ**ರು ತಾವಾದ ಬಳಿಕ,
ಅಂಗನೆಯರ ನಡೆನುಡಿಗೊಮ್ಮೆ
ಲಿಂಗದ ರಾಣಿಯರೆಂದು ಭಾವಿಸಬೇಕು.
**ಲಿಂಗವಂತ**ರು ತಾವಾದ ಬಳಿಕ,
ಅನುಭವ ವಚನಗಳ ಹಾಡಿ
ಸುಖದುಃಖಗಳಿಗಭೇದ್ಯವಾಗಿರಬೇಕು.
**ಲಿಂಗವಂತ**ರು ತಾವಾದ ಬಳಿಕ,
ಜಂಗಮವ ಪೂಜಿಸಿ ಸದಾ ಲಿಂಗೈಕ್ಯಸುಖಿಗಳಾಗಿರಬೇಕು
ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ.

1891
ಸರ್ವರು **ಲಿಂಗವಂತ**ರೆಂದು ಮನದಲ್ಲಿ ಭಾವಿಸಿ
ನಡೆಯಬೇಕಲ್ಲದೆ,
ನಡೆನುಡಿಯಲ್ಲಿ ಭಾವಿಸಿ ನಡೆಯಬಾರದು ನೋಡಯ್ಯಾ.
ಸರ್ವರು **ಲಿಂಗವಂತ**ರೆಂದು ಭಾವಿಸಿದಲ್ಲಿ ಪೂರೈಸಿಕೊಳ್ಳಬೇಕಲ್ಲದೆ,
ಪುರಹರ ಕಪಿಲಸಿದ್ಧಮಲ್ಲಿಕಾರ್ಜುನನ ಮಂರವಾಸಿಗಳೆಂದು
ಭಾವಿಸಬಾರದು ನೋಡಯ್ಯಾ.

845
ಭಕ್ತಿಯುಕ್ತನುಮಲ್ಲ ಮುಕ್ತಿಗ್ರಾಹಕನಲ್ಲ
ಪಥದ ವೇದ್ಯನುವಲ್ಲದೆಂತೆಂತೋ?
ಕರ್ಮಕಾಯನಲ್ಲ ಕಾಲಾಗ್ನಿಯಲ್ಲ
ತನ್ನಲ್ಲ ತಾನೆ ಆಕಾರಂ ಬೊ
ಆಗಮವಾಯವ್ಪೋನ್ನಮಃ ನಾ ದೇವದೇವ
**ಲಿಂಗಾಯತ್ತಂ** ಬೊ ಸ್ವತಂತ್ರಶೀಲ
ಕಪಿಲಸಿದ್ಧಮಲ್ಲಿನಾಥಾ,
ಆತನೆ ಅಚ್ಚಶರಣಂ ಬೊ.

## 18. ಉರಿಲಿಂಗಪೆದ್ದಿ

1451
ಪ್ರಾಣಲಿಂಗ, ಲಿಂಗಪ್ರಾಣ
`ಇಷ್ಟಂ ಪ್ರಾಣಸ್ತಥಾ ಭಾವಸ್ತ್ರಿಧಾ ಚೈಕಂ ಎಂದುದಾಗಿ
ಪಂಚಭೂತಕಾಯವಳಿದು ಪ್ರಸಾದಕಾಯವ ಮಾಡಿ

Downloaded from: **www.lingayatreligion.com**

ಭಕ್ತದೇಹಿಕನೆನಿಸಿದನು.
ಈ ಸತ್ಕ್ರೀಯನು ಶ್ರೀಗುರು ಕರುಣಿಸಿ ಮಾಡಿದನಾಗಿ
ಪ್ರಾಣಲಿಂಗ, ಕಾಯಭಕ್ತನು ಇದೂ ಸ್ವಭಾವ.
ದಾಸೋಹಿಯಾಗಿ ಅರ್ಚನೆ ಪೂಜನೆ
ಸರ್ವದ್ರವ್ಯ ಸಕಲಭೋಗವನೂ ಅರ್ಪಿತವ ಮಾಡುತ್ತಿಹನು,
ಪ್ರಸಾದವ ಭೋಗಿಸುತ್ತಿಹನು.
ಸತ್ಕ್ರೀಯಲ್ಲಿ ಲಿಂಗಕ್ಕೆ ಕಾಯಶೂನ್ಯನಾಗಿ
ಭಕ್ತಕಾಯ ಮಮಕಾಯನೆಂದು ಅವಗ್ರಹಿಸಿಕೊಂಡ ಭಕ್ತಂಗೆ
ಬೇರೆ ಪ್ರಾಣವಿಲ್ಲಾಗಿ ಪ್ರಾಣವೆಂದು ಅವಗ್ರಹಿಸಿಕೊಂಡ.
ಇಂತಹ ಪ್ರಾಣಲಿಂಗವು, ಕಾಯಭಕ್ತನು
ತನ್ನೊಳಗೆ ತಾನೇ ಐಕ್ಯವಾಯಿತ್ತು.
ಭಕ್ತನೇ ಲಿಂಗ, ಲಿಂಗವೇ ಭಕ್ತನು,
ದಾಸೋಹಕ್ರೀಯೆ ಸೋಹಕ್ರೀ, ಸೋಹಕ್ರೀಯೆ ದಾಸೋಹಕ್ರೀ.
ಈ ಕ್ರೀಯನು ಅದ್ವೈತವೆನ್ನಿ, ಸೋಹವೆನ್ನಿ, ದಾಸೋಹವೆನ್ನಿ
ಬಲ್ಲವರುಗಳು ಬಲ್ಲಂತೆ ನಿಮ್ಮ ನಿಮ್ಮ ಅರಿವಿನ ಹವಣಿಂಗೆ ನುಡಿಯಿರಿ.
ಆ **ಲಿಂಗಾಯತ**ವ, ಆ ಲಿಂಗದ ಮರ್ಮವ
ಅರ್ಪಿತದ ಮರ್ಮವ, ಪ್ರಸಾದದ ಮಹಿಮೆಯ
ಮಹಾಪರಿಣಾಮದ ಕ್ರೀಯು ಸಾಮಾನ್ಯರಿಗೆ ಅರಿಯಬಾರದು.
ಈ ಮಹಾ ಕ್ರೀ ವಾಙ್ಮನೋತೀತ.
ಈ ಮಹಾಕುಳವ ಮಹಾನುಭಾವರೇ ಬಲ್ಲರು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

1281
ಅನುಭಾವಲಿಂಗದ ಮರ್ಮವನರಿವುದರಿದು,
ಲಿಂಗಸಂಜ್ಞೆಯನರಿವುದರಿದು, ಲಿಂಗವೆಂದಾದುದೆಂದರಿವುದರಿದು,
**ಲಿಂಗವಂತ**ಹುದಿಂತಹುದೆಂದರಿವುದರಿದು ನೋಡಾ.
ಲಿಂಗದಲ್ಲಿಯೆ ಅಗಮ್ಯವಯ್ಯ.
ಭೂಮಿಯೆ ಪೀಠಕೆ, ಆಕಾಶವೆ ಲಿಂಗವೆಂದರಿದಾತನು ಲಿಂಗವನರಿದಾತನಲ್ಲ.
ಲಿಂಗದಲ್ಲಿ[ಯೆ] ಅಗಮ್ಯವಯ್ಯ.
ಲಿಂಗದ ಆದಿ ಬ್ರಹ್ಮ, ಮಧ್ಯ ವಿಷ್ಣು, ಅಂತ್ಯ ರುದ್ರ.
ಇಂತೀ ತ್ರಿಮೂರ್ತಿಲಿಂಗವೆಂದರಿದಾತನು ಲಿಂಗವನರಿದವನಲ್ಲ.
ಲಿಂಗದಲ್ಲಿ[ಯೆ] ಅಗಮ್ಯವಯ್ಯ.
ಲಿಂಗಮಧ್ಯೇ ಜಗತ್ಸರ್ವಂ ತ್ರೈಲೋಕ್ಯಂ ಸಚರಾಚರಂ
ಲಿಂಗಬಾಹ್ಯಾತ್ ಪರಂ ನಾಸ್ತಿ ತಸ್ಮೈ ಶ್ರೀಗುರವೇ ನಮಃ
ಎಂಬ ಭಾವರಹಿತ ಲಿಂಗವು
`ಬ್ರಹ್ಮ ವಿಷ್ಣ್ವಾದಿದೇವಾನಾಮಪ್ಯಗೋಚರಂ' ಎಂದು
ಇದಂ ಮಾಹೇಶ್ವರಂ ಜ್ಯೋತಿರಾಪಾತಾಲೇ ವ್ಯವಸ್ಥಿತಂ
ಅತೀತಂ ಸತ್ಯಲೋಕಾದೀನನಂತಂ ದಿವ್ಯಮೀಶ್ವರಂ
ಲಲಾಟಲೋಚನಂ ಚಾಂದ್ರೀ ಕಲಾಪಂ ಚತುರ್ದಶಂ
ಅಂತರ್ವರ್ತೇಹ ನಿರ್ದೇಹಂ ಗುರುರೂಪಂ ವ್ಯವಸ್ಥಿತಂ
ಪಾದಭಿನ್ನಂ ಹಿ ಲೋಕೇನ ಮೌಳಿಬ್ರಹ್ಮಾಂಡಭಿತ್ತಯೇ
ಭುಜಪ್ರಾಂತದಿಗಂತಾನಾಂ ಭೂತಾನಾಂ ಪತಯೇ ನಮಃ
ನಾದಲಿಂಗಮಿತಿಜ್ಞೇಯಂ ಬಿಂದುಪೀಠಮುದಾಹೃತಂ
ನಾದಬಿಂದುಯುತಂ ರೂಪಂ ಲಿಂಗಾಕಾರಮಿಹೋಚ್ಯತೇ

Downloaded from: **www.lingayatreligion.com** 

ಎಂಬ ಲಿಂಗಮೆಂದು
ಲಿಯತೇ ಗಮ್ಯತೇ ಯತ್ರ ಯೇನಸರ್ವಂ ಚರಾಚರಂ
ತದೇತಲ್ಲಿಂಗಮಿತ್ಯುಕ್ತಂ ಲಿಂಗತತ್ತ್ವಪರಾಯಣೈಃ
ಲಕಾರಂ ಲಯಸಂಪ್ರೋಕ್ತಂ ಗಕಾರಂ ಸೃಷ್ಟಿಮೇವ ಚ
ಲಯಾನಾಂ ಗಮನಶ್ಚೈವ ಲಿಂಗಾಕಾರಮಿಹೋಚ್ಯತೇ
ಎಂದರಿದಾತನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನೆಂದರಿದ ಶರಣಂಗೆ ಸುಲಭ,
ಮಿಕ್ಕಿನವರಿಗಳಿಗಲಭ್ಯವಯ್ಯಾ.

1283
ಅಮೃತದೊಳಗೆ ಜನಿಸಿ ಅಮೃತದೊಳಗೆ ವರ್ತಿಸುವ
ಅಮೃತದೇಹಿಗೆ ಹಸಿವು ತೃಷೆಯೆ ?
ಆ ಅಮೃತವೆ ಆಹಾರ, ಆ ಅಮೃತವೆ ಸೇವನೆ,
ಬೇರೊಂದು ವಸ್ತುವುಂಟೆ ? ಇಲ್ಲ.
ಅಮೃತವೇ ಸರ್ವಪ್ರಯೋಗಕ್ಕೆ.
ಇದಕ್ಕೆ ಕಟ್ಟಳೆಯುಂಟೆ ? ಕಾಲವುಂಟೆ ?
ಆಜ್ಞೆ ಉಂಟೆ ? ಬೇರೆ ಕರ್ತರುಂಟೆ ? ಇಲ್ಲ.
ಮನವೇ ಮೇರೆ, ಪರಿಣಾಮವೇ ಅವಧಿ ನೋಡಾ.
ಶ್ರೀಗುರುಲಿಂಗದಲ್ಲಿ ಜನಿಸಿ, ಶಿವಲಿಂಗದಲ್ಲಿ ಬೆಳೆದು
ಜಂಗಮಲಿಂಗದಲ್ಲಿ ವರ್ತಿಸಿ, ಪ್ರಸಾದಲಿಂಗದಲ್ಲಿ ಪರಿಣಾಮಿಸಿ,
ಗುರು ಲಿಂಗ ಜಂಗಮ ಪ್ರಸಾದ ಒಂದೆಂದರಿದು
ಆ ಚತುರ್ವಿಧ ಏಕವಾದ ಲಿಂಗವೇ ಪ್ರಾಣ, ಪ್ರಾಣವೇ ಲಿಂಗ
ಲಿಂಗವೇ ಅಂಗ, ಅಂಗವೆ ಲಿಂಗವಾದ
ಲಿಂಗಸ್ವಾಯತವಾದ ಲಿಂಗೈಕ್ಯಂಗೆ
ಜಪ ಧ್ಯಾನ ತಪಕ್ಕೆ ಅರ್ಚನೆಗೆ ಪೂಜನೆಗೆ
ಆಗಮವುಂಟೆ ? ಕಾಲವುಂಟೆ ? ಕರ್ಮವುಂಟೆ ? ಕಲ್ಪಿತವುಂಟೆ ? ಇಲ್ಲ.
ಸರ್ವವೂ ಲಿಂಗಮಯ.
ಆ **ಲಿಂಗವಂತಂಗೆ** ನಡೆದುದೇ ಆಗಮ, ಪೂಜಿಸಿದುದೇ ಕಾಲ
ಮಾಡಿದುದೇ ಕ್ರಿಯೆ, ನುಡಿದುದೇ ಜಪ, ನೆನೆದುದೇ ಧ್ಯಾನ
ವರ್ತಿಸಿದುದೇ ತಪಸ್ಸು.
ಇದಕ್ಕೆ ಅವಧಿಯುಂಟೆ ? ಮೇರೆಯುಂಟೆ ? ಇಲ್ಲ.
ಮನವೇ ಮೇರೆ, ಪರಿಣಾಮವೇ ಅವಧಿ ನೋಡಾ.
ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ರವಿ, ಶಶಿ, ಆತ್ಮ
ಮನೋವಾಕ್ಕಾಯ ಹೊನ್ನು ಹೆಣ್ಣು ಮಣ್ಣು
ಮೊದಲಾದ ಸರ್ವಪದಾರ್ಥವನರ್ಪಿಸಿ,
ಗುರು ಲಿಂಗ ಜಂಗಮದ ಪ್ರಸನ್ನತೆಯ ಪಡೆದ ಮಹಾಪ್ರಸಾದಿಗೆ
ಸರ್ವವೂ ಪ್ರಸಾದವಲ್ಲದೆ ಮತ್ತೊಂದಿಲ್ಲ.
ಆ ಪ್ರಸಾದಿಗೆ ಪದಾರ್ಥವೆಂಬ ಪ್ರಸಾದವೆಂಬ ಭೇದವುಂಟೆ ?
ಅರ್ಪಿತವೆಂಬ ಅನರ್ಪಿತವೆಂಬ ಸಂದೇಹವುಂಟೆ ?
ಕೊಡುವಲ್ಲಿ ಕೊಂಬಲ್ಲಿ ಸೀಮೆಯುಂಟೆ ?
ನಿಸ್ಸೀಮಪ್ರಸಾದಿಗೆ ಸರ್ವವೂ ಪ್ರಸಾದ.
ಆ ಭೋಗಕ್ಕೆ ಮೇರೆ ಉಂಟೆ ? ಅವಧಿಯುಂಟೆ ? ಇಲ್ಲ.
ಮನವೇ ಮೇರೆ, ಪರಿಣಾಮವೇ ಅವಧಿ ನೋಡಾ.
ವೇದ ಶಾಸ್ತ್ರ ಆಗಮ ಪುರಾಣ ಮೊದಲಾದ ಸರ್ವವಿದ್ಯಂಗಳ
ತಾತ್ಪರ್ಯ ಮರ್ಮ ಕಳೆಗಳನರಿದ ಮಹಾಜ್ಞಾತೃವಿಂಗೆ

Downloaded from: **www.lingayatreligion.com** 

ಆ ಮಹಾಜ್ಞಾನವೇ ದೇಹ, ಆ ಮಹಾಜ್ಞೇಯವೇ ಪ್ರಾಣ.
ಈ ಮಹತ್ತಪ್ಪ ಜ್ಞಾತೃ ಜ್ಞಾನ ಜ್ಞೇಯ ಒಂದಾದ
ಮಹಾಬೆಳಗಿನ ಸುಖಸ್ವರೂಪಂಗೆ
ಮರ್ತ್ಯ ಸ್ವರ್ಗ ದೇವಲೋಕವೆಂಬ ಫಲಪದದಾಸೆಯುಂಟೆ ? ಇಲ್ಲ.
ನಿರಂತರ ತೇಜೋಮಯ ಸುಖಸ್ವರೂಪನು
ವಿದ್ಯಾಸ್ವರೂಪನು ನಿತ್ಯಾನಂದಸ್ವರೂಪನು.
ಆ ಮಹಾಮಹಿಮನ ಮಹಾಸುಖಕ್ಕೆ
ಅವಧಿಯುಂಟೆ ? ಮೇರೆಯುಂಟೆ ? ಇಲ್ಲ.
ಮನವೇ ಮೇರೆ, ಪರಿಣಾಮವೇ ಅವಧಿ ನೋಡಾ.
ಆ ಮಹಾನುಭಾವಿ ತಾನೆ ಕೇವಲ ಜ್ಯೋತಿರ್ಮಯಲಿಂಗವಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ

1310
ಆಯುಷ್ಯಭಾಷೆಯನು ಲಿಂಗವೆ ಕೊಡುವನಯ್ಯಾ.
ಇನ್ನಾರಿಗೂ ಕಕ್ಕುಲತೆ ಬಡದಿರಿ.
ಲಿಂಗವು ಕೊಡುವ ಕಂಡಾ !
ಆದಡಿನ್ನು ಮತ್ತಾರಿಂಗೂ ಕಕ್ಕುಲತೆಯ ಬಡದಿರಿ.
**ಲಿಂಗವಂತಂಗೆ** ಕಕ್ಕುಲತೆಯಾದಡೆ **ಲಿಂಗವಂತ**ನೆನಿಸನು.
ಕಕ್ಕುಲತೆಯಲ್ಲಿ ಅನ್ಯರನಾಸೆಗೈದಡೆ ಲಿಂಗವು ರಕ್ಷಿಸನು, ಶಿವನಾಣೆ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.
1311
ಆಯುಷ್ಯವ ಹಿರಿದಾಗಿ ಕೊಟ್ಟಡೆ, ಲಿಂಗ ಒಲಿದುದಲ್ಲ.
ಭಾಷೆಯ ಹಿರಿದಾಗಿ ಕೊಟ್ಟಡೆ, ಲಿಂಗ ಒಲಿದುದಲ್ಲ.
ಅಷ್ಟಮಹದೈಶ್ವರ್ಯವ ಹಿರಿದಾಗಿ ಕೊಟ್ಟಡೆ
ಲಿಂಗ ಒಲಿದುದಕ್ಕೆ ಕುರುಹಲ್ಲ.
ಕಾಯ ಬೆರಸಿ ಕೈಲಾಸಕ್ಕೆ ಕೊಂಡು ಹೋದರೂ ಲಿಂಗ ಒಲಿದುದಲ್ಲ.
ಇವೆಲ್ಲಾ ಪೂಜಾ ಫಲಂಗಳು, ಕೈಕೂಲಿಕಾರತನವೈಸೆ.
ಲಿಂಗ ಒಲಿದ ಪರಿ: ಗುರುಲಿಂಗಜಂಗಮ ಒಂದೆಂದು ಅರಿದು
ನಿಶ್ಚಯ ಭಾವದಿಂ ತನು ಮನ ಧನವಲ್ಲಿಯೇ ಅರ್ಪಿಸುವುದು
ಲಿಂಗ ಒಲಿದುದು.
ಕಾಯಭಾವವಳಿದು ಲಿಂಗವೆಂದು ಭಾವಿಸಿ
ಭಾವಸಿದ್ಧಿಯಾದುದು ಲಿಂಗ ಒಲಿದುದು.
ಲಿಂಗವಲ್ಲದೆ ಇನ್ನಾವುದು ಘನ ? ಎದರಿದುವೆ ಲಿಂಗ ಒಲಿದುದು.
**ಲಿಂಗವಂತ**ನೆ ಲಿಂಗವೆಂದರಿದುದು ಲಿಂಗ ಒಲಿದುದು.
ಸದಾಚಾರ ಲಿಂಗ ಒಲಿದುದು.
ನಿರ್ವಂಚನೆ ಲಿಂಗ ಒಲಿದುದು.
ಸರ್ವಭೋಗವನು **ಲಿಂಗವಂತ**ರಿಗೆ ಭೋಗಿಸಲಿತ್ತು
ಸಮಭೋಗವಲ್ಲದೆ **ಲಿಂಗವಂತ**ಗೆ
ವಿಶೇಷ ಭೋಗ ತಾತ್ಪರ್ಯ ಮೋಹವಾಗದಡೆ ಲಿಂಗ ಒಲಿದುದು.
ಪರಧನ ಪರಸ್ತ್ರೀ ಪರದ್ರುವ್ಯ ಪರದೈವದಲ್ಲಿ
ವರ್ತಿಸದಿದ್ದಡೆ ಲಿಂಗ ಒಲಿದುದು.
ಲಿಂಗದಲ್ಲಿ ಭಕ್ತನಲ್ಲಿ ಅವಿನಾಭಾವವಳವಟ್ಟು ಭಾವಶುದ್ಧವಾಗಿ
ಸರ್ವಕ್ರೀ ಲಿಂಗಕ್ರೀಯಾದಡೆ ಲಿಂಗ ಒಲಿದುದು ದೃಷ್ಟವಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

Downloaded from: **www.lingayatreligion.com** 

1365
ಕೊಡುವ ಲಿಂಗವನು ಬೇಡಿಕೊಳಲರಿಯದೆ
ಕೊಡದ ಮಾನವರನಾಸೆಗೈದ **ಲಿಂಗವಂತ**ನನೇನೆನಬಹುದು?
ಕೊಟ್ಟನು ನೋಡಿರೆ ಲಿಂಗವು,
ಮಾರ್ಕಂಡೇಯಂಗೆ ಮಳೆಯರಾಜಂಗೆ ಆಯುಷ್ಯವ.
ಕೊಟ್ಟನು ನೋಡಿರೆ ಲಿಂಗವು,
**ಲಿಂಗವಂತ**ರು ಕುಡ ಹೇಳಿದವರಿಗೆ ಆಯಷ್ಯವ.
ಮುಸುಟೆಯ ಚಾಡಿರಾಯ, ಮಡಿವಾಳ ಮಾಚಿದೇವರು
ಬಸವರಾಜದೇವರು ಹೇಳಿದವರಿಗೆ ಆಯುಷ್ಯವ ಕೊಟ್ಟನು ನೋಡಿರೆ,
ಚೋಳಂಗೆ ಹೊನ್ನಮಳೆಯನೂ, ದಾಸಂಗೆ ತವನಿಧಿಯನೂ
ದೇವದಾನವ ಮಾನವರಿಗೆ ಇಚ್ಛೆಯನರಿದು.
ಬೇಡಿದವರಿಗೆ ಬೇಡಿದ ಪದವ ಕೊಟ್ಟ
ಆಯುಷ್ಯ ಭಾಷೆಯ ಫಲವ ನೋಡಯ್ಯಾ: ಲಿಂಗವೂ ಸಾಧ್ಯವಾಯಿತ್ತು,
ಗುರುಲಿಂಗವೆಂದರಿದು ಲಿಂಗಾರ್ಚನೆಯ ಮಾಡಿದ ಫಲವ ನೋಡಯ್ಯಾ.
ಜಂಗಮ ಸಾಧ್ಯವಾಯಿತ್ತು,
ಲಿಂಗ ಜಂಗಮವೆಂದರಿದು ಜಂಗಮಾರ್ಚನೆಯ ಮಾಡಿದ ಫಲವ ನೋಡಯ್ಯಾ.
ಪ್ರಸಾದ ಸಾಧ್ಯವಾಯಿತ್ತು,
ಪ್ರಸಾದ ಪ್ರಜ್ಞಾನಪರ ಕೇವಲ ಮುಕ್ತಿಯೆಂದು
ಗ್ರಹಿಸಿದ ಫಲವ ನೋಡಯ್ಯಾ.
ಶ್ರೀಗುರು ಲಿಂಗ ಜಂಗಮ ಒಂದೇ ಎಂದು
ಪ್ರಸಾದ ಒಂದೇ ಎಂದು ಅರಿದೆನು.
ಇದೇ ಜ್ಞಾನ, ಇದೇ ಮುಕ್ತಿ, ಇದೇ ಪದ, ಇದೇ ಮಹಾಫಲ.
ಇನ್ನು ಮೇಲೆ ಈ ಪದಕ್ಕೆ ಪದ ಉಂಟೇ?
ಈ ಫಲಕ್ಕೆ ಫಲ ಉಂಟೇರಿ ಇಲ್ಲ. ನಿಮ್ಮಾಣೆ
ಇದೇ ಮಹತ್ಪರಿಣಾಮವಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

1403
ತೃಣಾದಿ ವಿಷ್ಣ್ವಂತ್ಯವಾಗಿ ಸರ್ವರ ಉತ್ಪತ್ತಿಸ್ಥಿತಿಲಯಂಗಳೂ ಶಿವಾಧೀನ.
ಇದನರಿದು ಸುಖಿಯಾಗಿ, **ಲಿಂಗವಂತ**ನು
ಲಿಂಗಾರ್ಚನೆಯ ಮಾಡಿ, ಪರಿಣಾಮಿಯಾದಡೆ
ಇಹಪರಸಿದ್ಧಿ, ಸದ್ಯೋನ್ಮುಕ್ತನು.
ಈ ವಿಚಾರಜ್ಞಾನವರಿಯದೆ ಮನಭ್ರಮಿಸಿ ಬಳಲಿದಡೆ ಕಾರ್ಯವಿಲ್ಲ.
ಲಿಂಗವು ಮೆಚ್ಚನು, **ಲಿಂಗವಂತ**ರೆಂತೂ ಮೆಚ್ಚರು.
ಇದನರಿದು, ಲಿಂಗವ ನಂಬಿ ಬದುಕಿರಯ್ಯಾ ಕೆಡಬೇಡ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

1435
ಪರಶಿವನು ಸುಖಮಯನು, ಸುಖಾತ್ಮನು, ಸುಖಸ್ವರೂಪನು,
ನಿಷ್ಕಳನಿರೂಪನು, ಅಪ್ರಮೇಯನು, ಅನಾಮಯನು,
ಪರಾತ್ಪರನು, ಅತಿಸೂಕ್ಷ್ಮನು, ಮಹಾಸ್ಥೂಲನು.
ಶಿವಂ ಪರಾತ್ಪರಂ ಸೂಕ್ಷ್ಮಂ ನಿತ್ಯಂ ಸರ್ವಗತಾವ್ಯಯವ್
ನಿಂದಿತಮಾನಾಪಮ್ಯಮಪ್ರಮೇಯಮನಾಮಯಮ್
ಶುದ್ಧತ್ವಾಚ್ಛಿವಮುದ್ದಿಷ್ಟಂ ಪರಾದೂರ್ಧ್ವಂ ಪರಾತ್ಪರಮ್

Downloaded from: **www.lingayatreligion.com** 

ಎಂದುದಾಗಿ,
`ಅಣೋರಣೀಯಾನ್ ಮಹತೋ ಮಹೀಯಾನ್
ಎಂದುದಾಗಿ,
ಇಂತಹ ಶಿವನು ಭಕ್ತಕಾಯನಾಗಿ
ಭಕ್ತವತ್ಸಲನಾಗಿಪ್ಪ ಕಾಣಿರೋ.
ಅಕಾಯೋ ಭಕ್ತಕಾಯಸ್ತು ಮಮ ಕಾಯಸ್ತು ಭಕ್ತಿಮಾನ್
ಭಕ್ತಸಂಗವಿಶೇಷಣ ಅವಿಕಾರಂ ಶಿವಾತ್ಮನೋಃ
ಎಂದುದಾಗಿ,
ಸದ್ಭಕ್ತಿಯುಳ್ಳ ಮಹಾ**ಲಿಂಗವಂತಂಗೆ** ಪ್ರಾಣವಾಗಿಪ್ಪ ಕಾಣಿರೋ.
ಲಿಂಗಾಲಿಂಗೀ ಮಮ ಪ್ರಾಣೋ ಲಿಂಗಾಲಿಂಗೀ ಮಮಾತ್ಮಭೂಃ
ಲಿಂಗಾಲಿಂಗೀ ಮಮೋಜ್ಜೀವೀ ಲಿಂಗಾಲಿಂಗೀ ಚ ರಕ್ಷಕಃ
ಎಂದುದಾಗಿ,
ಇಂತಹ ಭಕ್ತನ ಜಿಹ್ವೆಯಲ್ಲಿ ಆರೋಗಣೆಯ ಮಾಡಿ ಸುಖಿಸುವನು.
ನೈವೇದ್ಯಂ ಪುರತೋ ನ್ಯಸ್ತಂ ದರ್ಶನಾತ್ ಸ್ವೀಕೃತಂ ಮಯಾ
ರಸಂ ಭಕ್ತಸ್ಯ ಜಿಹ್ವಯಾ ಆಶ್ನಾಮಿ ಕಮಲೋದ್ಭವ
ಇಂತೆಂದುದಾಗಿ,
ಈ ಪರಿ ಶಿವಂಗೆ ಸದ್ಭಕ್ತನೇ ದೇಹ, ಸದ್ಭಕ್ತನೇ ಪ್ರಾಣ,
ರಕ್ತನ ಜಿಹ್ವೆಯಲ್ಲಿ ಆರೋಗಿಸುವನು.
ಇದು ಕಾರಣ,
ಸದ್ಭಕ್ತಂಗೆ ಮಾಡಿದುದೆಲ್ಲವು
ಶಿವಂಗೆ ಮಾಡಿದುದು, ಶಿವಂಗೆ ಪ್ರೀತಿ.
ಇದು ಕಾರಣ,
ಸದ್ಭಕ್ತಂಗೆ ಶರಣೆಂದು
ಅರ್ಚಿಸಿ ಪೂಜಿಸಿ ಆರೋಗಿಸಲಿತ್ತು
ಪ್ರಸನ್ನತೆಯ ಪಡೆದು ಆ ಪ್ರಸಾದವಂ
ಕೊಂಡ್ಪುರಿಣಾಮಿಯಪ್ಪುದು ಸುಖಿಯಪ್ಪುದು ಭಕ್ತನಪ್ಪುದಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

1439
ಪರುಷವು ಪಾಷಾಣದಂತೆ ಇಪ್ಪುದು,
ಆ ಪರುಷವು ಪರುಷವೇದಿಗಳಿಗಲ್ಲದೆ ಅರಿಯಬಾರದು,
ಆ ಪರುಷದ ಫಲಸಿದ್ಧಿ ಪರುಷವೇದಿಗಳಿಗಲ್ಲದೆ ಅಳವಡದು.
ಲಿಂಗವೂ **ಲಿಂಗವಂತ**ನಾಗಿ
ದೇವದಾನವಮಾನವರೊಳಗಾಗಿ
ಅವರಂತೆ ಇಪ್ಪನು.
ಆ ಲಿಂಗವು ಲಿಂಗವೇದ್ಯಂಗಲ್ಲದೆ ಅರಿಯಬಾರದು.
ಪರುಷವೇದಿ ಪರುಷದ ಫಲಸಿದ್ಧಿಯಿಂದ ಸುಖಿಸುವಂತೆ
ಲಿಂಗವೇದಿ **ಲಿಂಗವಂತ**ರ ಸಂಗದಿಂದ ಸುಖಿಸಿ ಮುಕ್ತನಪ್ಪನಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

1450
ಪ್ರಸಾದವೆಂದು ಪ್ರಸಾದಿಗಳೆಂದು,
ಪ್ರಸಾದವ ಕೊಂಡೆನೆಂದು ನುಡಿವುತ್ತಿರ್ಪರು.
ಇನ್ನೆಂತಯ್ಯಾ ಶಿವಶಿವಾ !

Downloaded from: **www.lingayatreligion.com**

ಅರ್ಪಿತವಿಲ್ಲದೆ ಪ್ರಸಾದವಾದ ಪರಿಯೆಂತಯ್ಯಾ ?
ಆವಾವ ಪದಾರ್ಥಂಗಳನು ಆವಾವ ದ್ರವ್ಯಂಗಳನು
ಎಹಗೆಹಗರ್ಪಿಸಿದಿರಿ, ಹೇಳಿರಣ್ಣಾ ?
ಪ್ರಸಾದವೇ ಹೇಂಗಾದುದು ಹೇಳಿರೆ ?
ಶಬ್ದ ಸ್ಪರ್ಶ ರೂಪು ರಸ ಗಂಧಂಗಳನು
ಎಹಗೆಹಗೆ ಅರ್ಪಿಸುವಿರಿ ಹೇಳಿರೆ ? ಅದು ಹೇಂಗರ್ಪಿಸಬಹುದು ?
ಪ್ರಸಾದವಲ್ಲದೆ ಕೊಳ್ಳೆನೆಂಬವರಿಗೆ ಅರ್ಪಿಸುವದಂತಿರಲಿ,
ಮುನ್ನಿನ ಪ್ರಸಾದಿಗೆ ಅನರ್ಪಿತವ ನೆನೆವ ಪರಿಯೆಂತೊ ?
ಅನರ್ಪಿತವ ನೋಡುವ ಪರಿಯೆಂತೋ ?
ಅನರ್ಪಿತವ ಕೇಳುವ ಪರಿಯೆಂತೊ ?
ಅನರ್ಪಿತವ ವಾಸಿಸುವ ಪರಿಯೆಂತೊ ?
ಅನರ್ಪಿತವ ರುಚಿಸುವ ಪರಿಯೆಂತೊ ?
ಅನರ್ಪಿತವ ಸ್ಪರ್ಶಿಸುವ ಪರಿಯೆಂತೊ ?
ನೆನೆಯಬಾರದು, ನೋಡಬಾರದು, ಕೇಳಬಾರದು,
ವಾಸಿಸಬಾರದು, ರುಚಿಸಬಾರದು, ಮುಟ್ಟಬಾರದು,
ಶಿವಶಿವಾ, ತೊಡಕು ಬಂದಿತ್ತಲ್ಲಾ !
ಅನರ್ಪಿತವ ಕೊಳಬಾರದು.
ಸರ್ವಂ ಚ ತೃಣಕಾಷ್ಠಂ ಚ ಭಕ್ಷ್ಯಂ ಭೋಜ್ಯಾನುಲೇಪನಂ
ಶಿವಾರ್ಪಿತಂ ವಿನಾ ಭುಂಜೇ ಭುಕ್ತಂ ಸದ್ಯೋಽಪಿ ಕಿಲ್ಬಿಷಂ
_ಎಂದುದಾಗಿ, ಅರ್ಪಿಸಿದ ಪ್ರಸಾದವ ಕೊಳ್ಳಲೇ ಬೇಕು. ಇನ್ನೆಂತಯ್ಯಾ?
ಆವನಾನೊಬ್ಬ ಪ್ರಸಾದಿಗೆ ಅನರ್ಪಿತವ ನೆನೆಯಬಾರದು.
ಅರ್ಪಿಸುವ ಪರಿ ಇನ್ನೆಂತಯ್ಯಾ, ಮರ್ಮ ಜ್ಞಾನಗದನ್ನಕ್ಕ ?
ಭಾವಶುದ್ಧವಾಗದನ್ನಕ್ಕ ? ಆ **ಲಿಂಗವಂತ**ನು ಲಿಂಗಪ್ರಾಣವಾಗದನ್ನಕ್ಕ ?
ಮಹಾನುಭಾವರ ಸಂಗವಿಲ್ಲದನ್ನಕ್ಕ ?
ಇದು ಕಾರಣವಾಗಿ,
ಮರ್ಮಜ್ಞನಾಗಿ, ಭಾವಶುದ್ಧವಾಗಿ, ಲಿಂಗಪ್ರಾಣವಾಗಿ,
ಮಹಾನುಭಾವರ ಸಂಗದಿಂದರಿದು ಅರ್ಪಿಸಿದ ಪ್ರಸಾದವ ಕೊಂಡು
ಮುಕ್ತರಪ್ಪುದಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

1453
ಪ್ರಾಣ ಲಿಂಗಸಂಬಂಧಿ,
[ಲಿಂಗವೂ ಪ್ರಾಣಸಂಬಂಧಿ].
ಕಾಯ ಲಿಂಗಸಂಬಂಧಿ,
ಲಿಂಗವೂ ಕಾಯ ಸಂಬಂಧಿ.
ಈ ಸತ್ಕ್ರಿಯಾ ಸಂಬಂಧವ ಶ್ರೀಗುರು ಮಾಡಿದನಾಗಿ
**ಲಿಂಗವಂತ**ನು ಮುಟ್ಟಿತ್ತೆ ಅರ್ಪಿತ, ಕೊಂಡುದೆ ಪ್ರಸಾದ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

1458
ಬಹಿರಂಗದಲ್ಲಿ ಶಿವಲಿಂಗ, ಅಂತರಂಗದಲ್ಲಿ ಅನ್ಯದೈವ
ಬಹಿರಂಗದಲ್ಲಿ ಲಿಂಗಕ್ರೀ, ಅಂತರಂಗದಲ್ಲಿ ಅನ್ಯಕ್ರೀ
ಬಹಿರಂಗದಲ್ಲಿ ಭಕ್ತರು, ಅಂತರಂಗದಲ್ಲಿ ಭವಿಗಳು
ಇಂತಿವರುಗಳ ಭಕ್ತರೆಂಬೆನೆ ? ಎನಬಾರದು,
ನಿಮ್ಮ ಪೂಜಿಸಿಹರಾಗಿ ಭಕ್ತರೆಂಬೆನೆ ? ಸದಾಚಾರಕ್ಕೆ ಸಲ್ಲರು.

Downloaded from: **www.lingayatreligion.com**

ಲಿಂಗವಂತರು ಮೆಚ್ಚರು.
ಈ ಉಭಯ ಸಂಕೀರ್ಣವ ನೀನೆ ಬಲ್ಲೆ.
ಎನ್ನ ಮನವಿಡಿಯದು, ಎನಗಿನ್ನಾವುದು ಬುದ್ಧಿ ಎಂಬುದ
ವಿಚಾರಿಸಿ ಕರುಣಿಸಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

1466
ಭಕ್ತಕಾಯ ಮಮಕಾಯ ಕಂಡಾ ಲಿಂಗವು,
ಲಿಂಗವಂತಂಗೆ ಏಕಿನ್ನು ಬೇರೆ ಚಿಂತೆ ?
ಲಿಂಗವಂತಂಗೆ ಗುರು ಲಿಂಗ ಪ್ರಾಣ ಏಕವಾಗಿ, ಪ್ರಾಣಲಿಂಗವಾಗಿ
ಅಂತರಂಗ ಬಹಿರಂಗಭರಿತನಾಗಿ, ಪ್ರಾಣಲಿಂಗವಾಗಿ
ಅಂಗದ ಮೇಲೆ ಲಿಂಗಸ್ವಾಯತವಾಗಿ ನಿರಂತರ ಇಪ್ಪ ಕಂಡಾ.
ಏಕಿನ್ನು ಬೇರೆ ಅನ್ಯರಾಸೆ !
ಲಿಂಗವಂತರು ಲಿಂಗವನೇ ಚಿಂತಿಸುವುದು
ಲಿಂಗವನೇ ಆಸಗೈವುದು
ಲಿಂಗವನೇ ಕೊಂಬುದು, ಲಿಂಗವಂತರಿಗೆ ಕೊಡುವುದು.
ಲಿಂಗವಂತಂಗೆ ಅನುವಿದು, ಆಯತವಿದು
ಬುದ್ಧಿಯಿದು, ಸಿದ್ಧಿಯಿದು, ಮುಕ್ತಿಯಿದು, ಯುಕ್ತಿಯಿದು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

1483
ಮಹಾಜ್ಯೋತಿಯು ಸೋಂಕಿದ ಉತ್ತಮಾಧಮತೃಣ ಮೊದಲಾದವೆಲ್ಲವೂ
ಮಹಾಜ್ಯೋತಿಯಪ್ಪವು ತಪ್ಪದು, ನೋಡಿರೇ ದೃಷ್ಟವ,
ಮತ್ತಂತಿಂತೆಂದುಪಮಿಸಲುಂಟೇ ?
ಪರಂಜ್ಯೋತಿ ಸದ್ಗುರುಲಿಂಗವು ಸೋಂಕಿದ ಸದ್ಭಕ್ತನ
ಅಂತರಂಗಬಹಿರಂಗಸರ್ವಾಂಗ ಪರಂಜ್ಯೋತಿರ್ಲಿಂಗವು,
ಮತ್ತೆ, ದೇಹವೆಂದು ಪ್ರಾಣವೆಂದು
ಆಧಾರಸ್ವಾಧಿಷ್ಠಾನ ಮಣಿಪೂರಕ ಅನಾಹತ ವಿಶುದ್ಧಿ ಆಜ್ಞೆ ಬ್ರಹ್ಮರಂಧ್ರವೆಂದು
ವರ್ಣ ದಳ ಛಾಯೆ ಅಧಿದೇವತೆಯೆಂದು ವಿವರಿಸಿ ನುಡಿಯಲುಂಟೆ ?
ಪಂಚಭೌತಿಕದ ತನುವಿನಂತೆ ಪಂಚವಿಂಶತಿ ತತ್ತ್ವವನು
ಸಂಬಂಧಿಸಿ ನುಡಿಯಲುಂಟೇ, ಕೇವಲ ಜ್ಯೋತಿರ್ಮಯಲಿಂಗತನುವಿಂಗೆ ?
ಸದ್ಭಕ್ತನ ಅಂಗ ಲಿಂಗ, ಮನ ಲಿಂಗ, ಪ್ರಾಣ ಲಿಂಗ, ಭಾವ ಲಿಂಗ,
ಪಂಚವಿಶಂತಿ ತತ್ತ್ವಂಗಳೆಲ್ಲವೂ ಲಿಂಗತತ್ವ.
ಇದು ಕಾರಣ, ಲಿಂಗವಂತನ ತನು
ಸರ್ವಾಂಗಲಿಂಗವೆಂಬುದಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

1499
ಲಿಂಗಚ ಮರ್ಮವನರಿವುದರಿದು,
ಲಿಂಗದ ಸಂಜ್ಞೆಯ[ನ]ರಿವುದರಿದು,
ಲಿಂಗವಂತಹದಿಂತಹದೆಂದರಿವುದರಿದು ನೋಡಾ.
ಲಿಂಗದಲ್ಲಿಯೇ ಆಗಮವಯ್ಯ,
ಭೂಮಿಯೇ ಪೀಠಿಕೆ, ಆಕಾಶವೇ ಲಿಂಗವೆಂದರಿದಾತನು
ಲಿಂಗವನರಿದವನಲ್ಲ.
ಲಿಂಗದಲ್ಲಿಯೇ ಆಗಮವಯ್ಯ,

Downloaded from: **www.lingayatreligion.com** 

ಲಿಂಗದಾದಿ ಬ್ರಹ್ಮ, ಮಧ್ಯ ವಿಷ್ಣು, ಅಂತ್ಯ ರುದ್ರ
ಇಂತು ತ್ರೈಲಿಂಗವೆಂದರಿದಾತನು ಲಿಂಗವನರಿದವನಲ್ಲ.
ಲಿಂಗದಲ್ಲಿಯೇ ಆಗಮವಯ್ಯಾ,
`ಲಿಂಗಮಧ್ಯೇ ಜಗತ್ಸರ್ವಂ ಎಂಬ ಭಾವಭರಿತಲಿಂಗ
`ಬ್ರಹ್ಮವಿಷ್ಣಾದಿದೇವನಾಮಪ್ಯಗೋಚರಂ' ಎಂದು,
ಮಾಹೇಶ್ವರಜ್ಯೋತಿರಿದಮಾಪಾತಾಲೇ ವ್ಯವಸ್ಥಿತಂ
ಅತೀತಂ ಸತ್ಯಲೋಕಾಧೀನನಂತಂ ದಿವ್ಯಮೀಶ್ವರಂ
ಇಂತಾದನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು
ಎಂದರಿದ ಶರಣಂಗೆ ಸುಲಭ, ಮಿಕ್ಕಿದವರ್ಗೆ ಅಸುಲಭ.

1507
**ಲಿಂಗವಂತಂಗೆ** ಲಿಂಗವು ಮಾಡಿದ ಪದವನು **ಲಿಂಗವಂತ**ರೆ ಬಲ್ಲರು.
ಕೇವಲ ಸಾಕ್ಷಾತ್ಪರವಸ್ತುವನು ಕರಸ್ಥಲದಲ್ಲಿ ಮೂರ್ತಿಯಾಗಿ
ಬಿಜಯಂಗೈಸಿ ಕೊಟ್ಟನಾಗಿ ಸಾಲೋಕ್ಯಪದ,
ಅಂಗದ ಮೇಲೆ ನಿರಂತರ ಪೂಜೆಗೊಳ್ಳುತ್ತಿಹನಾಗಿ ಸಾಮೀಪ್ಯಪದ,
ಸದ್ಭಕ್ತರೂಪ ಮಾಡಿದವನಾಗಿ ಸಾರೂಪ್ಯಪದ,
ಪ್ರಾಣಲಿಂಗವ ಮಾಡಿ ಅವಿನಾಭಾವವ ಮಾಡಿದನಾಗಿ ಸಾಯುಜ್ಯಪದ,
ಇಂತೀ ಚತುರ್ವಿಧ ಪದವಾಯಿತ್ತು.
`ಲಿಂಗಮಧ್ಯೇ ಶರಣಂ ಶರಣಮಧ್ಯೇ ಲಿಂಗಂ' ಎಂಬುದಾಗಿ
ಸರ್ವಭೋಗಂಗಳನೂ ಸಹವಾಗಿ ಭೋಗಿಸಿ
ಪ್ರಸಾದವನಿಕ್ಕಿ ಸಲಹಿದನಾಗಿ ಸದ್ಯೋನ್ಮುಕ್ತನು, ಸರ್ವಾಂಗಲಿಂಗವು.
ಈ ತಾತ್ಪರ್ಯದ ಮರ್ಮವನು ಲೋಕದ ಜಡಜೀವಿಗಳೆತ್ತ ಬಲ್ಲರಯ್ಯಾ ?
ಬಲ್ಲಡೆ, ಲಿಂಗಾನುಭಾವಿಗಳೇ ಬಲ್ಲರಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

1508
**ಲಿಂಗವಂತ**ನು ಕೇವಲ ಲಿಂಗಮೂರ್ತಿ.
ಲಿಂಗಾರ್ಚನೆಯಂ ಮಾಡಿ, ಲಿಂಗಪ್ರಸಾದವ ಧರಿಸಿ,
**ಲಿಂಗವಂತ**ರಲ್ಲಿ ವರ್ತಿಸಿ, ಸರ್ವವೂ ಲಿಂಗಕ್ರೀಯಾಗಿದ್ದು
ಲಿಂಗವಿಲ್ಲದವರಲ್ಲಿ ಧನದ ಕೊಳುಕೊಡೆ ಮನದ ಕೊಳುಕೊಡೆ
ತನುವಿನ ಕೊಳುಕೊಡೆಯನೂ ಮಾಡಿದಡೆ
ನಾಚದೆ ಶಿವಾಚಾರ? ನಾಚದೇ ಪ್ರಸಾದ? ನಾಚರೆ **ಲಿಂಗವಂತ**ರು.
ಸುಡು, ಸುಡು, ಕಡು ಕಷ್ಟ, ಅವರನು ಬಿಡು ಬಿಡು.
ಆ ತನುವನು **ಲಿಂಗವಂತ**ರಲ್ಲಿಯೇ ಸರ್ವಕ್ರೀಯ ಅರ್ತಿಸುವುದು.
ತನಗೆ ಇಚ್ಛೈಸಿತ್ತ ಕೊಂಡು ಕೊಂಬುದು,
ಅವರು ಇಚ್ಛೈಸಿತ್ತ ಕೊಡುವುದು,
ಅವರಲ್ಲಿಯೆ ಅನುಭವವನಾಸೆಗೈವುದು.
ಅ[ನ್ಯ]ರ ವಿಚಾರದಲ್ಲಿ ನಡೆದು ನರಕಕ್ಕಿಳಿಯಲಾಗದು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

1509
**ಲಿಂಗವಂತ**ನು **ಲಿಂಗವಂತಂಗೆ**
ಅಣುಮಾತ್ರ ಅವಮಾನವ ಮಾಡಿದಡೆ ಮನ ನೋವುದಯ್ಯಾ.
**ಲಿಂಗವಂತ**ನು ಶುಚಿ ಸತ್ಯನು ಶಾಂತನು ಲಿಂಗಸುಖಿ,
ಲಿಂಗದಲ್ಲಿ ತನುಮನಧನ ಬೆರಸಿಪ್ಪುದಾಗಿ, ಲಿಂಗವೂ ಒಲಿವುದಯ್ಯಾ.

Downloaded from: **www.lingayatreligion.com** 

ಬಳಿಕ ಮಹಾಪರ್ವತಪ್ರಮಾಣ ಸತ್ಕಾರವ ಮಾಡಿದರೂ
ನೋವು ಮಾಣದು, ಶಿವನೊಲವು ತಪ್ಪದು.
ಹಿಂದೆ ವಿಷ್ಣು, ಬ್ರಹ್ಮ, ಇಂದ್ರ, ದಕ್ಷನು
ಇದನರಿದು ತನು ಮನ ಧನದಲ್ಲಿ ವಂಚನೆಯಿಲ್ಲದೆ
ಭಯಭಕ್ತಿಯಿಂದರಿದು ನಡೆದು ಸುಖಸಂಗತಾತ್ಪರ್ಯ
ಸಹಜವಿಡಿದಿಪ್ಪುದಯ್ಯಾ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

1510
**ಲಿಂಗವಂತ**ನು **ಲಿಂಗವಂತ**ರಲ್ಲಿಯೇ ಸಂಗವ ಮಾಡುವುದು,
ಲಿಂಗಬಾಹ್ಯರ ಸಂಗವ ಮಾಡಲಾಗದು.
ಸ್ತ್ರೀ ಪುತ್ರರು ಮೊದಲಾದವರ ಕೂಡ
ಲಿಂಗವಿಲ್ಲದವರೊಡನೆ ಸಂಗವ ಮಾಡಲಾಗದು.
ಅದೆಂತೆಂದಡೆ : ಶಿವಲಿಂಗಾಂಗಸಂಪನ್ನೋ ಲಿಂಗಬಾಹ್ಯಸತೀಸುತಾನ್
ಆಲಿಂಗ್ಯ ಚುಂಬನಂ ಕೃತ್ವಾ ರೌರವಂ ನರಕಂ ವ್ರಜೇತ್
ಎಂದುದಾಗಿ ಮತ್ತೆಯೂ_
ಲಿಂಗೀ ಲಿಂಗಿ ಸಹಾವಾಸೀ ಲಿಂಗಿನಾ ಸಹ ವರ್ತಯೇತ್
ಲಿಂಗಿನಾ ಸಹ ಭುಂಜಿತ ಲಿಂಗಯೋಗೋ ನ ಸಂಶಯಃ
ಎಂದುದಾಗಿ **ಲಿಂಗವಂತ**ನು **ಲಿಂಗವಂತ**ರಲ್ಲಿಯೇ
ಸಂಗವ ಮಾಡುವುದು ಶಿವಪಥವಯ್ಯಾ.
ಲಿಂಗವಿಲ್ಲದವರೊಡನೆ ಸಂಗವ ಮಾಡುವುದು ಮಹಾಪಾತಕವಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

1511
**ಲಿಂಗವಂತ**ನು **ಲಿಂಗವಂತ**ರೊಡನೆ ಸತ್ಯವ ನುಡಿವುದು, ಸಹಜದಲ್ಲಿ ನಡೆವುದು,
ಪ್ರೇಮದಲ್ಲಿ ಸಂಗವ ಮಾಡುವುದು.
ಈ ಕ್ರೀ ಇಹಪರ ಸಿದ್ಧಿ, ಲಿಂಗವನರಿವುದಕ್ಕೆ ದೃಷ್ಟ.
ಲಿಂಗಾರ್ಚನೆಯೇ ಕ್ರೀ, ಲಿಂಗ ಒಲಿದುದಕ್ಕೆ ಚಿಹ್ನ, ಇದು ನಿತ್ಯ.
**ಲಿಂಗವಂತ**ನು **ಲಿಂಗವಂತ**ರೊಡನೆ
ಹೇಮದಾಸೆಗೆ ಪ್ರೇಮಗುಂದಿ ನುಡಿಯಲಾಗದು,
ಅಸತ್ಯವ ನುಡಿಯಲಾಗದು,
ಕ್ರೋಧಿಸಿ ನುಡಿಯಲಾಗದು, ವಂಚಿಸಿ ನುಡಿಯಲಾಗದು.
ವೇದಶಾಸ್ತ್ರ, ಆಗಮ ಪುರಾಣ ಪುರಾತನರ ಚರಿತ್ರವನರಿಯದೆ
ಆದಿ ಮಧ್ಯ ಪರಿಪಕ್ವತೆಯನರಿಯದೆ,
ತರ್ಕಿಸಿ ನುಡಿಯಲಾಗದು, ದುಶ್ಚರಿತ್ರದಲ್ಲಿ ನಡೆಯಲಾಗದು.
ಆಜ್ಞಾನಕ್ರೀಯಲ್ಲಿ ವರ್ತಿಸಿ ನಡೆಯಲು
ಇಹಪರವಿಲ್ಲ, ಲಿಂಗವನರಿಯಬಾರದು,
**ಲಿಂಗವಂತ**ರನೆಂತೂ ಅರಿಯಬಾರದು.
ಅರಿಯದವಂಗೆ ಪೂಜಿಸಲೆಂತಹುದು ?
ಪೂಜೆ ಇಲ್ಲದವಂಗೆ ಭಕ್ತಿ ಎಂತಹುದು ?
ಭಕ್ತಿ ಇಲ್ಲದವಂಗೆ ಪ್ರಸಾದವೆಂತಹುದು ?
ಪ್ರಸಾದವಿಲ್ಲದವಂಗೆ ಮುಕ್ತಿ ಎಂತಹುದು ?
ಇದನರಿದು, **ಲಿಂಗವಂತ**ನು **ಲಿಂಗವಂತ**ರಲ್ಲಿ
ಸತ್ಯಸಂಭಾಷಣೆ ಯೋಗವಾದಡೆ ಕೇವಲ ಮುಕ್ತಿ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

Downloaded from: **www.lingayatreligion.com** 

1512
**ಲಿಂಗವಂತ**ನು ಲಿಂಗವಿಲ್ಲದರ ಬಯಸಿದಡೆ ಆತಂಗೆ ಲಿಂಗವಿಲ್ಲ,
ಲಿಂಗವಿಲ್ಲದವನು ಆರಿಗೂ ಬಾತೆ ಅಲ್ಲ.
ಬಾತೆ ಅಲ್ಲದವಂಗೆ ಆರೂ ಸ್ನೇಹಿಸರು, ಆರು ಏನನೂ ಕೊಡರು.
ಇದು ಕಾರಣ,
ದುರಾಶೆಯಂ ಬಿಟ್ಟು ನಿರಾಶೆಯಾಗಿ ಲಿಂಗವನಾಶ್ರೈಸಿದಡೆ ಪ್ರಸಾದವಪ್ಪುದು
ಪ್ರಸಾದದಿಂದಿಹಪರ ಸಿದ್ಧಿ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

1513
**ಲಿಂಗವಂತ**ರ ಲಿಂಗವೆಂಬುದೇ ಶೀಲ,
**ಲಿಂಗವಂತ**ರ ರಾಣಿವಾಸವ ಲಿಂಗದ ರಾಣಿವಾಸವೆಂಬುದೇ ಶೀಲ,
**ಲಿಂಗವಂತ**ರ ಅರ್ಥ ಪ್ರಾಣ ಅಭಿಮಾನಕ್ಕೆ ತಪ್ಪದಿಪ್ಪುದೇ ಶೀಲ,
**ಲಿಂಗವಂತ**ರ ಪಾದೋದಕ ಪ್ರಸಾದ ಸೇವನೆಯ ಮಾಡುವುದೇ
ಮಹಾಶೀಲವಯ್ಯಾ,
ಇಂತಪ್ಪ ಶೀಲ ಸುಶೀಲದೊಳಗಾದ ಶೀಲವೇ ಶೀಲ.
ಈ ಕ್ರೀಯನರಿದು ನಂಬಿ ಭಯಭಕ್ತಿಯಿಂ
ತನು ಮನ ಧನದಲ್ಲಿ ದುರ್ಭಾವ ಹುಟ್ಟದೆ
ಸ್ವಭಾವ ಸದ್ಭಾವದಿಂ ಏಕಭಾವವಾದಡೆ, ಆತನೇ ಸದ್ಭಕ್ತನು.
ಅಂತಹ ಸದ್ಭಕ್ತದೇಹಿಕದೇವನಾಗಿಪ್ಪನು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

1514
**ಲಿಂಗವಂತ ಲಿಂಗವಂತ** ಎಂಬಿರಿ,
ಎಂತು **ಲಿಂಗವಂತ**ರಾದಿರೋ, ಅನ್ಯದೈವದ ಭಜನೆ ಮಾಣದನ್ನಕ್ಕ ?
ಭವಿಗಳ ಸಂಗವ ಮಾಣದನ್ನಕ್ಕ, ಎಂತು **ಲಿಂಗವಂತ**ರಾದಿರೋ ನೀವು ?
ಅದೆಂತೆಂದಡೆ,
ಶಿವಾಚಾರಸಮಾಯುಕ್ತಃ ಅನ್ಯದೈವಸ್ಯ ಪೂಜನಾತ್
ಶ್ವಾನಯೋನಿಶತಂ ಗತ್ವಾ ಚಂಡಾಲಗೃಹಮಾವಿಶೇತ್
ಅಶನೇ ಶಯನೇ ಯಾನೇ ಸಂಪರ್ಕೆ ಸಹಭೋಜನೇ
ಸಂಚರಂತಿ ಮಹಾಘೋರೇ ನರಕೇ ಕಾಲಮಕ್ಷಯಂ
ಇಂತೆಂದುದಾಗಿ,
ಅನ್ಯದೈವ ಭವಿವುಳ್ಳನಕ,
ನೀವು **ಲಿಂಗವಂತ**ರೆಂದಿರೋ, ಮರುಳುಗಳಿರಾ ?
ಇದನರಿತು ಭಕ್ತಿಪಥವ ಸೇರದಿರ್ದಡೆ,
ನೀವೆಂದೆಂದಿಗೂ ಭವಭವದ ಲೆಂಕರು.
ಇದು ಕಾರಣ, ನಮ್ಮ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಲಿಂಗ
ಮುನ್ನವೇ ದೂರವಯ್ಯ.

1515
**ಲಿಂಗವಂತ**ನು ಲಿಂಗಾಚಾರಿ ಸದಾಚಾರಿ ಭೃತ್ಯಾಚಾರಿಯೆನಿಸಿದಡೆ
ಲಿಂಗವನೊಲಿಸಬಹುದು.
ಲಿಂಗದ ನಚ್ಚು, **ಲಿಂಗವಂತ**ರ ಮೆಚ್ಚು.
ಇದು ಸತ್ಯ ಮುಕ್ತಿ ಕೇಳಿರಣ್ಣಾ.
**ಲಿಂಗವಂತ**ನು ಪರಧನ, ಪರಸ್ತ್ರೀ, ಪರದೈವಕ್ಕಳುಪಿ

Downloaded from: **www.lingayatreligion.com**

ಅಲ್ಲಿಯೇ [ವರ್ತಿಸಿ]
ಮಾಹೇಶ್ವರಶೋಭೆಯಂ ಮಾಡಿಹೆನೆಂಬ,
ಮತ್ತೆ ಲಿಂಗಾರ್ಚನೆಯಂ ಮಾಡಿಹೆನೆಂಬ,
ಲಿಂಗವನೊಲಿಸಿಹೆನೆಂಬ,
**ಲಿಂಗವಂತ**ರಲ್ಲಿ ಸಲುವೆನೆಂಬ,
ಲಿಂಗವೇನು ತೊತ್ತಿನ ಮುನಿಸೆ ?
ವೇಶ್ಯೆಯ ಸರಸವೇ ?
ವೈತಾಳಿಕನ ಕಲಹವೆ ?
ತಪ್ಪಿ ನಡೆದು, ತಪ್ಪಿ ನುಡಿದು, ತಪ್ಪಿ ಕೂಡಿ
ಮರಳಿ ಮರಳಿ ಪ್ರಯೋಗಿಸುವಂತಾಗಿ, ಅಂತಲ್ಲ ಕೇಳಿರಣ್ಣಾ.
ಪತಿವ್ರತೆಯು ಸತ್ಪುರುಷನ ಕೂಡಿದಂತೆ,
ಸಜ್ಜನಮಿತ್ರರ ಸಂಗದಂತೆ,
ಮಹಾಜ್ಞಾನಿಗಳ ಅರಿವಿನಂತೆ,
ಶುದ್ಧವಾದುದನೇ ಕೂಡಿಕೊಂಡಿಪ್ಪ, ಶುದ್ಧವಿಲ್ಲದುದನೇ ಬಿಡುವ.
ನಮ್ಮ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು
ಅಣುಮಾತ್ರ ತಪ್ಪ, ಕ್ಷಣಮಾತ್ರ ಸೈರಿಸ.

1516
**ಲಿಂಗವಂತ**ನು ಲಿಂಗಾಚಾರ, ಸದಾಚಾರ,
ಭೃತ್ಯಚಾರ, ಗಣಾಚಾರ, ಶಿವಾಚಾರ,
ಸರ್ವಾಚಾರಸಂಪನ್ನನೆನಿಸಿಕೊಳಬಹುದಲ್ಲದೆ
ಭಕ್ತನೆನಿಸಿಕೊಳಬಾರದು.
ಅನೇಕ ವ್ರತನಿಯಮಂಗಳ ಹಿಡಿದು ನಡೆದು
ವ್ರತಸ್ಥನೆನಿಸಿಕೊಳಬಹುದಲ್ಲದೆ
ಭಕ್ತನೆನಿಸಿಕೊಳಬಾರದು.
ಕರುಣಿ ಶಾಂತ ನಿಸ್ಪೃಹನೆನಿಸಿಕೊಳಬಹುದಲ್ಲದೆ
ಭಕ್ತನೆನಿಸಿಕೊಳಬಾರದು.
ತನುವ ಕೊಟ್ಟು, ಮನವ ಕೊಟ್ಟು, ಧನವ ಕೊಟ್ಟು
ದಾತೃವೆನಿಸಿಕೊಳಬಹುದಲ್ಲದೆ.
ಭಕ್ತನೆನಿಸಿಕೊಳಬಾರದು.
`ಏಕ ಮೂರ್ತಿಸ್ತ್ರಿಧಾ ಭೇದಾ' ಎಂಬ ಕ್ರಿಯೆಯಲ್ಲಿ
ಶ್ರೀಗುರುಲಿಂಗಜಂಗಮವೊಂದೆಯೆಂದು
ಸದ್ಭಾವದಿಂ ತ್ರಿವಿಧದಲ್ಲಿ, ಆ ಮುಖವೊಂದೊಂದರಲ್ಲಿ
ತ್ರಿವಿಧವನೂ ಏಕೀಭವಿಸಿ ಕಂಡು
ಕಾಲಕರ್ಮಕಲ್ಪಿತ ಉಪಾಧಿರಹಿತನಾಗಿ
ಆ ವಸ್ತುಗಳ ಮನೋವಾಕ್ಕಾಯದಲ್ಲಿ ಇಚ್ಛೈಸುತ್ತಂ
ತನ್ನ ಮನೋವಾಕ್ಕಾಯದಲ್ಲಿ ತಡವಿಲ್ಲದೆ [ನೆಲೆಗೊಳಿಸಬೇಕು]
`ನ ಗುರೋರಧಿಕಂ `ಗುರುಣಾ ದೀಯತೇ ಲಿಂಗಂ
`ಗುರುಃ ಪಿತಾ ಗುರುರ್ಮಾತಾ
ಎಂದುದಾಗಿ,
ದೀಕ್ಷಾಮೂರ್ತಿರ್ಗುರುರ್ಲಿಗಂ ಪೂಜಾಮೂರ್ತಿಸ್ಸದಾಶಿವಃ
ಶಿಕ್ಷಾಮೂರ್ತಿಶ್ಚರಸ್ತಸ್ಮಾತ್ ಏವಂ ಭೇದತ್ರಯೋ ಭವೇತ್
ದೀಕ್ಷಾ ಪೂಜಾ ಚ ಶಿಕ್ಷಾ ಚ ಸರ್ವಕರ್ತಾ ಚ ಜಂಗಮಃ
ಎಂದುದಾಗಿ,

Downloaded from: **www.lingayatreligion.com** 

`ಭಕ್ತ್ಯಾಪೂಜಾಂ ಅಹಂ ಕರ್ತಾ'
`ನಿಷ್ಪ್ರಪಂಚೋ ನಿರಾಮಯಃ'
ಎಂದುದಾಗಿ,
ಪ್ರಪಂಚಯುಕ್ತೋ ದಾಸೋಹೀ ನಿಷ್ಪ್ರಪಂಚೋ ಹಿ ಜಂಗಮಃ
ಪ್ರಪಂಚಯುಕ್ತೋ ಭಕ್ತಸ್ಸ್ಯಾತ್ ನಿಷ್ಪ್ರಪಂಚೋ ಹಿ ಜಂಗಮಃ
ಎಂದುದಾಗಿ,
ಸರ್ವಶಕ್ತಿಮಯಃ ಪ್ರೋಕ್ತಃ ಪುರುಷ ಏಕಶ್ಶಿವಸ್ತಥಾ
ಭಕ್ತಿಪ್ರಸನ್ನಸ್ಸರ್ವೆಷಾಂ ಯಥಾ ಭಕ್ತಿಸ್ತಥಾ ಶಿವಃ
ಸಕಲಶ್ಶಕ್ತಿರೂಪಶ್ಚ ಶಿವ ಏಕೋ ನಿಷ್ಕಲಸ್ತಥಾ
ಶಕ್ತ್ಯಧೀನಃ ಪ್ರಪಂಚಸ್ಸ್ಯಾದ್ಯಥಾಭಕ್ತಿಸ್ಸ್ತಥಾ ಶಿವಃ
ಗುರುಣಾ ಭಾವಿತಂ ಲಿಂಗಂ ಏಕಮೇವಾದ್ವಿತೀಯಕಂ
ತಲ್ಲಿಂಗಸ್ಯ ಪ್ರಭಾ ಲಿಂಗಂ ಸರ್ವಲಿಂಗಂ ನ ಸಂಶಯಃ
`ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥೇ' ಎಂದುದಾಗಿ,
`ಏವ ಏಕೋ ಧ್ಯೇಯಃ' ಎಂದುದಾಗಿ
`ಅಣೋರಣೀಯಾನ್ಮಹತೋ ಮಹೀಯಾನ್' ಎಂದುದಾಗಿ
ಸರ್ವಶಕ್ತಿಮಯಂ ಪ್ರೋಕ್ತಂ ಪುರುಷಮೇಕಂ ಶಿವಸ್ತಥಾ
ಯಥಾ ಶಕ್ತಿಶ್ಚ ಸಂಯೋಗಂ ತಥಾ ತತ್ತ್ವಂ ಪರಶ್ಶಿವಃ
ಸರ್ವೆಷಾಂ ಶಕ್ತಿರೂಪಂ ಚ ಪುರುಷಾದ್ವೈತಂ ಪರಶಿವಃ
ಯಥಾಶಕ್ತಿಸ್ಸ್ತಥಾ ಪುರುಷ ಏಕ ರುದ್ರ ಇತಿ ಸ್ಮೃತಃ
ಎಂದುದಾಗಿ,
ಯಸ್ಯ ಚಿತ್ತಂ ಶಿವೇ ಲೀನಂ ತಸ್ಯ ಜಾತ್ಯಾದಿ ನ ಸ್ಮರೇತ್
ಶಿವಲಿಂಗೇ ಶಿಲಾಬುದ್ಧಿಂ ಕುರ್ವಾಣ ಇವ ಪಾತಕೀ
ಸತ್ಯಭಾವಿ ಮಹತ್ಸತ್ಯಂ ಸತ್ಯಂ ಸ್ಯಾಚ್ಛಿವಲಕ್ಷಣಂ
ನಿತ್ಯಭಾವಿ ಮಹನ್ನಿತ್ಯಂ ಸತ್ಯಂ ಸ್ಯಾಚ್ಛಿವಲಕ್ಷಣಂ
ನಾನಾರೂಪಧರೋ ದೇವೋ ನಾನಾರೂಪಸಮನ್ವಿತಃ
ನಾನಾಚಿಹ್ನಸಮೋಪೇತೋ ನಾನಾಲೀಲಾಧರೋ ಹರಃ
ವೇದಾತೀತಂ ಮನೋತೀತಮಾಗಮಾತೀತಮಾರ್ಗಕಂ
ಶಾಸ್ತ್ರಾತೀತಂ ಮಹಾಶಾಸ್ತ್ರೀ ತತ್ಸ್ಯಾಜ್ಜಂಗಮಲಕ್ಷಣಂ
ಲಿಂಗಧಾರೀ ಮಹಾಲಿಂಗೀ ಲಿಂಗಧ್ಯಾನೀ ನಿರಂತರಂ
ಲಿಂಗಾಲಿಂಗೀ ಮಹತ್ಸಂಗೀ ತತ್ಸ್ಯಾಜ್ಜಂಗಮಲಕ್ಷಣಂ
ಜಂಗಮೋ ಜಂಗಮಂ ದಃಷ್ಟ್ವಾ ನಮಸ್ಕಾರಂ ತು ಸಂಭ್ರಮಾತ್
ಆಲಿಂಗನಂ ಮಹಾಪ್ರೀತ್ಯಾ ಕುರ್ಯಾಜ್ಜಂಗಮಲಕ್ಷಣಂ
ಭೃತ್ಯಪೂಜಾರ್ಹಕರ್ತಾ ಚ ದೀಕ್ಷಾಮೂರ್ತಿರ್ಮಹಾಪ್ರಭುಃ
ಶಿಕ್ಷಾಮೂರ್ತಿರ್ಮಹಾಕರ್ತಾ ತತ್ಸ್ಯಾಜ್ಜಂಗಮಲಕ್ಷಣಂ
ಸರ್ವಸಂಗಪರಿತ್ಯಾಗೀ ಲಿಂಗಸಂಗೀ ನಿರಂತರಂ
ದ್ವಂದ್ವೇ ತು ಸಮದೃಷ್ಟಿಸ್ಸ್ಯಾತ್ ತತ್ಸ್ಯಾಜ್ಜಂಗಮಲಕ್ಷಣಂ
ಘೃಣಾದೃಷ್ಟಿಘೃಣಾವಾಕ್ಯಂ ಘೃಣಾಮೂರ್ತಿರ್ನಿರಂತರಂ
ಕ್ರಿಯಾಕರ್ಮಸು ವಿಜ್ಞಶ್ಚ ಶಿಕ್ಷಾಚಾರ್ಯ ಇತಿ ಸ್ಮೃತಃ
ಮೂರ್ತಿಶ್ಚ ಲಿಂಗಮೂರ್ತಿಶ್ಚ ಸುಶೀಲಂ ಲಿಂಗಶೀಲವತ್
ಗುಣಂ ಸರ್ವಸ್ಯ ಲಿಂಗಸ್ಯ ತತ್ಸ್ಯಾಜ್ಜಂಗಮಲಕ್ಷಣಂ
ಎಂದುದಾಗಿ,
ಹನ್ಯಾತ್ಕ್ರುದ್ಧೋಪಿ ಚಾಕಾಶಂ ಕ್ಷುಧಾರ್ತಾ ಖಾದಯೇತ್ತುಷಂ
ತ್ಯಕ್ತ್ವಾ ಲಿಂಗಾರ್ಚನಂ ಮೂಢೋ ಮುಕ್ತ್ಯರ್ಥಿ ತ್ರಿತಯಂ ವೃಥಾ
ಶ್ವಪಚೋಽಪಿ ಮುನಿಶ್ರೇಷ್ಠಃ ಶಿವಭಕ್ತೋ ದ್ವಿಜಾಧಿಕಃ

Downloaded from: **www.lingayatreligion.com**

ಶಿವಭಕ್ತಿವಿಹೀನಸ್ತು ದ್ವಿಜೋಽಪಿ ಶ್ವಪಚಾಧಮಃ
ಸ ಲಿಂಗೀ ಸರ್ವದೈವಜ್ಞೋ ಯಸ್ಸ ಚಾಂಡಾಲವದ್ಭುವಿ
ಲಿಂಗಾರ್ಚಕಸ್ತು ಶ್ವಪಚೋ ದ್ವಿಜಕೋಟ್ಯಾ ವಿಶಿಷ್ಯತೇ
ಶಿವಧರ್ಮೆ,
ಉಪನೀತಸಹಸ್ರೇಭ್ಯೋ ಬ್ರಹ್ಮಚಾರೀ ವಿಶಿಷ್ಯತೇ
ಬ್ರಹ್ಮಚಾರಿಸಹಸ್ರೇಭ್ಯೋ ವೇದಾಧ್ಯಾಯೀ ವಿಶಿಷ್ಯತೇ
ವೇದಾಧ್ಯಾಯಿಸಹಸ್ರೇಭ್ಯಸ್ಸಾಗ್ನಿಹೊತ್ರೀ ವಿಶಿಷ್ಯತೇ
ಅಗ್ನಿಹೋತ್ರಿಸಹಸ್ರೇಭ್ಯೋ ಯಜ್ಞಯಾಜೀ ವಿಶಿಷ್ಯತೇ
ಯಜ್ಞಯಾಜಿಸಹಸ್ರೇಭ್ಯಃ ಸತ್ರಯಾಜೀ ವಿಶಿಷ್ಯತೇ
ಸತ್ರಯಾಜಿಸಹಸ್ರೇಭ್ಯಃ ಸರ್ವವಿದ್ಯಾರ್ಥಪಾರಗಃ
ಸರ್ವವಿದ್ಯಾರ್ಥವಿತ್ಕೋಟ್ಯಾ ಶಿವಭಕ್ತೋ ವಿಶಿಷ್ಯತೇ
ಎಂದುದಾಗಿ,
ನಿಕೃಷ್ಟಾಚಾರಜನ್ಮಾನೋ ವಿರುದ್ಧಾಲೋಕವೃತ್ತಿಷು
ಕೋಟಿಭ್ಯೋ ವೇದವಿದುಷಾಂ ಶ್ರೇಷ್ಠಾ ಮದ್ಭಾವಭಾವಿತಾಃ
ಎಂದುದಾಗಿ,
ದೇಶಾಂತರ ಸಂಹಿತೆಯಲ್ಲಿ: ಕ್ರಿಮಿಕೀಟಪತಂಗೇಭ್ಯಃ ಪಶವಃ ಪ್ರಜ್ಞಯಾಧಿಕಾಃ
ಪಶುಭ್ಯೋಽಪಿ ನರಾಶ್ಶ್ರೇಷ್ಠಾಸ್ತೇಷು ಶ್ರೇಷ್ಠಾ ದ್ವಿಜಾತಯಃ
ದ್ವಿಜಾತಿಷ್ವಧಿಕಾ ವಿಪ್ರಾ ವಿಪ್ರೇಷು ಕ್ರತುಬುದ್ಧಯಃ
ಕ್ರತುಬುದ್ಧಿಷು ಕರ್ತಾರಸ್ತೇಭ್ಯಃ ಸನ್ಯಾಸಿನೋಽಧಿಕಾಃ
ತೇಭ್ಯೋ ವಿಜ್ಞಾನಿನಃ ಶ್ರೇಷ್ಠಾಸ್ತೇಷು ಶಂಕರಪೂಜಕಾಃ
ತೇಷು ಶ್ರೇಷ್ಠಾ ಮಹಾಭಾಗಾ ಮಮ ಲಿಂಗಾಂಗಸಂಗಿನಃ
ಲಿಂಗಾಂಗಸಂಗಿಷ್ವಧಿಕಃ ಷಟ್ಸ್ಥಲಜ್ಞಾನವಾನ್ಪುಮಾನ್
ತಸ್ಮಾದಪ್ಯದಿಕೋ ನಾಸ್ತಿ ತ್ರಿಷು ಲೋಕೇಷು ಸರ್ವದಾ
ಎಂದುದಾಗಿ,
ಭೋಗಮೂರ್ತಿರ್ಮಹಾಲಿಂಗಂ ಜಂಗಮಶ್ಚ ನ ಸಂಶಯಃ
ಜಂಗಮೋ ಲಿಂಗರೂಪಂ ಚ ಸತ್ಯಂ ಸತ್ಯಂ ನ ಸಂಶಯಃ
ಸ್ಥಾವರಂ ಜಂಗಮಶ್ಚೈವ ದ್ವಿವಿಧಂ ಲಿಂಗಮುಚ್ಯತೇ
ಜಂಗಮಸ್ಯಾವಮಾನೇನ ಸ್ಥಾವರಂ ನಿಷ್ಫಲಂ ಭವೇತ್
ಆಚಾರಶ್ಚ ಗುರುರ್ಲಿಂಗಂ ಜಂಗಮಶ್ಚ ಪ್ರಸಾದಕಃ
ಪಂಚವಕ್ತ್ರಸಮಾಯುಕ್ತಂ ಮಹಾಲಿಂಗಸ್ಯ ಲಕ್ಷಣಂ
ಜಂಗಮೋ ಲಿಂಗಮಾಚಾರೋ ಮಹಾಲಿಂಗಂ ಗುರುಸ್ತದಾ
ಪಂಚವಕ್ತ್ರಸಮಾಯುಕ್ತಃ ಪ್ರಸಾದೋ ಲಿಂಗಲಕ್ಷಣಂ
ಆಚಾರೋ ಗುರುಲಿಂಗಂ ಚ ಮಹಾಲಿಂಗಪ್ರಸಾದಕಂ
ಪಂಚವಕ್ತ್ರಸಮಾಯುಕ್ತಂ ಸತ್ಯಂ ಜಂಗಮಲಕ್ಷಣಂ
ಪ್ರಸಾದೋ ಜಂಗಮಶ್ಚೈವ ಆಚಾರೋ ಗುರುದೇವ ಚ
ಮಹಾಲಿಂಗಸಮಾಯುಕ್ತಂ ಶಿವಲಿಂಗಸ್ಯ ಲಕ್ಷಣಂ
ಜ್ಞಾನಾಚಾರೋ ಮಹಾಲಿಂಗಂ ಶಿವಲಿಂಗಂ ಚ ಜಂಗಮಃ
ಪಂಚವಕ್ತ್ರಸಮಾಯುಕ್ತಂ ಇತ್ಯೇತೇ ಗುರುಲಕ್ಷಣಂ
ಮಹಾಲಿಂಗಂ ಪ್ರಸಾದಶ್ಚ ಜಂಗಮೋ ಗುರುಲಿಂಗಕಂ
ಪಂಚವಕ್ತ್ರಸಮಾಯುಕ್ತ ಆಚಾರೋ ಲಿಂಗಲಕ್ಷಣಂ
ಅಂಗಮಾಚಾರಮಾಶ್ರಿತ್ಯ ಆಚಾರಃ ಪ್ರಾಣಮಾಶ್ರಿತಃ
ತತ್ಪ್ರಾಣೋ ಶಿವಲಿಂಗ ಚ ತಲ್ಲಿಂಗಂ ಜಂಗಮಾಶ್ರಿತಂ
ಇಂತೆಂದುದಾಗಿ,
ಕ್ಷಣದಲ್ಲಿ ಅರಿ ಲಿಂಗವನು,

Downloaded from: **www.lingayatreligion.com** 

ಕ್ಷಣಾರ್ಧದಲ್ಲಿ ಲಿಂಗವೂ ನಿನ್ನರಿವ.
ಕ್ಷಣಾರ್ಧದಲ್ಲಿ ಅರಿ ಭಕ್ತಕಾಯನೆಂದು.
ಪ್ರಾಣಲಿಂಗವೆಂದರಿದು
ಲಿಂಗವನು ಒಂದು ಕ್ಷಣದಲ್ಲಿ ಮರೆದಡೆ
ಕ್ಷಣಾರ್ಧದಲ್ಲಿ ಮರೆದಡೆ, ನಿನ್ನನೂ ಅಜ್ಞಾನಿಯ ಮಾಡಿ
ಆಯಸಂ ಬಡಿಸಿ ಆಸೆಗೆ ಒಪ್ಪಿಸಿ ಘಾಸಿಮಾಡದೆ ಬಿಡನು ಲಿಂಗವು.
ಕ್ಷಣಾರ್ಧದಲ್ಲಿ ಸರ್ವಪ್ರಪಂಚವೆಲ್ಲವನೂ ಮರೆದು
ನಿತ್ಯವಾಗಿ ಲಿಂಗವನರಿ ಮನವೆ.
ನಿರಂತರ ಲಿಂಗದಲ್ಲಿದ್ದು ಲಿಂಗವ ಹಾ[ಡೆ] ಸುಖಿಯಪ್ಪೆ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನೆ ಸಾಕ್ಷಿ.

1519
ಲಿಂಗವನರಿದ ಲಿಂಗವಂತನು ಸರ್ವಾಂಗಲಿಂಗಮೂರ್ತಿ.
ಆತನ ನುಡಿಯೆ ವೇದ, ಆತನ ನಡೆಯೆ ಶಾಸ್ತ್ರ ಪುರಾಣ ಆಗಮ ಚರಿತ್ರವು.
ಆ ಮಹಾಮಹಿಮನ ನುಡಿಯಲ್ಲಿ ತರ್ಕವ ಮಾಡಲಾಗದು.
ನಡೆಯಲ್ಲಿ ನಾಸ್ತಿಕವ ಮಾಡಿದಡೆ ನರಕ ತಪ್ಪದಯ್ಯಾ.
ಲಿಂಗವನರಿದ ಮಹಾಮಹಿಮಂಗೆ ನಮೋ ನಮೋ ಎಂಬೆನು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

1521
ಲಿಂಗವಿದ್ದುದೇ ಕೈಲಾಸ, ಲಿಂಗವಿದ್ದುದೇ ಕಾಶೀಕ್ಷೇತ್ರ
ಲಿಂಗವಿದ್ದುದೇ ಅಷ್ಟಾಷಷ್ಟಿಮುಕ್ತಿಕ್ಷೇತ್ರ ಕಾಣಿರಣ್ಣಾ.
ಇದು ಕಾರಣ, ಲಿಂಗವಿದ್ದ ಠಾವ ಕೇಳಿರೆ: ಲಿಂಗವಿದ್ದ ಠಾವು, ಭಕ್ತಕಾಯ
ಮಮಕಾಯವೆಂದುದಾಗಿ
ಭಕ್ತನ ಕಾಯ ಲಿಂಗಕಾಯ,
`ಲಿಂಗಾಲಿಂಗೀ ಮಹಜ್ಜೀವಿ' ಎಂದುದಾಗಿ
ಲಿಂಗವಂತನೇ ಲಿಂಗಪ್ರಾಣಿ ಕಾಣಿರಣ್ಣಾ.
ಇಂತೆಂದುದಾಗಿ,
ಶಿವಭಕ್ತನ ಸಂಗ ಲಿಂಗಸಂಗ,
ಶಿವಭಕ್ತನ ಪಾದವೇ ಮುಕ್ತಿ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

1539
ವೇದಮಾರ್ಗವ ಮೀರಿದರು ಮಹಾವೇದಿಗಳು ಲಿಂಗವಂತರು,
ಆ ಲಿಂಗವಂತರ ಮಹಾವೇದಮಾರ್ಗವ ಲಿಂಗವೇ ಬಲ್ಲನಯ್ಯಾ.
ಶಾಸ್ತ್ರಮಾರ್ಗವ ಮೀರಿದರು ಮಹಾಶಾಸ್ತ್ರಜ್ಞರು ಲಿಂಗವಂತರು.
ಆ ಲಿಂಗವಂತರ ಮಹಾಶಾಸ್ತ್ರಮಾರ್ಗವ ಲಿಂಗವೇ ಬಲ್ಲನಯ್ಯಾ.
ಆಗಮಕ್ರೀಯ ಮೀರಿದರು ಮಹಾ ಆಗಮಿಕರು ಲಿಂಗವಂತರು,
ಲಿಂಗವಂತರ ಮಹಾ ಆಗಮಕ್ರೀಯ ಲಿಂಗವೇ ಬಲ್ಲನಯ್ಯಾ.
ಪುರಾಣದ ಪರಿಯ ಮೀರಿದರು ಮಹಾಪುರಾಣಿಕರು ಲಿಂಗವಂತರು,
ಆ ಲಿಂಗವಂತರ ಪುರಾಣದ ಪರಿಯ ಆ ಲಿಂಗವೇ ಬಲ್ಲನಯ್ಯಾ.
ದೇವ ದಾನವಮಾನವರಿಗೆಯೂ ಅರಿಯಬಾರದು.
ವೇದಶಾಸ್ತ್ರಪುರಾಣಾನಿ ಸ್ಪಷ್ಟಂ ವೇಶ್ಯಾಂಗನಾ ಇವ
ಯಾ ಪುನಶ್ಶಾಂಕರೀ ವಿದ್ಯಾ ಗುಪ್ತಾ ಕುಲವಧೂರಿವ
ಎಂದುದಾಗಿ,

Downloaded from: **www.lingayatreligion.com**

ಆರಿಗೆಯೂ ಅರಿಯಬಾರದು.
**ಲಿಂಗವಂತ**ರು ಉಪಮಾತೀತರು, ವಾಙ್ಮನೋತೀತರು, ಆರ ಪರಿಯೂ ಇಲ್ಲ.
ಸ್ವೇಚ್ಛಾವಿಗ್ರಹೇಣೈವ ಸ್ವೇಚ್ಛಾಚಾರಗಣೇಶ್ವರಾಃ
ಶಿವೇನ ಸಹ ತೇ ಭುಙ್ತ್ವಾ ಭಕ್ತಾ ಯಾಂತಿ ಶಿವಂ ಪದಂ
ಲೋಕಾಚಾರನಿಬಂಧೇನ ಲೋಕಾಲೋಕವಿವರ್ಜಿತಾಃ
ಲೋಕಾಚಾರಂ ಪರಿತ್ಯಜ್ಯ ಪ್ರಾಣಲಿಂಗಪ್ರಸಾದಿನಃ
ಎಂದುದಾಗಿ,
ಈ ಲೋಕದ ಮಾರ್ಗವ ನಡೆಯರು,
ಲೋಕದ ಮಾರ್ಗವ ನುಡಿಯರು.
**ಲಿಂಗವಂತ**ರ ನಡೆ ನುಡಿ ಆಚಾರ ಅನುಭವ ಆಯತ
ಬೇರೆ ಕಾಣಿರಣ್ಣಾ.
ಶ್ರೀಗುರುಲಿಂಗದಿಂದಲುದಯಿಸಿ ಪ್ರಾಣಲಿಂಗಸಂಬಂಧಿಗಳಾದ
ಮಹಾ**ಲಿಂಗವಂತ**ರಿಗೆ
ಪ್ರಾಣಲಿಂಗ, ಕಾಯಲಿಂಗ
ಭಕ್ತಕಾಯ ಮಮಕಾಯವಾಗಿ ದೇಹಾದಿ ತತ್ತ್ವವೆಲ್ಲಾ ಶಿವತತ್ತ್ವ.
ಇದು ಕಾರಣ,
ಸರ್ವಾಂಗಲಿಂಗಮಹಾಮಹಿಮ **ಲಿಂಗವಂತ**ರ ಕ್ರೀಯೆಲ್ಲವೂ ಲಿಂಗಕ್ರೀ.
ಮುಟ್ಟಿದುದೆಲ್ಲಾ ಅರ್ಪಿತ, ಕೊಂಡುದೆಲ್ಲಾ ಪ್ರಸಾದ.
ಸದ್ಯೋನ್ಮುಕ್ತರು, ಸರ್ವಾಂಗಲಿಂಗವಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

1544
ವೇದಶಾಸ್ತ್ರಪುರಾಣಾಗಮಗ್ರಂಥಂಗಳ
ನೋಡಿದವರೆಲ್ಲರೇನು ಹಿರಿಯರೆಂಬೆನೆ ? ಅಲ್ಲಲ್ಲ, ನಿಲ್ಲು, ಮಾಣು.
ಅವರೇ ಹಿರಿಯರಾದಡೆ, [ಟ್ಟುನವೆ], ಗಳೆಯಾಟ,
ಮಿಣಿಯಾಟ, ಅದೃಶ್ಯಕರಣ, ಅಗ್ನಿಸ್ತಂಭ, ಆಕರ್ಷಣ,
ಜಾಷಪ್ಟಿಕಲಾವಿದ್ಯೆಯ ಸಾಧಿಸಿದ ಡೊಂಬನೇನು ಕಿರಿಯನೇ ?
ಇದು ಹಿರಿದು ಕಿರಿದಿನ ಪರಿಯಲ್ಲ.
ಹಿರಿದು ಕಿರಿದಿನ ಪರಿ ಬೇರೆ ಕಾಣಿರಣ್ಣಾ.
ಇದು ಉದರಪೋಷಣವಿದ್ಯೆ ಎನಿಸುವುದು.
ಅವರನೆಂತು ಸರಿ ಎಂಬೆನಯ್ಯ, **ಲಿಂಗವಂತಂಗೆ** ?
ಇದು ಕಾರಣ, ಗುಣ, ಜ್ಞಾನ, ಧರ್ಮ, ಆಚಾರ,
ಶೀಲ ಸಾಧಿಸಿದಾತನೇ ಹಿರಿಯ ಕಾಣಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

1568
ಶಿವ ಶಿವ! ಮಾಹೇಶ್ವರರ ಮಹಾತ್ಮೆಯನೇನೆಂದುಪಮಿಸಬಹುದಯ್ಯಾ,
ವಾಙ್ಮನೋತೀತರು.
ಕೋಟಿ ಕೋಟಿಯಾಯುಷ್ಯ ಕೋಟಿ ಕೋಟಿ ಜಿಹ್ವೆಯುಳ್ಳರೆಯೂ
ಸ್ತುತಿಸಲರಿಯದು.
`ಶಂಭೋರ್ಮಾಹಾತ್ಮ್ಯಮಣುಪ್ರಮಾಣಜಾನಂತಃ
ಎಂದು ಲಿಂಗದ ಮಹಾತ್ಮೆಯನು
ಅಣುಪ್ರಮಾಣವೂ ಅರಿಯಬಾರದೆಂದಡೆ
**ಲಿಂಗವಂತ**ರ ಮಹಾತ್ಮೆಯನೇನೆಂದುಪಮಿಸಬಹುದಯ್ಯಾ !

Downloaded from: **www.lingayatreligion.com**

ಲಿಂಗಾಲಿಂಗೀ ಮಹಜ್ಜೀವೀ ಲಿಂಗಾಲಿಂಗೀ ತು ರಕ್ಷಕಃ
ಲಿಂಗಾಲಿಂಗೀ ಮಮ ಸ್ವಾಮೀ ಲಿಂಗಾಲಿಂಗೀ ಮನೋಹರಃ
ಈ ಪರಿ ದೇಹಲಿಂಗಕ್ಕೆ ಪ್ರಾಣಲಿಂಗಕ್ಕೆ ತಾನಾಗಿಹ
**ಲಿಂಗವಂತ**ನ ಮಹಾತ್ಮೆಯನೇನೆಂದುಪಮಿಸಬಹುದಯ್ಯಾ !
ಶಿವನೇ ಬಲ್ಲ, ಶಿವನೇ ಬಲ್ಲ.
ಮದ್ಭಕ್ತಜನಮಾಹಾತ್ಮ್ಯಂ ಕೋ ವಾ ಜಾನಾತಿ ತತ್ತ್ವತಃ
ಜಾನೇಹಂ ತ್ವಂ ತು ಜಾನಾಸಿ ನಂದೀ ಜಾನಾತಿ ವಾ ಗುಹಃ
ಶಿವನು, ನಂದೀಶ್ವರ, ಗುಹನು ಇವರೇ ಬಲ್ಲರು.
ಸಜ್ಜನಶುದ್ಧಶಿವಾಚಾರಸಂಪನ್ನರಪ್ಪ ನಮ್ಮ ಸದ್ಭಕ್ತರೇ ಬಲ್ಲರು.
ಸಾಮಾನ್ಯ ತರದ ದೇವದಾನವ ಮಾನವರಿಗೆಯೂ ಅರಿಯಬಾರದು.
ಅದೆಂತೆನಲು ಕೇಳಿರೆ: ಬ್ರಹ್ಮ ವಿಷ್ಣು ಇಂದ್ರ ಚಂದ್ರ ರವಿ ಕಾಮ ದಕ್ಷ
ಮೊದಲಾದ ದೇವಜಾತಿಗಳು, ತಾರಕ ರಾವಣಾದಿ ದಾನವರು,
ವ್ಯಾಸಋಷಿಯರುಗಳು, ದಕ್ಷಾಧ್ವರಕ್ಕೆ ಬಂದ ಋಷಿಗಳನೇಕರು
ವೇದಶಾಸ್ತ್ರ ಪುರಾಣ ಆಗಮಾದಿಯಾದ
ಅಷ್ಟಾದಶ ವಿದ್ಯಂಗಳನೂ ಓದಿ ಕೇಳಿ
ತಮ್ಮನು ಕೇಳಿದವರಿಗೆಯೂ ಹೇಳಿ, ಸರ್ವಜ್ಞರೆನಿಸಿಕೊಂಡರು.
ಮಹದೈಶ್ವರ್ಯಸಂಪನ್ನರಾಗಿ ಮದಂಗಳು ಹೆಚ್ಚಿ ಶಿವನನು ಮರೆದರು.
`ಅಹಂ ಬ್ರಹ್ಮ' ಎಂದು ಪರಧನ ಪರಸ್ತ್ರೀಯರಿಗೆ ಅಳುಪಿದರು.
ಶಿವಮಾಹೇಶ್ವರನಿಂದೆಯಂ ಮಾಡಿದರು.
ಈ ಪರಿಯಲೂ ತಪ್ಪಿ ನಡೆದು, ತಪ್ಪಿ ನುಡಿದು
ಹಸ್ತಚ್ಛೇದನ ಶಿರಚ್ಛೇದನವ ಮಾಡಿಕೊಂಡು ಹೋದರು.
ಅನೇಕ ಪರಿಯಲೂ ಭಂಗಿತರಾದರು. ಮಾನಹಾನಿ ಹೊಂದಿದರು,
ಕಷ್ಟಜನ್ಮಂಗಳಲ್ಲಿ ಜನಿಸಿದರು.
ಮರಳಿ ಮತ್ತೆ ಅರಿದು ಶಿವಾರಾಧನೆಯ ಮಾಡಿ, ಶಿವಸ್ತೋತ್ರಮಂ ಮಾಡಿ
ಮಾಹೇಶ್ವರರ ಪೂಜಿಸಿ, ಮರಳಿ ನಿಜಪದಂಗಳ ಹಡೆದರು.
ಈ ಪರಿಯ, ಅರಿವು ಮರವೆಯುಳ್ಳ ದ್ವಂದ್ವಗ್ರಸ್ತರು ಬಲ್ಲರೆ ?
ಮಾಹೇಶ್ವರರ ಮಹಾತ್ಮೆಯ ನಮ್ಮ ಸದ್ಭಕ್ತರೇ ಬಲ್ಲರು.
ಅದೆಂತೆಂದಡೆ ಕೇಳಿರೆ: ವೇದಾದಿ ಅಷ್ಟದಶವಿದ್ಯಾಪರಿಚಿತರು,
ಅಂತಾಗಿ ಎಮ್ಮ ಮಾಹೇಶ್ವರರೇ ಬಲ್ಲರು.
ಉಳಿದ ದೇವ ದಾನವ ಮಾನವರುಗಳಿಗೆಯೂ ಅರಿಯಬಾರದು.
ಅಂತಪ್ಪವರಿಗೆ ಆ ವಿಧಿ.
ಇನ್ನು ಅಲ್ಪಾಯುಷ್ಯರಪ್ಪ ಮನುಷ್ಯರುಗಳಿಗೆ
ವೇದಶಾಸ್ತ್ರ ಪುರಾಣಂಗಳ ಬಹಳ ಓದಲಿಕೆ ತೆರಹಿಲ್ಲ.
ಕಿಂಚಿತ್ತೋದಿದರೂ ಕೇಳಿದರೂ ಇಲ್ಲ, ಮಹಾಜ್ಞಾನಿಗಳ ಸಂಗವಿಲ್ಲ.
ಅಹಂಕಾರಿಗಳು ಮದಾಂಧರು ಶಾಪಹತರು ಜಡಜೀವಿಗಳು ಎಂತರಿಯಬಹುದಯ್ಯಾ.
ಶಿವಮಾಹೇಶ್ವರರ ಮಹಿಮೆಯನರಿಯದ ದೋಷಿಗಳ ಕೂಡೆ ಸಂವಾದಿಸಲುಂಟೆ ?
ಅವರುಗಳ ಮನದನುವರಿತು, ಅರಿವಿನ ಹವಣಿಂದರಿದು,
ಅವಾಚಕವಾಗಿಪ್ಪುದಲ್ಲದೆ ಆ ಪಾಪಿಗಳ ನೋಡಲಾಗದು. ನುಡಿಸಲಾಗದು,
ಸಮಾನದಲ್ಲಿ ಕುಳ್ಳಿರ್ದು ತರ್ಕಿಸಲಾಗದು.
ಶಿವಜ್ಞಾನವಿಲ್ಲದವರ ಕೂಡೆ ನುಡಿಯಲು ತೆರಹುಂಟೆ ಶಿವಮಾಹೇಶ್ವರಂಗೆ ?
[ಅವರು] ಶಿವಲಿಂಗಾರ್ಚನೆಯಂ ಮಾಡಿ
ಮಹಾನುಭಾವರ ಸಂಗದಲ್ಲಿ ಅನುಭಾವಸಂಗದಲ್ಲಿಹರಲ್ಲದೆ
ಕೇಳಿರಣ್ಣಾ, ದೇವದಾನವ ಮಾನವರ ಪರಿಯಲ್ಲ.
ಎಮ್ಮ ಮಾಹೇಶ್ವರರು ಸರ್ವಾಚಾರಸಂಪನ್ನರು ಸರ್ವವಿದ್ಯಾಪರೀಕ್ಷಿತರು,

Downloaded from: **www.lingayatreligion.com**

ತಾತ್ಪರ್ಯಕಳಾಗ್ರಾಹಿಗಳು, ವಿಶ್ವಾಧಿಕರು,
ಎಮ್ಮ ಮಾಹೇಶ್ವರರು ಪರಧನ ಪರಸ್ತ್ರೀಯನೊಲ್ಲರು,
ಸತ್ಯರು ನಿತ್ಯರು ನಿರುಪಾಧಿಕರು,
ನಿರಾಶಾಸಂಪೂರ್ಣರು ಪರಿಣಾಮಿಗಳು.
ಅವರ ಸಂಗದಿಂದ ಗುರುಸಿದ್ಧಿ ಲಿಂಗಸಿದ್ಧಿ ಜಂಗಮಸಿದ್ಧಿ
ಪರಸಿದ್ಧಿ ಪದಸಿದ್ಧಿ ಸರ್ವಸಿದ್ಧಿ ಮಹಾಸಿದ್ಧಿ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

1572
ಶಿವ ಶಿವಾ, **ಲಿಂಗವಂತ**ರ ಚಿತ್ತಕ್ಕೆ, ಲಿಂಗದ ಚಿತ್ತಕ್ಕೆ
ಬಹಹಾಂಗೆ ನುಡಿದು ನಡೆದು
ಸದ್ಭಕ್ತಿಯ ಮಾಡಿ ಸದ್ಭಕ್ತರೆನಿಸಿಕೊಳ್ಳಿರೆ, ಮೂಕರಾಗಿಯಿರದೆ.
ಹಿಡಿವುದ ಹಿಡಿಯದೆ, ಬಿಡುವುದ ಬಿಡದೆ ನಗೆಗೆಡೆಯಾದಿರಿ,
ಅಭಕ್ತರಾದಿರಿ, ನರಕಕ್ಕೆ ಹೋದಿರಿ.
ಹಿಡಿವುದಾವುದೆಂದಡೆ: ಗುರು ಲಿಂಗ ಜಂಗಮ ಒಂದೆಂದು ನಂಬಿ
ಲಿಂಗವಿದ್ದುದೆಲ್ಲಾ ಲಿಂಗವೆಂದು ನಂಬಿ
ತನು ಮನ ಧನ ವಂಚನೆಯಿಲ್ಲದೆ ಅರ್ಪಿಸಿ
ಶ್ರೀಗುರುಲಿಂಗಜಂಗಮದ ಶ್ರೀಪಾದವನು
ತನು ಮನ ಧನದಲ್ಲಿ ಹಿಡಿವುದು.
ಪರಸ್ತ್ರೀ ಪರಧನ ಪರದೈವವನು, ಮನೋವಾಕ್ಕಾಯದಲ್ಲಿ
ಅಣುರೇಣು ಮಾತ್ರ ಆಸೆದೋರದೆ ಬಿಡುವುದು.
ಇವ ಬಿಟ್ಟು ನಡೆ[ದುದೆ] ನಡೆ, ಇವ ಬಿಟ್ಟೆನೆಂಬ ಸತ್ಯದ ನುಡಿಯೇ ನುಡಿ.
ಇದೇ ಆಚಾರ, ಇದೇ ವ್ರತ, ಇದೇ ಶೀಲ
ಇದೇ ಭಕ್ತಿಯ ಕುಳ, ಇದೇ ಶಿವಭಕ್ತಿಸ್ಥಳ
ಇದೇ ಸತ್ಕ್ರಿಯಾ, ಈ ಸತ್ಕ್ರಿಯೆಯಲ್ಲಿ ನಡೆದಾತನೇ ಭಕ್ತನು.
ಆತನೇ ಮುಕ್ತನಯ್ಯಾ, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

1575
ಶೀಲ ಸಮಾನವಿಲ್ಲೆಂದು ಅ**ಲಿಂಗವಂತ**ರ ಮಗಳಿಗೆ
ಉದ್ದೇಶದಿಂದ ಲಿಂಗಸ್ವಾಯತವ ಮಾಡಲು ಆಚಾರವಲ್ಲ.
ಅದೇನು ಕಾರಣವೆಂದಡೆ, ಅದು ಶಿವಾಚಾರಕ್ಕೆ ಸಲ್ಲದಾಗಿ,
ಮುಂದೆ ಗುರೂಪದೇಶಕ್ಕೆ ದೂರವಾಗಿ.
ಚಿತ್ತಶುದ್ಧದಿಂದ ಸತ್ಯಸದಾಚಾರವ ಬಯಸಿ ಬಂದು ಕೇಳಿದಡೆ
ತನ್ನ ಕೈಯ ಧನವ ವೆಚ್ಚಿಸಿ
ಗುರುದೀಕ್ಷೆ ಲಿಂಗಸ್ವಾಯತವ ಮಾಡಿಸುವುದು ಸದಾಚಾರ.
ಈ ಗುಣವುಳ್ಳಾತನೇ ಲಿಂಗದ ವರ್ಮಿಗನು,
ಆತನೇ ಲಿಂಗದಾತೃ, ಆತನೇ ಲಿಂಗಸನ್ನಹಿತನಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

1577
ಶ್ರೀಗುರು ಕರುಣಿಸಿ ಪ್ರಾಣಲಿಂಗಸಂಬಂಧವ ಮಾ[ಡೆ]
ಸದ್ಭಕ್ತನೆನಿಸಿದ ಬಳಿಕ ಇನ್ನೇನೆಂದುಪಮಿಸಬಹುದಯ್ಯಾ,
ಈ ಮಹಾಪಥವನುರಿ
`ಅಕಾಯೋ ಭಕ್ತಕಾಯಸ್ತು ಮಮಕಾಯಸ್ತು ಭಕ್ತಿಮಾನ್
ಎಂದುದಾಗಿ ಲಿಂಗಕಾಯ.

Downloaded from: **www.lingayatreligion.com** 

`ಲಿಂಗಾಂಗೀ ಮಹಜ್ಜೀವೋ
ಎಂದುದಾಗಿ ಲಿಂಗಪ್ರಾಣಿ.
ಇದು ಕಾರಣ,
ಕಾಯ ಲಿಂಗ, ಪ್ರಾಣ ಲಿಂಗ ಅಂತರಂಗ ಬಹಿರಂಗ ಸರ್ವಾಂಗಲಿಂಗ,
**ಲಿಂಗವಂತ**ನ ಕ್ರೀ ಎಲ್ಲವೂ ಲಿಂಗಕ್ರೀ.
ಲಿಂಗ ಮಾಡಿತ್ತೇ ಅರ್ಪಿತ,
**ಲಿಂಗವಂತ**ನ ಆರೋಗಣೆ ಲಿಂಗದಾರೋಗಣೆ.
ಈ ಮಹಾಜ್ಞಾನದ ಪರಿಣಾಮವೇ ಪ್ರಸಾದ,
ಇದ್ದುದೇ ದೇವಲೋಕ.
ಈ ಮಹಾಕ್ರೀಯ **ಲಿಂಗಾಯತ**ದ **ಲಿಂಗವಂತ**ರೆ ಬಲ್ಲರು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

1602
ಸದ್ಭಕ್ತಿಯೆ ಆರು ಸ್ಥಲಕ್ಕೆ ಮುಖ್ಯ
ಸದ್ಭಕ್ತಿಯ ಕೂಡಿಕೊಂಡು ಷಟ್ಸ್ಥಲವಿಪ್ಪುದು.
ಇದು ಕಾರಣ: ಸದ್ಭಕ್ತಿಯಿಂ ಲಿಂಗದ-**ಲಿಂಗವಂತ**ರ ಸುಖವನು, ಮಹಿಮೆಯ ಪೂಜೆಯನು
ಅರಿದು ಮರೆದು ವಿಷ್ಣು ಕಷ್ಟಜನ್ಮದಲ್ಲಿ ಬಂದನು.
ಅರಿದು ಮರೆದು ಬ್ರಹ್ಮನು ಘನವೆಂದು
ಶಿರವ ಹೋಗಾಡಿಕೊಂಡನು.
ಅರಿದು ಮರೆದು ಇಂದ್ರನು ಭಂಗಿತನಾಗಿ
ಐಶ್ವರ್ಯಮಂ ಹೋಗಾಡಿಕೊಂಡನು.
ಅರಿದು ಮರೆದು ದಕ್ಷನು ಭಂಗಿತನಾಗಿ
ಶಿರವ ಹೋಗಾಡಿಕೊಂಡನು.
ಅರಿದು ಮರೆದು ವ್ಯಾಸನು ಹಸ್ತವ ಹೋಗಾಡಿಕೊಂಡನು.
ಈ ದೃಷ್ಟವ ಹಲವು ಪುರಾತನರು ಕೇಳಿರಣ್ಣಾ: ಅರಿದು ಮರೆಯದೆ ನಂಬಲು
ಸಿರಿಯಾಳನಿಗೆ ಶಿವಪದವಾಯಿತ್ತು.
ಅರಿದು ಮರೆಯದೆ ನಂಬಲು
ಸಿಂಧುಬಲ್ಲಾಳಂಗೆ ಶಿವಪದವಾಯಿತ್ತು.
ಅರಿದು ಮರೆಯದೆ ನಂಬಲು
ನಂಬಿಯಣ್ಣನ ಬೆನ್ನಿಲಿ ಶಿವ ಬಂದನು.
ಅರಿದು ಮರೆಯದೆ ನಂಬಲು
ನಿಂಬವ್ವೆಗೆ ಶಿವಪದವಾಯಿತ್ತು.
ಅರಿದು ಮರೆಯದೆ ನಂಬಲು
ಕೆಂಭಾವಿಯ ಭೋಗಣ್ಣನ ಬೆನ್ನಿಲಿ ಶಿವ ಬಂದನು.
ಅರಿದು ಮರೆಯದೆ ನಂಬಲು
ಪುರಾತನರೆಲ್ಲರು ಶಿವಪದಂಗಳ ಪಡೆದರು.
ಇದನು ಶ್ರುತ ದೃಷ್ಟ ಅನುಮಾನದಿಂ ಕೇಳಿ, ನಿಶ್ಚೈಸಿ, ನಂಬಿ.
ಅರಿವಿನ ಹದವಿದು, ಮರವೆಯ ಪರಿಯಿದು
ಇಷ್ಟವಾದುದ ಹಿಡಿದು ಅನಿಷ್ಟವಾದುದ ಬಿಟ್ಟು
ಅರಿವು ಸಯವಾಗಲು ಶಿವಪದವಪ್ಪುದು ತಪ್ಪದು, ಶಿವನಾಣೆ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

1621
ಸ್ಥೂಲತನು ಸೂಕ್ಷ್ಮತನುವಿಡಿದು ಜಾಗ್ರತೆಯಲ್ಲಿ

Downloaded from: **www.lingayatreligion.com** 

ಶ್ರೀಗುರುಲಿಂಗಜಂಗಮದಾಸೋಹವ ಮಾಡದೆ
ಮಾತಿನಬ್ರಹ್ಮ **ಲಿಂಗವಂತ**ರಿಗೆ ತರ್ಕವೇತಕಯ್ಯಾ?
ಸೂಕ್ಷ್ಮತನುವಿಡಿದು ಸ್ವಪ್ನದಲ್ಲಿ
ಇಷ್ಟಲಿಂಗದಲ್ಲಿ ಪ್ರಾಣವೆಚ್ಚರಿಕೆಯಲ್ಲಿ
ಅರಿವೇ ಲಿಂಗವಲ್ಲದೆ ಬ್ರಹ್ಮವಾವುದಯ್ಯಾ?
ಕಾರಣತನುವಿಡಿದು ಸುಷುಪ್ತಿಯಲ್ಲಿ
ತೃಪ್ತಿಲಿಂಗದಲ್ಲಿ ಪ್ರಾಣಲೀಯವಾಗಿ
ಕುರುಹನರಿವನುಳಿದ ಸುಖದರಿವಿನ ಲಿಂಗವನರಿದ ಬಳಿಕ
ನಿರಾಕಾರಬ್ರಹ್ಮವೆಂಬ ನುಡಿಯದೇಕೆ?
ಲಿಂಗಬ್ರಹ್ಮವಾಗಿಪ್ಪರು ನಮ್ಮ ಶರಣರು.
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

1623
ಹಸಿವು ತೃಷೆ ವಿಷಯ ಕಾಮ ಕ್ರೋಧ ಲೋಭ
ಮೋಹ ಮದ ಮತ್ಸರವಾದಿಯಾದ ತನುಗುಣಂಗಳು
ದೇವ ದಾನವ ಮಾನವರಂತೆ ಆದಡೆ, **ಲಿಂಗವಂತ**ನೆಂಬ ಪರಿಯೆಂತಯ್ಯಾ?
ತನುಗುಣಂಗಳು ಭೂತದೇಹಿಗಳಂತಾದಡೆ
ಲಿಂಗದೇಹಿಕನೆಂಬ ಪರಿಯೆಂತಯ್ಯಾ?
ಲಿಂಗಚಿಹ್ನವಿಲ್ಲದಡೆ ಲಿಂಗದೇಹಿಯೆಂಬ ಪರಿಯೆಂತಯ್ಯಾ?
ಹಸಿವು ತೃಷೆ ವಿಷಯ ವ್ಯಸನವಡಗಿದಡೆ ಲಿಂಗಚಿಹ್ನೆ.
ಕ್ರೋಧ ಲೋಭ ಮೋಹ ಮದ ಮತ್ಸರ
ಇವಾದಿಯಾದ ದೇಹಗುಣಂಗಳಳಿದಡೆ ಲಿಂಗಚಿಹ್ನೆ.
ದೇಹಗುಣಭರಿತನಾಗಿ ಲಿಂಗದೇಹಿ ಎಂದಡೆ,
**ಲಿಂಗವಂತ**ರು ನಗುವರಯ್ಯಾ.
ಅಂಗಗುಣವಳಿದು ಗುರುಲಿಂಗಜಂಗಮದಲ್ಲಿ
ತನು ಮನ ಧನ ಲೀಯವಾದಡೆ
ಆತನು ಸರ್ವಾಂಗಲಿಂಗಿಯಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

## 19. ಅಕ್ಕಮ್ಮ

522
ಪಂಚಾಚಾರಶುದ್ಧವಾಗಿ ಇರಬೇಕೆಂಬರಲ್ಲದೆ,
ಪಂಚಾಚಾರದ ವಿವರವನರಿಯರು ನೋಡಾ !
ತಮ್ಮ ಸ್ವಯಾಯತವೆಂಬುದನರಿಯದೆ ಉಂಡಲ್ಲಿ,
ತಮ್ಮ ಲಿಂಗಕ್ಕೆ ಅಲ್ಲದುದ ವಾಸಿಸಿದಲ್ಲಿ,
ತಮ್ಮ ವ್ರತಾಚಾರಕ್ಕೆ ಸಲ್ಲದುದ ನಿರೀಕ್ಷಿಸಿದಲ್ಲಿ,
ತಮ್ಮಾಯತಕ್ಕೊಳಗಲ್ಲದ ಕುಶಬ್ದವ ಕೇಳಿ ಒಪ್ಪಿದಲ್ಲಿ,
ತಮ್ಮ **ಲಿಂಗಾಯತ**ಕ್ಕೆ ಹೊರಗಾದುದ ಮುಟ್ಟಿ ಅಂಗೀಕರಿಸಿದಲ್ಲಿ,
ಇಂತೀ ಪಂಚಾಚಾರದಲ್ಲಿ ಶುದ್ಧತೆಯಾಗಿ
ಗುರುಲಿಂಗಜಂಗಮ ಪಾದತೀರ್ಥ ಪ್ರಸಾದ
ಇಂತೀ ವರ್ತನಪಂಚಾಚಾರಶುದ್ಧವಾಗಿ,
ಬಾಹ್ಯ ಅಂತರಂಗದಲ್ಲಿ ಉಭಯನಿರತವಾಗಿ, ನಿಂದುದು ವ್ರತವಲ್ಲದೆ,

Downloaded from: **www.lingayatreligion.com** 

ಉಂಬ ಉಡುವ ಕೊಂಬ ಕೊಡುವ ಸಂದಣಿಗಾರರ ಶೀಲ ಹಿಂದೆ ಉಳಿಯಿತ್ತು, ಆಚಾರವೆ ಪ್ರಾಣವಾದ ರಾಮೇಶ್ವರಲಿಂಗವ ಮುಟ್ಟದೆ.

## 20. ಏಲೇಶ್ವರ ಕೇತಯ್ಯ

1685
ಜಲ ನೆಲ ಶಿಲೆ ತಾನಾಡುವ ಹೊಲ ಮುಂತಾಗಿ
ಸರ್ವವೆಲ್ಲವು **ಲಿಂಗಾಯತ** ಸಂಬಂಧವಾಗಿ,
ಭವಿಸಂಗ, ಭವಿನಿರೀಕ್ಷಣೆ, ಭವಿ ಅಪೇಕ್ಷೆ, ಭವಿದ್ರವ್ಯಂಗಳನೊಲ್ಲದೆ,
ಶಿವನನರಿವರಲ್ಲಿ, ಶಿವನ ಪೂಜೆಯ ಮಾಡುವರಲ್ಲಿ,
ಶಿವಮೂರ್ತಿಧ್ಯಾನದಿಂದ ಶಿವಲಿಂಗಾರ್ಚನೆಯ ಮಾಡುವರಲ್ಲಿ,
ಶಿವಪ್ರಸಾದವ ಕಾಡಿ ಬೇಡಿ ತಂದು ಒಡೆಯನಿಗಿತ್ತು
ಆ ಪ್ರಸಾದವ ಏಲೇಶ್ವರಲಿಂಗಕ್ಕೆ ಕೊಟ್ಟ
ಆ ವ್ರತಭಾವಿಗೆ ನಮೋ ನಮೋ ಎನುತಿದ್ದೆ.

## 21. ಮೂರುಸಾವಿರ ಮುಕ್ತಿಮುನಿ

47
ಪರಮಕೈಲಾಸದ ವಡಬಾಗ್ನಿಮಂಟಪದಲ್ಲಿ
ಅನಾದಿಪ್ರಮಥಗಣಾರಾಧ್ಯರು ತಿರಸ್ಕರಿಸಿ
ಮಹಾಜ್ಞಾನಾಗ್ನಿಯಿಂದ ದಹಿಸಿದ ಪಂಚಸೂತಕಮಂ,
ಪರಮೇಶ್ವರನು ಚಿತ್ಕಾಂತೆಯಾದ ಶಾಂಭವಿಗೆ ಉಪದೇಶಿದನು.
ಆಗಮೋಕ್ತ ಸಾಕ್ಷಿ : ``ಆದಿಬಿಂದೋದ್ಭವೆ ಬೀಜಂ ಬೀಜಮಧ್ಯಂ ಸ್ಥಿತಂ ಕುಲಃ |
ಬೀಜಃ ನಾಸ್ತಿ ಕುಲೋ ನಾಸ್ತಿ ತಸ್ಮೆ ಗಣಕುಲೋ ಭವೇತ್ ||''
ಎಂದುದಾಗಿ,
ಮಹಾಜ್ಞಾನೋದಯದಿಂದ ಪೂರ್ವಜನ್ಮವಳಿದು
ಪುನರ್ಜಾತನಾದನಾಗಿ,
ಸರ್ವಾಂಗದಲ್ಲಿ ಚಿದ್ರೂಪವಾದ,
ಚಿನ್ಮಯ **ಲಿಂಗಾಯತ** ಸ್ವಾಯತ ಸನ್ನಹಿತವಾದವಧಾನ
ಸದ್ಧರ್ಮ ಸದ್ಭಕ್ತ ಮಹೇಶ್ವರರಿಗೆ
ಜನನಸೂತಕವೆಂಬುದೆ ಪರಮಪಾತಕ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ.

53
ಕರ್ಮಭೂಭಾರಿಗಳಾದಂಥ ಭವಿಶೈವರು ವರ್ತಿಸುವಂಥ
ಜಾತಿಸೂತಕನಿರಸನದ ವಚನಸೂತ್ರವದೆಂತೆಂದೊಡೆ ;
ಜಡಶೈವಕರ್ಮಜಾತವ ಕಳೆದು ಪರಾತ್ಪರ ಪರಮಾಣು
ಪರನಾದಬಿಂದುಕಳಾಚರಿತ್ರಮೂರ್ತಿ ಶ್ರೀಗುರುಲಿಂಗದೇವರು
ಜಡಜೀವಭಾವವನಳಿದು ಶಿವಭಾವ ಮಾಡಿದ
ಕಾರಣಿಕರಾದ ಪುಣ್ಯಸ್ವರೂಪರೊಳ್ ನಿಃಕಳಂಕ ಪರಶಿವಕುಲವಲ್ಲದೆ
ಅನ್ಯಥಾ ಕುಲವುಂಟೆ ಸದ್ಭಕ್ತಶರಣರಿಗೆ ?
ಆವಾಶ್ರಮದಲ್ಲಿ ಅವತರಿಸಿದರೇನು ?

Downloaded from: **www.lingayatreligion.com** 

ಪರಿಪೂರ್ಣಮಹಾಜ್ಞಾನವೆಂಬ ಜ್ಯೋತಿರ್ಮಯ
ಮಹಾಘನ ಪ್ರಸನ್ನತಿಪ್ರಸನ್ನದಿಂದ
ಅಂಗ ಮನ ಪ್ರಾಣ ಭಾವೇಂದ್ರಿಕರಣಗಳೊಳು
ಚಿದ್ಘನ **ಲಿಂಗಾಯತ** ಸ್ವಾಯತ ಸನ್ನಿಹಿತ
ಪರಮಾರಾಧ್ಯ ಚರಪಾದತೀರ್ಥಪ್ರಸಾದ ಮಂತ್ರವಾದ ಶರಣರಲ್ಲಿ
ಜಾತ್ಯಾಶ್ರಮಕುಲವನರಸುವರೆ ?
ಅಯೋನಿಜ ಅಜಡಸ್ವರೂಪಗಣಸಭೆಯಲ್ಲಿ
ಸರ್ವಾಚಾರಸಂಪತ್ತಿನ ಸತ್ಕ್ರಿಯಾಜ್ಞಾನಾನುಭಾವದ
ಸತ್ಯಶುದ್ಧ ನಡೆನುಡಿಯನರಸಬೇಕಲ್ಲದೆ,
ಮಾನವರಂತೆ ಮನುಷ್ಯರೆಂದು ಭಾವಿಸಲಾಗದು
ಸದ್ಭಕ್ತ ಮಹೇಶ ಪ್ರಮಥಗಣಾರಾಧ್ಯರು.
ಇದಕ್ಕೆ ಹರವಾಕ್ಯ ಪ್ರಮಾಣು ಅದೆಂತೆಂದೊಡೆ-ಸಾಕ್ಷಿ : ``ಗ್ರಾಮೀಣಮಲಿನಂ ತೋಯಂ ಯಥಾ ಗಚ್ಛತಿ ಸಾಗರಂ |
ಶಿವಸಂಸ್ಕಾರಸಂಪನ್ನೇ ಜಾತಿಭೇದಂ ನ ಕಾರಯೇತ್ ||
ಯಥಾ ಪಂಕೇ ಸರೋಜಸ್ಯ ಯಥಾ ಕಾಷ್ಠೇ ಹುತಾಶನಃ |
ಯಥಾ ಪಾಷಾಣೇ ಸುವರ್ಣಂ ಭಕ್ತ ಶ್ಚಾಂಡಾಲವಂಶಜಾಃ ||
ಯಥಾ ಕ್ಷೀರಂ ತಥಾ ಘೃತಂ ಯಥಾ ತಿಲಂ ತಥಾ ತೈಲಂ |
ಯಥಾ ಪುಷ್ಪಮ್ ತಥಾ ಗಂಧಃ ಯಥಾ ಜಾತಸ್ತಥಾ ಗುಣಃ ||"
ಎಂದುದಾಗಿ,
ಘನಲಿಂಗಾಂಗಸಂಗಸಮರತಿಯೋಗಾನುಸಂಧಾನ ನಡೆನುಡಿಯುಳ್ಳ
ಸದ್ಭಕ್ತಗಣಾರಾಧ್ಯರಲ್ಲಿ ಜಾತ್ಯಾಶ್ರಮ ಕುಲಗೋತ್ರವನರಸಲಾಗದು.
ಜ್ಯೋತಿರ್ಮಯ ಪರಶಿವಸ್ವರೂಪ ಗುರುಲಿಂಗಜಂಗಮಸಂಬಂಧವನುಳ್ಳ
ಸದ್ಭಕ್ತಗಣಂಗಳೆ ಕೇವಲ ನಿಃಕಲಪರಶಿವಜಾತರು.
ಚಿದ್ಘನಲಿಂಗಪ್ರತಿಬಿಂಬರು, ಅಯೋನಿಸಂಭವರು, ಅಜಾತಚರಿತ್ರರು,
ನಿತ್ಯನಿರ್ಮಲರು ನಿರ್ದೋಷಿಗಳು ನಿಃಕಾಮಿಗಳು ನಿಃಕ್ರೋಧಿಗಳು
ನಿರ್ಲೋಭಿಗಳು ನಿರ್ಮೋಹಿಗಳು ನಿರ್ಮದರು ನಿರ್ಮಚ್ಚರರು
ನಿರೂಪಾಧಿಕರು ನಿಃಕಳಂಕರು ನಿರೋಗಿಗಳು
ನಿತ್ಯಶಿವಾನಂದ ಕಲ್ಯಾಣರು ನಿತ್ಯಶಿವಯೋಗಸಂಪನ್ನರು
ನಿತ್ಯ ದಾಸೋಹ ಪರಮಾನಂದತೃಪ್ತರು,
ಸತ್ತುಚಿತ್ತಾನಂದ ನಿತ್ಯಪರಿಪೂರ್ಣ ಅವಿರಳಪರಂಜ್ಯೋತಿಸ್ವರೂಪ
ಸಗುಣ ನಿರ್ಗುಣ ನಿಜಾನಂದಲೋಲುಪ್ತರು,
ಅಂಗದಾಚಾರಕ್ಕೆ ಆಯತವ ಮಾಡಿದವರು,
ಪ್ರಾಣಷಟ್ಸ್ಥಲಕ್ಕೆ ಸ್ವಾಯತವೆಂದೆನಿಸಿದವರು,
ಭಾವದಷ್ಟಾವರಣಕ್ಕೆ ದಾಸನೆಂದೆನಿಸಿದವರು,
ಕರಣೇಂದ್ರಿಯಗಳ ಸತ್ಕ್ರಿಯ ಸಮ್ಯಜ್ಞಾನ
ಜಪತಪೋಪದೇಶದಲ್ಲಿ ಪರಮಾನಂದಭರಿತರು,
ಚಿದ್ಬೆಳಗಿನ ಚಿದ್ಬ್ರಹ್ಮದ ಬೆಳಗಿನಲ್ಲಿ ಘನಮನವೇದ್ಯರು,
ವಾಣಿನಾಲ್ಕರಡಿಮೆಟ್ಟಿನಿಂದ ನಿರ್ವಾಣಪದಪ್ರದಾಯಕರು.
ನಿಜಮುಕ್ತಿಸ್ವರೂಪ ನಿರವಯ ಸಮಾದ್ಯಸ್ತರುವಪ್ಪ
ಶಿವವಂಶೋದ್ಧಾರಕ ಸದ್ಭಕ್ತಗಣಂಗಳಿಗೆ
ಪೂರ್ವಜಾತವ ಕಲ್ಪಿಸಿ ಅವರ ಗೃಹಂಗಳ ವಿಡಂಬಿಸಿ,
ಭೌತಿಕಜಡಾನ್ನ ನೀರಿನ ಶೀಲವ ಹಿಡಿದು,
ಪರದೈವದ ಪೂಜೆ, ಪರಸ್ತ್ರೀಯರ ಗಮನ, ಪರದ್ರವ್ಯಾಪಹಾರ,
ನಿಂದೆ ವಂದನೆ ಪರಜೀವಹಿಂಸೆಯನೆಸಗಿ,

Downloaded from: **www.lingayatreligion.com** 

ಗುರುಲಿಂಗಜಂಗಮದ ದೀಕ್ಷೋಪದೇಶವನರಿಯದೆ
ಸತ್ಕ್ರಿಯಾಜ್ಞಾನ ಬಾಹ್ಯರಾಗಿ,
ವಿಷಯಾತುರದಿಂದ ವರ್ತಿಸುವಂಥ ಭವಭಾರಿಗಳ
ಪಿತ-ಮಾತೆ ಗುರು-ಹಿರಿಯರು ಸತಿ-ಸುತರು
ಬಂಧು-ಬಳಗ ಹೆಣ್ಣು-ಗಂಡಿನ ನೆಂಟರೆಂದು ಒಡಗೂಡಿ
ಶಿವಾಚಾರಸಂಪನ್ನರೆಂದು ನುಡಿಗಡಣದಿಂದ
ಕುಲಜಾತಿ ಆಶ್ರಮಕ್ಕೆ ಚಲಗತರಾಗಿರ್ಪುದೆ ದ್ವಿತೀಯ ಸೂತಕ ಕಾಣಾ
ನಿರವಯಪ್ರಭು ಮಹಾಂತ ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ.

## 22. ಸಂಗನಬಸವೇಶ್ವರದೇವರು

961
ಅಯ್ಯಾ, ಇಂತು ವಿರಾಜಿಸುವ ಗುರುಸಿದ್ಧೇಶ್ವರಸ್ವಾಮಿಗಳು.
ಮುಂದೆ, ಗುರುಪುರದ ಮೇಲುಮಠದ ಮಹಾಮಂದಿರದ
ರಂಗಮಂಟಪ ಸಿಂಹಾಸನಕ್ಕೆ ಮೂಲಮೂರ್ತಿಯಾದ
ಮರಿಮಹಾಂತೇಶ್ವರಸ್ವಾಮಿಗಳು.
ಆ ಮರಿಮಹಾಂತೇಶ್ವರನ ಕರಕಮಲೋದ್ಭವನಾದ
ಶಿವಪುರದ ಬಸವಪ್ರಭುಶೆಟ್ಟಿ.
ಆ ಬಸವಪ್ರಭುಶೆಟ್ಟಿಯ ಕರ ಮನ ಸುಭಾವದಲ್ಲಿ ಪೂಜೆಗೊಂಡು
ಆ ಬಸವಪ್ರಭುಶೆಟ್ಟಿಯ ತಮ್ಮ ಚರಣಕಮಲದಲ್ಲಿ
ಅಮಳೈಕ್ಯವ ಮಾಡಿಕೊಂಡ ಮೇಲೆ ಮಹಾಜ್ಞಾನ ತಲೆದೋರಿ
ಸಮಸ್ತ ಭೋಗಂಗಳ ತ್ಯಜಿಸಿ ವೈರಾಗ್ಯದಿಂದ
ಗುರೂಪಾವಸ್ತೆಯ ಮಾಡುತ್ತಿರಲು,
ಆ ಸಮಯದಲ್ಲಿ ಹರದನಹಳ್ಳಿ ಸ್ಥಾಪನಾಚಾರ್ಯ
ಶಿವಲಿಂಗಶಕ್ತಿವಲ್ಲಭನಾದ
ಬಸವಲಿಂಗದೇಶಿಕೋತ್ತಮನು ಪ್ರತ್ಯಕ್ಷವಾಗಿ
ಆ ಸಂಗನಬಸವೇಶ್ವರಸ್ವಾಮಿಗಳ ಒಡಗೂಡಿಕೊಂಡು
ಶ್ರೀಶೈಲಪರ್ವತಕ್ಕೆ ನೈಋತ್ಯಭಾಗದಲ್ಲೊಪ್ಪುವ
ಕುಮಾರಪರ್ವತದ ಉತ್ತರದಿಕ್ಕಿನಲ್ಲೊಪ್ಪುವ
ನಾಗರಗವಿಯೆಂಬ ಸಿಂಹಾಸನದಲ್ಲಿ ಜಂಗಮಮೂರ್ತಿಗಳೊಡಗೂಡಿ
ಶಿವಾನುಭಾವಸೂತ್ರದಲ್ಲೊಪ್ಪುವ ಗುರುಸಿದ್ಧಸ್ವಾಮಿಗಳಿಗೆ
ಉಭಯಮೂರ್ತಿಗಳು ಅಷ್ಟಾಂಗಪ್ರಣಿತರಾಗಿ ಅಭಿವಂದಿಸಲು,
ಆಗ ಮಹಾಸ್ವಾಮಿಗಳು ದಯಾಂತಃಕರುಣ ಹುಟ್ಟಿ
ಬಸವಲಿಂಗದೇಶಿಕೇಂದ್ರನ ಆಪ್ತತ್ವದಿಂದ ಹರಗುರುವಾಕ್ಯಪ್ರಮಾಣವಾಗಿ
ಸ್ಥಲಮೆಟ್ಟಿಗೆಯಿಂದ ಮಣಿಗಣಸೂತ್ರದಂತೆ ಸೇರಿಸಿ
ಬೋಧಿಸುವ ಸಮಯದಲ್ಲಿ ಬಸವಲಿಂಗೇಶ್ವರನು ಲಿಖಿತವ ಮಾಡಿ,
ಆ ಗುರುವರನ ಹಸ್ತಕಮಲಕ್ಕೆ ಕೊಡಲು,
ಆಗ ಗುರುವರನು ಈ ಉಭಯಮೂರ್ತಿಗಳ ಒಡಗೂಡಿ
ಆಸನವ ಬಿಟ್ಟೆದ್ದು ಕತರ್ ುಸ್ವರೂಪವಾದ
ಶಾಂತಮಲ್ಲಸ್ವಾಮಿಗಳ ಮುಂದೆ ಆ ಪುಸ್ತಕವನಿಟ್ಟು
ತ್ರಿವಿಧಮೂರ್ತಿಗಳು ಶರಣುಹೊಗಲು,
ಆಗ ಶಾಂತಮಲ್ಲಸ್ವಾಮಿಗಳು ಆ ಪುಸ್ತಕವ ಬಿಚ್ಚಿ

Downloaded from: **www.lingayatreligion.com**

ಈ ತ್ರಿವಿಧಮೂರ್ತಿಗಳು ಸಹವಾಗಿ
ಸಮಸ್ತ ಜಂಗಮಮೂರ್ತಿಗಳೊಡಗೂಡಿ
ಸ್ವರೂಪಾರ್ಥ-ಸಂಬಂಧಾರ್ಥ-ನಿಶ್ಚಯಾರ್ಥಂಗಳಿಂದ
ಅನುಭಾವವ ಮಾಡಿ,
ಆ ಪುಸ್ತಕಕ್ಕೆ `ಅನಾದಿಷಟ್ಸ್ಥಲ ನಿರಾಭಾರಿ ವೀರಶೈವ ಶರಣನ
ನಿಜಾಚರಣೆಸಂಬಂಧ ಬೋಧಾಮೃತ ನಿಲುಕಡೆ
ಚಿದೈಶ್ವರ್ಯ ಚಿದಾಭರಣ'ವೆಂದು ನಾಮಾಂಕಿತವಿಟ್ಟು,
ಬಸವಲಿಂಗ ಸಾಕ್ಷಿಯಾಗಿ
ಆ ಸಂಗನಬಸವೇಶ್ವರನೆಂಬ ಗಣೇಶ್ವರನ
ಸಿಂಹಾಸನದ ಮೇಲೆ ಮೂರ್ತಮಾಡಿಸಿ,
ಆ ಪುಸ್ತಕವ ತೊಡೆಯಮೇಲಿಟ್ಟು ಸ್ತೋತ್ರವ ಮಾಡಿ,
ಮಂಗಳಾರತಿಯನೆತ್ತಿ , ಪುಷ್ಪಾಂಜಲಿಯ ಮಾಡಿ,
ವಂದಿಸಿದ ಸಮಯದಲ್ಲಿ
ಆಗ ಸಂಗನಬಸವೇಶ್ವರಸ್ವಾಮಿಗಳು
ಈ ವಚನಶಾಸ್ತ್ರದ ಅಭಿಧಾನಕ್ಕೆ ಟಿಪ್ಪಣಿಯ ಮಾಡಿ,
ಸಕಲಪ್ರಮಥಗಣಂಗಳ ಸ್ತೋತ್ರಂಗೈದು
ಮಂಗಳಾರತಿಯನೆತ್ತಿ ಅನಾದಿಸೂತ್ರವ ಹೇಳಿ
ಸಮಾಪ್ತವ ಮಾಡುವ ಪ್ರಸ್ತಾವದ ವಚನ.
ಟೀಕು -
ಬ್ರಹ್ಮ , ವಿಷ್ಣು , ರುದ್ರ, ಈಶ್ವರ, ಸದಾಶಿವರಿಂದ
ಪೂಜಾನಮಸ್ಕಾರಕ್ಕೆ ಕತರ್ುವಾದ ಪರಶಿವಮೂರ್ತಿ,
ಅಂತಪ್ಪ ಪರಶಿವಮೂರ್ತಿಯೆ ಐವರಿಗೆ ಅನಾದಿಯು.
ಅಂತಪ್ಪ ಪರಶಿವ ಸದ್ಭಕ್ತನ ಕರ-ಮನ-ಸುಭಾವದಲ್ಲಿ
ಪೂಜೆಗೊಂಬ ನಿಃಕಲಪರಶಿವಮೂರ್ತಿ ಗುರುಲಿಂಗಜಂಗಮವೆ
ಅನಾದಿಗೆ ಅನಾದಿಯಾಗಿರ್ಪುದೆಂಬುದೀಗ
`ಅನಾದಿ' ಎಂಬ ಶಬ್ದಕ್ಕರ್ಥ.
ಹೀಂಗೆ ಒಪ್ಪಲ್ಪಟ್ಟಂಥ ನಿಃಕಲಪರಶಿವಮೂರ್ತಿ
ಗುರುಲಿಂಗಜಂಗಮದ ಚಿದಾಂಶವೆ
ಭಕ್ತ ಮಹೇಶ್ವರಪ್ರಸಾದಿಪ್ರಾಣಲಿಂಗಿ ಶರಣೈಕ್ಯರೆಂಬುದೀಗ
`ಷಟ್ಸ್ಥಲ' ಎಂಬ ಶಬ್ದಕ್ಕರ್ಥ.
ಬ್ರಹ್ಮ ವಿಷ್ಣು ಇಂದ್ರ ಚಂದ್ರ ಮನು ಮುನಿ ದೇವ ದಾನವ
ಮಾನವರೆಲ್ಲ ಬಿದ್ದ ಭವಪಾಶಂಗಳ ದಾಂಟಿ,
ಸರ್ವಸಂಗಪರಿತ್ಯಾಗತ್ವದಿಂದಿರ್ಪರು
ಭಕ್ತಮಹೇಶ್ವರರೆಂಬುದೀಗ `ನಿರಾಭಾರಿ' ಎಂಬ ಶಬ್ದಕ್ಕರ್ಥ.
ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ ಪಾಶುಪತ
ಕಾಳಾಮುಖಿಯೆಂಬ ಷಣ್ಮತದವರೆ ಶೈವರು!
ಗೊಲ್ಲಾಳಯ್ಯ ಬಳ್ಳೇಶಮಲ್ಲಯ್ಯ ಗುರುಭಕ್ತಯ್ಯ ಮೊದಲಾದ
ನವಮುಗ್ಧರೆ `ವೀರಶೈವರು'.
ಇವ ಎರಡನು ಹಿಡಿದು ಬಳಸುವರೆ ಅಪಶೈವರು.
ಇಂತೀ ಶೈವ-ವೀರಶೈವ ಅಪಶೈವಂಗಳಿಗೆ ಉಪರಿಯಾಗಿ
ಉಪಾಧಿಮಾಟಸ್ಥಲವಿಡಿದು ಒಪ್ಪಲ್ಪಟ್ಟಂಥಾದೆ
ಸಾಮಾನ್ಯ ವೀರಶೈವವೆನಿಸುವುದು.
ಈ ಸಾಮಾನ್ಯ ವೀರಶೈವ-ಅಪಶೈವಂಗಳಿಗೆ ಉಪರಿಯಾಗಿ
ಗುರುಲಿಂಗಜಂಗಮಭಕ್ತಿಯಿಂದ ನಿರುಪಾಧಿಕಮಾಟಸ್ಥಲವಿಡಿದು

Downloaded from: **www.lingayatreligion.com**

ಒಪ್ಪಲ್ಪಟ್ಟಂಥಾದೆ ವಿಶೇಷ ವೀರಶೈವವೆನಿಸುವುದು.
ಆ ವಿಶೇಷ ವೀರಶೈವಕ್ಕೆ ಉಪರಿಯಾಗಿ
ಅಷ್ಟಾವರಣಂಗಳಂತರಂಗ ಬಹಿರಂಗದಲ್ಲಿ
ಸಂಬಂಧಾಚರಣೆಗಳಿಂದ ಅಚ್ಚಾದಿಸಿಕೊಂಡು
ತನ್ನ ತಾನೆ ಪೂಜ್ಯಪೂಜಕತ್ವದಿಂದಿರ್ಪುದೆಂಬುದೀಗ
`ನಿರಾಭಾರಿವೀರಶೈವ' ಎಂಬ ಶಬ್ದಕ್ಕರ್ಥ.
ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ,
ಧ್ಯಾನ ಧಾರಣ ಸಮಾಧಿಯೆಂಬ ಹಟಯೋಗಿಗಳಿಗೆ
ಉಪರಿಯಾಗಿ ರಾಜಿಸುವಂಥ
ಭಕ್ತ ಮಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣೈಕ್ಯಸ್ಥಲಂಗಳ ಮೀರಿ
ನಿರಾವಯ, ನಿಃಶೂನ್ಯ, ನಿರಂಜನಸ್ಥಲದಲ್ಲಿ ನಿಂದ
ಶಿವಯೋಗಿ ಎಂಬುದೀಗ `ಶರಣ' ಎಂಬ ಶಬ್ದಕ್ಕರ್ಥ.
ಭಕ್ತಸ್ಥಲ ಹದಿನೈದು, ಮಹೇಶ್ವರಸ್ಥಲ ಒಂಬತ್ತು ,
ಪ್ರಸಾದಿಸ್ಥಲ ಏಳು, ಪ್ರಾಣಲಿಂಗಿಸ್ಥಲ ಐದು,
ಶರಣಸ್ಥಲ ನಾಲ್ಕು, ಐಕ್ಯಸ್ಥಲ ನಾಲ್ಕು,
ಆಚಾರಲಿಂಗಸ್ಥಲ ಒಂಬತ್ತು , ಗುರುಲಿಂಗಸ್ಥಲ ಹನ್ನೆರಡು,
ಪ್ರಸಾದಲಿಂಗಸ್ಥಲ ಒಂಬತ್ತು, ಮಹಾಲಿಂಗಸ್ಥಲ ಒಂಬತ್ತು
ಇಂತೀ ನೂರೊಂದುಸ್ಥಲಗಳೆ ಶರಣಂಗೆ
ಮಾರ್ಗಕ್ರಿಯಾಸ್ವರೂಪವಾದವೆಂಬುದೀಗ
`ನಿಜ ಆಚರಣೆ' ಎಂಬ ಶಬ್ದಕ್ಕರ್ಥ.
ಭಕ್ತನಂಗಸ್ಥಲ ಹದಿನೆಂಟು,
ಮಹೇಶ್ವರನಂಗಸ್ಥಲ ಹದಿನೆಂಟು,
ಪ್ರಸಾದಿಯಂಗಸ್ಥಲ ಹದಿನೆಂಟು,
ಪ್ರಾಣಲಿಂಗಿಯಂಗಸ್ಥಲ ಹದಿನೆಂಟು,
ಶರಣನಂಗಸ್ಥಲ ಹದಿನೆಂಟು,
ಐಕ್ಯನಂಗಸ್ಥಲ ಹದಿನೆಂಟು,
ಆಚಾರಲಿಂಗಸ್ಥಲ ಹದಿನೆಂಟು,
ಗುರುಲಿಂಗಸ್ಥಲ ಹದಿನೆಂಟು,
ಶಿವಲಿಂಗಸ್ಥಲ ಹದಿನೆಂಟು,
ಜಂಗಮಲಿಂಗಸ್ಥಲ ಹದಿನೆಂಟು,
ಪ್ರಸಾದಲಿಂಗಸ್ಥಲ ಹದಿನೆಂಟು,
ಮಹಾಲಿಂಗಸ್ಥಲ ಹದಿನೆಂಟು,
ಇಂತೀ ಇನ್ನೂರ ಹದಿನಾರು ಸ್ಥಲಂಗಳೆ ಶರಣಂಗೆ
ಮೀರಿದ ಕ್ರಿಯಾಸ್ವರೂಪವಾದವೆಂಬುದೀಗ
`ಸಂಬಂಧ' ಎಂಬ ಶಬ್ದಕ್ಕರ್ಥ.
ಆಜ್ಞಾ, ಉಪಮಾ, ಸ್ವಸ್ತಿಕಾರೋಹಣ, ಕಲಶಾಭಿಷೇಕ,
ವಿಭೂತಿಪಟ್ಟ, **ಲಿಂಗಾಯತ**, ಲಿಂಗಸ್ವಾಯತ,
ಸಮಯ, ನಿಃಸಂಸಾರ, ನಿರ್ವಾಣ, ತತ್ವ, ಆಧ್ಯಾತ್ಮ,
ಅನುಗ್ರಹ, ಸತ್ಯಶುದ್ಧ, ಏಕಾಗ್ರಚಿತ್ತ, ದೃಢವ್ರತ,
ಪಚೇಂದ್ರಿಯಾರ್ಪಿತ, ಅಹಿಂಸೆ, ಲಿಂಗನೈಷ್ಠೆ,
ಮನೋರ್ಲಯ, ಸದ್ಯೋನ್ಮುಕ್ತಿ .
ಇಂತೀ ಇಪ್ಪತ್ತೊಂದು ದೀಕ್ಷೆಗಳೆ
ಶರಣನ ಮಾರ್ಗಕ್ರಿಯಾ ಮೀರಿದಕ್ರಿಯವನೊಳಕೊಂಡು
ಸನ್ಮಾರ್ಗ ನಡೆನುಡಿಗಳಾಗಿರ್ಪುವೆಂಬುದೀಗ

Downloaded from: **www.lingayatreligion.com** 

`ಬೋಧಾಮೃತ' ಎಂಬ ಶಬ್ದಕ್ಕರ್ಥ.
ನೂರೊಂದು ಸ್ಥಲಂಗಳೆ
ಚಿದಂಗ ಚಿದ್ಘನಲಿಂಗವಾಗಿ,
ಇನ್ನೂರ ಹದಿನಾರುಸ್ಥಲಂಗಳೆ
ಚಿತ್ಪ್ರಾಣಾಂಗ ಚಿತ್ಪ್ರಾಣಲಿಂಗವಾಗಿ,
ಏಕವಿಂಶತಿ ದೀಕ್ಷೆಗಳೆ
ಚಿದ್ಭಾವಾಂಗ ಚಿದ್ಭಾವಲಿಂಗವಾಗಿ.
ಇಂತು ಶರಣನ ಅಂಗ-ಪ್ರಾಣ-ಭಾವಂಗಳೆಲ್ಲ
ಇಷ್ಟ-ಪ್ರಾಣ-ಭಾವ `ಆಚರಣೆ-ಸಂಬಂಧ' ಸ್ವರೂಪಗಳಿಂದ
ಒಪ್ಪುತ್ತಿರ್ಪವೆಂಬುದೀಗ `ನಿಲುಕಡೆ' ಎಂಬ ಶಬ್ದಕ್ಕರ್ಥ.
ಸದ್ಭಕ್ತನ ಆಚಾರಲಿಂಗಾನುಭಾವ
ವೀರಮಾಹೇಶ್ವರನ ಗುರುಲಿಂಗಾನುಭಾವ,
ಶಿವಪ್ರಸಾದಿಯ ಶಿವಲಿಂಗಾನುಭಾವ,
ನಿಜಪ್ರಾಣಲಿಂಗಿಯ ಚರಲಿಂಗಾನುಭಾವ,
ನಿಜಶರಣನ ಪ್ರಸಾದಲಿಂಗಾನುಭಾವ,
ನಿರಾಲಂಬನ ನಿಃಕಳಲಿಂಗಾನುಭಾವ,
ನಿಜೈಕ್ಯನ ಮಹಾಲಿಂಗಾನುಭಾವ,
ನಿರಾವಯನ ನಿಃಶೂನ್ಯಲಿಂಗಾನುಭಾವ,
ನಿರ್ಮಾಯನ ನಿರಂಜನಲಿಂಗಾನುಭಾವ,
ಇಂತು ನವಲಿಂಗಾನುಭಾವಂಗಳೆ
ಶರಣನಂತರಂಗದಲ್ಲಿ ಮಹಾಜ್ಞಾನಪ್ರಕಾಶದಿಂದ
ಒಪ್ಪುತ್ತಿರ್ಪವೆಂಬುದೀಗ `ಚಿದೈಶ್ವರ್ಯ' ಎಂಬ ಶಬ್ದಕ್ಕರ್ಥ.
ಅರವತ್ತುನಾಲ್ಕು ತೆರದ ಆವರಣಂಗಳು,
ನೂರ ನಾಲ್ವತ್ತುನಾಲ್ಕು ಆಚಾರಂಗಳು,
ಮುನ್ನೂರ ಇಪ್ಪತ್ತುನಾಲ್ಕು ಚಕ್ರಂಗಳು,
ಸರ್ವಾಚಾರಸಂಪತ್ತಿನ ಮೂವತ್ತೆರಡು ಉದ್ಧರಣೆಗಳು,
ಶಿವಯೋಗಸ್ಥಾಪನಸ್ಥಲ, ಪ್ರಾಣಲಿಂಗಪೂಜಾವಿಧಾನಸ್ಥಲ,
ನವಲಿಂಗಾರ್ಚನಾಸ್ಥಲ, ಪರತತ್ವಲಿಂಗಪ್ರಕಾಶಸ್ಥಲ,
ಶಿವಾದ್ವೈತ ಶರಣಪ್ರಕಾಶಸ್ಥಲ, ಮಹಾಲಿಂಗೈಕ್ಯಸ್ಥಲ,
ಜ್ಞಾನಶೂನ್ಯಸ್ಥಲವೆಂಬ ಏಳು ಮಂತ್ರಗೋಪ್ಯಂಗಳು,
ಅಷ್ಟವಿಧ ಮಹಾಮಂತ್ರ ಸಕೀಲ ಸಮಾಧಿ ಮೊದಲಾದ
ಚಿತ್ಪ್ರಕಾಶಂಗಳೆ ಶರಣಂಗೆ ಆಭರಣವಾಗಿರ್ಪುದು.
ಶ್ರೀಗುರು ಸಿದ್ಧಲಿಂಗೇಶ್ವರನ ಕೃಪಾಪ್ರಸನ್ನತ್ವದಿಂದ
ಎನ್ನ ಕರ-ಮನ-ಸುಭಾವದಲ್ಲಿ ಪ್ರಭಾವಿಸುವ
ಚಿದ್ಘನ ಇಷ್ಟಮಹಾಲಿಂಗದ ಬೆಳಗಿನೊಳಗೆ ಕಂಡೆನೆಂಬುದೀಗ
`ಚಿದಾಭರಣ' ಎಂಬ ಶಬ್ದಕ್ಕರ್ಥ.
ಹೀಂಗೆ ಅನಾದಿವಿಡಿದು ಬಂದ ಗುರು-ಲಿಂಗ-ಜಂಗಮ
ಅನಾದಿವಿಡಿದುಬಂದ ಪಾದೋದಕ-ಪ್ರಸಾದ
ಅನಾದಿವಿಡಿದುಬಂದ ವಿಭೂತಿ-ರುದ್ರಾಕ್ಷಿ
ಅನಾದಿವಿಡಿದುಬಂದ ತ್ರಿಯಕ್ಷರ-ಪಂಚಾಕ್ಷರ-ಷಡಕ್ಷರ
ಅನಾದಿವಿಡಿದು ಬಂದ ಗುರು-ಶಿಷ್ಯ,
ಅಂಗ-ಲಿಂಗ, ಭಕ್ತ-ಜಂಗಮ ಶರಣಸಂಬಂಧ,
ಅನಾದಿವಿಡಿದು ಬಂದ ಆಚಾರ-ಆಚರಣೆ
ಸಂಬಂಧ ಸತ್ಕ್ರಿಯಾ ಜ್ಞಾನಸ್ವರೂಪ ನಿಲುಕಡೆ.

Downloaded from: **www.lingayatreligion.com**

ಅನಾದಿವಿಡಿದುಬಂದ ಭಕ್ತಿ-ಜ್ಞಾನ-ವೈರಾಗ್ಯ-ಸಕೀಲಸಂಬಂಧ
ಶಿವಯೋಗ ಶಿವಾನುಭಾವದ ನಿಜಮಹಾಲಿಂಗೈಕ್ಯಾನುಭಾವ ನೋಡಾ
ಶ್ರೀಗುರುಸಿದ್ಧಲಿಂಗೇಶ್ವರರಿಗೆ ರೂಪು ರುಚಿತೃಪ್ತಿಯಾದ
ಬಸವಲಿಂಗೇಶ್ವರ.

1378
ಮತ್ತಮಾ ಚಿರಂನಿರ್ವಾಣದೀಕ್ಷೆಯು, ಆಜ್ಞಾದೀಕ್ಷೆಯು, ಉಪಮಾದೀಕ್ಷೆ
ಸ್ವಸ್ತಿಕಾರೋಹಣ್, ವಿಭೂತಿಯಪಟ್ಟ. ಕಲಶಾಭಿಷೇಕ, **ಲಿಂಗಾಯತ**, ಲಿಂಗ
ಸ್ವಾಯತಗಳೆಂದು ಏಳು ಪ್ರಕಾರವು. ಅವರೊಳು ಗುರುವಿನಾಜ್ಞಾಪಾಲನದಲ್ಲಿ
ಸಮರ್ಥವಾದುದು ಆಜ್ಞಾದೀಕ್ಷೆ ಎನಿಸಿಕೊಂಬುದು. ಪುರಾತನರುಗಳ ಸಮಯಾ
ಚಾರಕ್ಕೆ ಸದೃಶವಾದುದು ಉಪಮಾದೀಕ್ಷೆ ಸ್ವಸ್ತಿಕವೆಂಬ ಮಂಡಲದ ಮೇಲೆ ಶಿಷ್ಯ
ನ ಕುಳ್ಳಿರಿಸಿ,ಮಂತ್ರನ್ಯಾಸಮಂ ಮಾಡಿ, ಮಂತ್ರಪಿಂಡವಾಗಿ ಮಾಡುವದು ಸ್ವಸ್ತಿ
ಕಾರೋಹಣ. ಆಗಮೋಕ್ತಸ್ಥಾನಂಗಳಲ್ಲಿ ತತ್ತನ್ಮಂತ್ರಂಗಳಿಂ ವಿಭೂತಿಧಾರಣವು
ವಿಭೂತಿಯಪಟ್ಟ. ಪಂಚಕಲಶಂಗಳಲ್ಲಿ ತೀರ್ಥೋದಕಗಳಂ ತುಂಬಿ ಶಿವಕಲಾ
ಸ್ಥಾಪನಂ ಮಾಡಿ, ಆ ಕಲಶೋದಕಂಗಳಿಂ ಶಿಷ್ಯಂಗೆ ಸ್ನಪನವಂ ಮಾಡೂದು ಕಲ
ಶಾಭಿಷೇಕ. ಆಚಾರ್ಯನು ಶಿಷ್ಯಂಗೆ ಉಪದೇಶಿಸಲ್ತಕ್ಕೆ ಲಿಂಗಮಂ ತಾನು ಆರ್ಚನೆ
ಯಂ ಮಾಡಿ, ಶಿಷ್ಯನಂ ನೋಡಿಸುವುದು **ಲಿಂಗಾಯತ**ವೆನಿಸಿಕೊಂಬುದು. ಆ
ಶ್ರೀಗುರುನಾಥನಿಂದುಪದಿಷ್ಟವಾದ ಪ್ರಾಣಲಿಂಗವನು ಶಿಷ್ಯನು ಭಕ್ತಿಯಿಂ ಸ್ವೀಕ ರಿಸಿ, ತನ್ನ
ಉತ್ತಮಾಂಗಾದಿ ಸ್ಥಾನಂಗಳಲಿ ಧರಿಸೂದು ಲಿಂಗಸ್ವಾಯತವೆನಿಸಿಕೊಂಬುದು. ಇಂತೆಂದು
ಕಾಮಿಕಂ ಪೇಳೂದಯ್ಯ, ಶಾಂತವೀರಪ್ರಭುವೆ.

1450
ಬಳಿಕ ಕ್ರಿ....ತನ್ನ ಶಿಷ್ಯನ ಕರೆದೆಲೆ ಮಗನೆ ನಿನ್ನ ಪ್ರಾ[ಣ]ಲಿಂಗವಿದು ತಾನೆ, ತತ್ವಾತೀತಮಾದ
ಪರವಸ್ತುವಿದು ತಾನೆ, ಹರಿಬ್ರಹ್ಮರರಸಿ ಕಾಣದ ನಿಜತತ್ವವಿದ ನಿನ್ನು ನಿಮಿ...ರ್ಧಮಾದರೂ
ನಿನ್ನ ಶರೀರದಿಂ ವಿಯೋಗಮಾಗದಂತೆ ಸಾವಧಾನದಿಂ ಧರಿಸು, ತ್ರಿಕಾಲಂ ತಪ್ಪದರ್ಚಿಸುತ್ತಿರು,
ಲಿಂಗಾರ್ಪಿತವಲ್ಲ ದೇನೊಂದನು ಸ್ವೀಕರಿಸದಿರು, ಸಕಲಭೋಗಮೋಕ್ಷಂಗಳೆಲ್ಲಾ...ಸಾರಿದವೆಂದು
ನಂಬು, ಸರ್ವ ಕ್ಲೇಶಮಂ ಬಿಡು, ನಿತ್ಯಸುಖಿಯಾಗು, ಸತ್ಯಮಿದೆಂಬಿವು ಮೊದ ಲಾದ
ಶಿವಕ್ರಿಯೆಗಳ ನುಪದೇಶಂಗೆಯ್ಯುಂತು ಪೇಳ ವೀರಶೈವದೀಕ್ಷೆಯಾದೊಡೆ ಆಜ್ಞಾದೀಕ್ಷೆ
ಉಪ[ಮಾ]ದೀಕ್ಷೆ, ಸ್ವಸ್ತಿಕಾರೋಹಣ, ಕಳಶಾಭಿಷೇಕ, ವಿಭೂತಿಯ ಪಟ್ಟ, **ಲಿಂಗಾಯತ**,
ಲಿಂಗಸ್ವಾಯತಮೆಂದು ಸಪ್ತವಿಧಮಾಗಿಹುದವರಲ್ಲಿ ಶ್ರೀಗುರು ತನ್ನಾಜ್ಞೆಯನೆ ಶಿಷ್ಯನಲ್ಲಿ
ಪ್ರತಿಪಾದಿಸೂದೆ ಆಜ್ಞಾದೀಕ್ಷೆ ಎನಿಸೂದು. ಪುರಾತನ ಸಮಯಾಚಾರಕ್ಕೆ ಸದೃಶಮಾಗಿ
ಮಾಡೂದೆ ಉಪಮಾದೀಕ್ಷೆ ಎನಿಸೂದು. ಸ್ವಸ್ತಿಕಮೆಂಬ ಮಂಡಲದ ಮೇಲೆ ಶಿಷ್ಯನಂ ಕುಳ್ಳಿರಿಸಿ
ಮಂತ್ರ ನ್ಯಾಸಾದಿಗಳಂ ಮಾಡಿ ಮಂತ್ರಶರೀರಿ ಎನಿಸೂದೆ ಸ್ವಸ್ತಿಕಾರೋಣವೆನಿಸೂದು.
ಪಂಚಕಳಶೋದಕಂಗಳಿಂ ಶಿಷ್ಯಂಗೆ ಸ್ನಪನಂಗೆಯ್ವುದೆ ಕಳಶಾಭಿಷೇಕವೆನಿ ಸೂದು.
ಆಗಮೋಕ್ತಸ್ಥಾನಂಗಳಲ್ಲಿ ತತ್ತನ್ಮಂತ್ರಂಗಳಿಂ ಶ್ರೀವಿಭೂತಿ ಧಾರಣಂ ಗೆಯ್ವುದೆ ವಿಭೂತಿಯ
ಪಟ್ಟವೆನಿಸೂದು. ಆಚಾರ್ಯಂ ತಾನೂ ಶಿಷ್ಯಂಗೆ ಕೊಡಲುತಕ್ಕ ಲಿಂಗವನರ್ಚಿಸಿ ಶಿಷ್ಯನಂ
ನೋಡಿಸೊದೆ **ಲಿಂಗಾಯತ**ವೆನಿಸೂದು. ಆ ಶ್ರೀಗುರುವಿತ್ತ ಲಿಂಗವನೆ ಶಿಷ್ಯನು
ಸಾವಧಾನದಿಂದುತ್ತಮಾಂಗಾದಿ ಸ್ಥಾನಂಗಳಲ್ಲಿ ಧರಿಸೂದೆ ಲಿಂಗಸ್ವಾಯತವೆನಿಸೂದು. ಇಂತು
ಶಾಸ್ತ್ರೋಕ್ತ ಕ್ರಮದಿಂ ಸಾಂಗಿಕಮಾದ ಶಿವದೀಕ್ಷೆಯಿಂ ಲಿಂಗಾಂಗಸಂಬಂಧಿಯಾದವನು ಮಾಳ್ಪ
ಶಿವಲಿಂಗ ಪೂಜಾಕ್ರಮವೆಂತೆಂದೊಡೆ :ಶ್ರೇಷ್ಠರುಗಳಾ ವಾವುದನಾಚರಿಸುವರದನೆ
ಲೋಕದವರನುವರ್ತಿಪುದರಿಂ, ಜಗಕ್ಕುಪದೇಶ ಮಪ್ಪಂತೆ ತಾನು ನಿತ್ಯನಿರ್ಮಲನಾದರೂ
ಮಂತ್ರನ್ಯಾಸಾ... [ಸಾಂಸ್ಥಿಕಮಾಗಿ] ಶಿವಲಿಂಗಾರ್ಚನೆಯಂ ಮಾಡುವಲ್ಲಿ
ಮೊದಲು...ಳತನುಲಿಂಗುಪದೇಶಮಂ ಮಾಳ್ಪುದು. ಪದಿನೆಂಟುಕುಲ ಪ್ರವರ್ತನೆಯನಳಿದು,
ಶರಣರ ಕುಲ ವನೊ.... ಶಿವಪೂಜೋಪಚಾರವೆ ತನಗೆ ಸಂಸಾರವೆನಲದುವೆ ನಿಸ್ಸಂಸಾರ ದೀಕ್ಷೆ

Downloaded from: **www.lingayatreligion.com** 

ತ್ರಿಮಲ ಭವದೊಳು...ಲಿಂಗಾಂಗಸಮರಸವ ಮಾಳ್ಪುದೆ ತತ್ವದೀಕ್ಷೆ. ಲಿಂಗಾಂಗಸ್ವಯ ಲಿಂಗ ನೀನೆಂದು ತಿಳುಪುವದೆ ಅ...ಹವು ಹಿಂಗದಾ ಸಚ್ಚಿದಾನಂದಬ್ರಹ್ಮಾತ್ಮಕ ತಾನೆನಲ ದುಸತ್ಯಶುದ್ಧೀದಕ್ಷೆ. ಯೀ ಸಪ್ತಕವ....ಯದೆಹುದೆ ಏಕಾಗ್ರಚಿತ್ತದೀಕ್ಷೆ. ವ್ರತನಿಯಮಂ[ಗಳಲ್ಲಿ]....ಯ ಕರಣಭಾವಾರ್ಪಿತಗಳಂ ಸರ್ವಕಾಲದೊಳು ಇಷ್ಟ ಪ್ರಾಣವಾಸ ಲಿಂಗಂ.....ದಿರ್ಪುದೆ ....ದೀಕ್ಷೆಯೆನಿಪುದು. ಆದಿಮಧ್ಯಾವ ಸಾನರಹಿತ ಶಿವ ತಾನೆ ನಲ....ಚ್ಚಿ ಬೇರ್ಪಡಿಸದಿರವೆ ಸದ್ಯೋನ್ಮುಕ್ತಿದೀಕ್ಷೆ. ಈ ಏಳನು ಭಾವಕುಪದೇಶ ಮಂ....(ಅಪೂರ್ಣ)

Downloaded from: **www.lingayatreligion.com** 

## ➢ ಬಸವೋತ್ತರ ಯುಗ (೧೨ನೇ ಶತಮಾನದ ನಂತರದ ಶರಣರು)

### 1. ಷಣ್ಮುಖಸ್ವಾಮಿ

911
ಲಿಂಗದೊಡನೆ ಸಹಭೋಜನ ಮಾಡುವ
**ಲಿಂಗವಂತ**ರೆಲ್ಲ ನೀವು ಕೇಳಿರೊ !
ನಿಮ್ಮ ತನು ಸಂಸಾರವಿಷಯಪ್ರಪಂಚಿನಲ್ಲಿ ಮುಳುಗಿರ್ಪುದು.
ನಿಮ್ಮ ಮನ ಮಾಯಾ ಮಲತ್ರಯಂಗಳಲ್ಲಿ ಸುತ್ತಿರ್ಪುದು.
ನಿಮ್ಮ ಜೀವ ಭವಭವದಲ್ಲಿ ತೊಳಲುತಿರ್ಪುದು.
ನೀವಿಂತು ಮಲಮಾಯಾಸ್ವರೂಪರಾಗಿರ್ದು
ಭಯವಿಲ್ಲದೆ ಅಮಲಲಿಂಗದೊಡನೆ ಸಹಭೋಜನವ ಮಾಡಿದಡೆ
ಅಘೋರ ನರಕದಲ್ಲಿಕ್ಕದೆ ಮಾಣ್ಬನೆ ನಮ್ಮ ಅಖಂಡೇಶ್ವರನು ?

### 2. ಕಾಡಸಿದ್ದೇಶ್ವರ

338
ಭವಿಗಳ ಕಪ್ಪಡ ಕವುದಿ ಕಂಬಳಿ ಕರಿಯಶಾಲಿಯ ತೊಳೆಯದೆ
**ಲಿಂಗವಂತ**ರಾದವರ ಕಪ್ಪಡ ಶಾಲು ಶಕಲಾತಿ ಜರತಾರವ ತೊಳೆದು,
ಮಡಿಯ ತೊಳೆಯದೆ, ಮೈಲಿಗೆಯ ತೊಳೆದು,
ಮಡಿ ಉಡದೆ ಮೈಲಿಗೆಯನುಟ್ಟು ಕಳೆಯದೆ
ಕಾಯಕವ ಮಾಡುತಿರ್ಪರು ನೋಡೆಂದನಯ್ಯಾ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ.

354
**ಲಿಂಗವಂತ**ರಿಗೆ ಮುಹೂರ್ತವ ಪೇಳಿ
ಪಂಚಾಂಗವ ತೋರಬೇಕಲ್ಲದೆ
ಭವಿಗಳಿಗೆ ಮುಹೂರ್ತವ ಪೇಳಿ ಪಂಚಾಂಗವ ತೋರಲಾಗದು.
ಅದೇನು ಕಾರಣವೆಂದಡೆ:
ಕೈಯೊಳಗಿನ ಪಂಚಾಂಗ ಹೃದಯದೊಳಗಣ ಮುಹೂರ್ತ
ತನಗೆ ಸಾಧ್ಯವಾಗದಾಗಿ.
ಪೇಳಿದರೆ ಪೇಳಬಹುದು.
ಹಣವ ಕೊಡವುಳ್ಳವರ ಕಂಡರೆ
ಪಂಚಾಂಗದ ಮುಹೂರ್ತವ ನೋಡೆಂದನಯ್ಯಾ ಗೋವಿಂದಭಟ್ಟ
ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
ನಿರ್ಮಾಯಪ್ರಭುವೆ.

Downloaded from: **www.lingayatreligion.com**

## 3. ಹೇಮಗಲ್ಲ ಹಂಪ (HEMAGALLA HAMPA)

1181
ಗುರುದೀಕ್ಷೆಯಿಲ್ಲದ ಶಿಲೆಯ ಕೊರಳಲ್ಲಿ ಕಟ್ಟಿಕೊಂಡು
ಲಿಂಗವೆಂದು ನುಡಿವ ಚಾಂಡಾಲಿ ನೀ ಕೇಳಾ.
ಗುರುದೀಕ್ಷೆಯಿಲ್ಲದುದು ಶಿಲೆಯಲ್ಲದೆ, ಲಿಂಗವಲ್ಲ.
ಅದು ಎಂತೆಂದರೆ : ಭಿತ್ತಿಯ ಮೇಲಣ ಚಿತ್ರಕ್ಕೆ ಚೈತನ್ಯವುಂಟೇನಯ್ಯಾ ?
ಗುರುದೀಕ್ಷವಿಲ್ಲದ ಲಿಂಗಕ್ಕೆ ಪ್ರಾಣಕಳೆಯುಂಟೇನಯ್ಯಾ ?
ಪ್ರೇತಲಿಂಗವ ಕೊರಳಲ್ಲಿ ಕಟ್ಟಿ ಭೂತಪ್ರಾಣಿಗಳಾಗಿ
**ಲಿಂಗವಂತ**ರೆಂಬ ಪಾಷಂಡಿಗಳ ನೋಡಾ !
ಸಾಕ್ಷಿ :``ಪ್ರೇತಲಿಂಗ ಸಂಸ್ಕಾರಿ ಭೂತಪ್ರಾಣೀ ನ ಜಾನಾತಿ''
ಎಂದುದಾಗಿ,
ಹೆಸರಿನ ಲಿಂಗ, ಹೆಸರಿನ ಗುರುವಾದರೆ
ಅಸಮಾಕ್ಷನ ನೆನಹು ನೆಲೆಗೊಳ್ಳದು ಕಾಣಾ
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ.

1229
ಗುರುಕರುಣದ ಇಷ್ಟಲಿಂಗವ
ಜರಿದನ್ಯದೈವಕ್ಕೆರಗುವ
ಕುರಿಗಳ ಶಿವಭಕ್ತರೆನಬಹುದೆ ?
ಪದ :ಪತಿಯಿರಲು ಪರಪುರುಷಗೆ
ಗತಿಯಾಗಿ ತಿರುಗುವ ಹೊಲತಿಯ
ಮತಿಯಂತೆ ಸಜ್ಜನೆಯೆನಬಹುದೆ ?
ಸಿತಕಂಠಲಿಂಗ ಕರದೊಳಿರೆ ಪರ
ಪ್ರತುಮೆಗೆರಗುವ ಹೊಲೆಯನ
ಕ್ಷಿತಿಯೊಳು ಶಿವಭಕ್ತನೆನಬಹುದೆ ? | 1 |
ಮಾರಿ ಮಸಣಿ ಮೈಲಾರನ ಬಳಿ
ನೀರ ಕುಡಿದು ಅವರೆಂಜಲ
ಮಾರಾರಿಲಿಂಗಕ್ಕೆ[ರೆದುಂ]ಬ ಸಮ
ಗಾರನ ಯಮರಾಜ ಬಾಧಿಸಿ
ರೌರವ ನರಕದೊಳಿಕ್ಕುವನಿದ
ಧರಣಿಯೊಳು ತಿಳಿದು ನೋಡಿರೌ. | 2 |
ತಲೆಯೊಳು ಕಿಚ್ಚು ತಳಿಗೆ ಶಸ್ತ್ರ
ಸಲೆ ಬೇವಿನುಡುಗೆ ಬೆನ್ನಲಿ ಸಿಡಿ
ಹಲವು ಹರಕೆಯನು ಪರದೈವ
ಗಳಿಗೆ ಮಾಡುವ ಕ್ಷೀಣ ಅಜ್ಞಾನಿ
ಹೊಲೆಯ ತಾ ಶಿವಭಕ್ತನೆಂದೆನೆ ಮುಂದೆ
ಕುಲಕೋಟಿ ನರಕದೊಳಿಕ್ಕುವ ನೇಮ. | 3 |
ಗುರುಲಿಂಗಜಂಗಮವೆಂಬವು
ಪರಶಿವನ ಚಿದ್ರೂಪವೆಂಬುದ
ನರಿಯದ ಹಲವು ದೈವಗಳಿ
ಗೆರಗಿ ಸೂಳೆಯಂತೆ ತಿರುಗುವ
ನರನ **ಲಿಂಗವಂತ**ನೆಂದೆನ್ನೆ ಮುಂದೆ

Downloaded from: **www.lingayatreligion.com** 

ಹರ ಶಿಕ್ಷೆಯ ಮಾಡುವ ನನಗೆ. | 4 |
ಶಿವನೆ ದೈವ ಲಿಂಗಾಂಗಿಯೆ ಕುಲಜ
ಭವಿಗಳೆಲ್ಲರು ಅಕುಲಜರೊ
ಬವರ ಧರೆಯೊಳುಸುರಿದೆ
ಹವಿನೇತ್ರ ಪಡುವಿಡಿ ಸಿದ್ಧಮಲ್ಲನೆಂ
ಬುವನ ಸರ್ವಕನೆಂದು ನಂಬಿದ
ಅವ ನಿತ್ಯ ಸತ್ಯ ಸಜ್ಜನನೆಂಬೆ. | 5 |

1265
ಅಂದು ಆದಿಯಲ್ಲಿ ಶಿವ ಬೀಜವಾಗಿ ಬಂದ ಕಾರಣ
ಮರ್ತ್ಯಕೆ ಶಿವಭಕ್ತ [ರುದಯವಾಯಿ]ತು ನೋಡಯ್ಯ.
ಅಂದು ಆದಿಯಲ್ಲಿ ಶಿವಬೀಜವಲ್ಲದಿದ್ದರೆ ಇಂದೆಲ್ಲಿಯದಯ್ಯಾ ?
ಶಿವಭಕ್ತನೆಂಬ ಶ್ರೇಷ್ಠತ್ವನಾಮ ಧರೆಯ ಮನುಜರೆಲ್ಲರಿಗಹುದೇನಯ್ಯ ?
ಶಿವಭಕ್ತಿ ಹಿಡಿದವರೆಲ್ಲ ಬಂಟರೆ ? ಶಕ್ತಿಯ ಸಾಧಿಸಿದವರೆಲ್ಲ ಜಟ್ಟಿಗಳೇ ?
ಸ್ವರಗೈದ ಪಕ್ಷಿಗಳೆಲ್ಲ ಕೋಗಿಲೆಯಾಗಬಲ್ಲುವೆ ?
ಅಂಗಹೀನ ಮಾನವರೆಲ್ಲ ಲಿಂಗವ ಧರಿಸಿ **ಲಿಂಗವಂತ**ರೆಂದು
ನುಡಿದುಕೊಂಡು ನಡೆದರೆ ಶಿವಭಕ್ತಿ ಸಾಧ್ಯವಾಗಬಲ್ಲುದೆ,
ಜಗದ ಜಂಗುಳಿಯ ಮಾನವರಿಗೆ ?
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ.

## 4. ಮೂರುಸಾವಿರ ಮುಕ್ತಿಮುನಿ

2
ಅಯ್ಯಾ, ನಿಜವೀರಶೈವೋದ್ಧಾರಕ ವಿಶೇಷ ಭಕ್ತ ಮಹೇಶ್ವರರು
ಮಹಾಲಿಂಗೋದಯವಾದಿಯಾಗಿನಿರವಯ**ಲಿಂಗವಂತ್ಯ**ವಾದಪರಿಯಂತರವು
ಸತ್ತುಚಿತ್ತಾನಂದರೂಪ ಧರಿಸಿ,
ನಿತ್ಯ ಗುರುಲಿಂಗಜಂಗಮ ಕಲ್ಯಾಣೋತ್ಸಹರಾಗಿ,
ಮಾರ್ಗಾಚಾರಂಗಳಲ್ಲಿ ಸತ್ಕ್ರಿಯಾವಧಾನ,
ಮೀರಿದಾಚಾರಂಗಳಲ್ಲಿ ಸಮ್ಯಜ್ಞಾನಾವಧಾನ,
ಸಂಪೂರ್ಣಾನಂದಭರಿತಾಚಾರಂಗಳಲ್ಲಿ ಸ್ವಾನುಭಾವದ ಸದ್ಧರ್ಮ,
ನಡೆ-ನುಡಿಯೊಳಕೊಂಡು ಬೆಳಗುವ ಪರತತ್ವ
ಶಿವಯೋಗಾನುಸಂಧಾನದ ನಿಜಾವಧಾನದಲ್ಲಿ ಸಂತೃಪ್ತರಾಗಿ,
ಬೆಳಗಿಂಗೆ ಮಹಾಬೆಳಗಾಗಿ, ತನ್ನ ತಾನೇ ಮುಕ್ತಿಸ್ವರೂಪ
ನಿರವಯಪ್ರಭು ಮಹಾಂತ ತಾನೇ ನೋಡಾ
ಸಿದ್ಧಮಲ್ಲಿಕಾರ್ಜುನಲಿಂಗೇಶ್ವರ.

## 5. ಮುಮ್ಮಡಿ ಕಾರ್ಯೇಂದ್ರ -ಮುಮ್ಮಡಿ ಕಾರ್ಯ ಕ್ಷಿತೀಂದ್ರ

1060
ಭಂಡಾರದೊಳಗಿರ್ಪ ಸುವರ್ಣವೇ ಪ್ರಾಣಲಿಂಗವಾಗಿ,
ಆಭರಣರೂಪಮಾದ ಸುವರ್ಣವೇ ಇಷ್ಟಲಿಂಗರೂಪಮಾಗಿ
ಸಕಲಪ್ರಪಂಚದಲ್ಲೆಲ್ಲಾ ತಾನೇ ತುಂಬಿ,
ತನ್ನ ಮಹಿಮೆಯಿಂದಲ್ಲೇ ಸಕಲಪ್ರಪಂಚವನಾಡಿಸುವ

Downloaded from: **www.lingayatreligion.com** 

ಸುವರ್ಣವೇ ಭಾವಲಿಂಗಮಾಗಿ,
ಪ್ರಪಂಚದಲ್ಲೆಲ್ಲಾ ತುಂಬಿರ್ಪಲ್ಲಿ ಮಹಾಲಿಂಗಮಾಗಿ,
ಅದೇ ಆದಾಯಮುಖದಲ್ಲಿ ಒಮ್ಮುಖಕ್ಕೆ ಬಂದು
ತನಗಿದಿರಿಟ್ಟಲ್ಲಿ ಪ್ರಸಾದಲಿಂಗಮಾಗಿ,
ತನ್ನ ಸಂಸಾರಮುಖದಲ್ಲಿ ಸಂಚರಿಸುತ್ತಾ
ತನಗೆ ಸೇವನಾಯೋಗ್ಯಮಾದಲ್ಲಿ ಜಂಗಮಲಿಂಗಮಾಗಿ,
ಮುಂದೆ ತನ್ನ ಸಂರಕ್ಷಣಕಾರಣ ಕೋಶಭರಿತಮಾದಲ್ಲಿ ಶಿವಲಿಂಗಮಾಗಿ,
ಅದೇ ಅಲಂಕಾರಮುಖದಲ್ಲಿ ದೊಡ್ಡಿತಾದಲ್ಲಿ ಗುರುಲಿಂಗಮಾಗಿ,
ಈ ವಿಧದಲ್ಲೆಲ್ಲವು ತದಾಚರಣೆವಿಡಿದಿರ್ಪುದರಿಂ
ಒಂದು ಸುವರ್ಣವೇ ಹಲವು ರೂಪಮಾಗಿ,
ಪ್ರಪಂಚ ಸೃಷ್ಟಿ ಸ್ಥಿತಿ ಸಂಹಾರಕ್ಕೂ ಬ್ರಹ್ಮಾಂಡಕ್ಕೂ
ತಾನೇ ಕಾರಣಮಾಗಿರ್ಪಂತೆ,
ಒಂದು ಲಿಂಗವೇ ಹಲವು ರೂಪವಾಗಿ,
ಭಕ್ತನ ಸೃಷ್ಟಿ ಸ್ಥಿತಿ ಸಂಹಾರಕ್ಕೂ ಬ್ರಹ್ಮಾಂಡಕ್ಕೂ ತಾನೇ ಕಾರಣಮಾಗಿರ್ಪುದು
, ಪ್ರಪಂಚಕ್ಕೆ ತಾನು ಚೇತನಮಾಗಿ ಪ್ರಪಂಚವನಾಡಿಸುತ್ತಾ,
ಆ ಪ್ರಪಂಚಕ್ಕೆ ತಾನೇ ಸುಖಪ್ರದನಾಗಿರ್ಪಂತೆ,
ಲಿಂಗವು ನಿರ್ಗುಣಮಾದರೂ ಗುಣರೂಪಮಾದ ಭಕ್ತನಿಗೆ
ತಾನು ಗುಣಮಾಗಿ, ಭಕ್ತಸುಖಪ್ರದಮಾಗಿರ್ಪುದು.
ಸುವರ್ಣದಿಂ ಸುವರ್ಣವೇ ಜೀವನಮಾಗಿರ್ಪ ಅಧಿಕಬಲಮಂ ಸಂಪಾದಿಸಿ,
ಆ ಬಲದಿಂದ ಶತ್ರುಸಂಹಾರಮಂ ಮಾಡಿ, ರಾಜ್ಯವನ್ನು ಸಂಪಾದಿಸಿ,
ಅದೆಲ್ಲಕ್ಕೂ ತಾನೇ ಕರ್ತೃವಾಗಿ ತನ್ನಧೀನಮಾಗಿರ್ಪ
ಆ ಆರಾಜ್ಯಾದಿಭೋಗವಂ ತಾನನುಭವಿಸುತ್ತಾ ನಿಶ್ಚಿಂತನಾಗಿ,
ಐಶ್ವರ್ಯಕ್ಕೂ ತನಗೂ ಅಭೇದರೂಪಮಾಗಿರ್ಪ ಅರಸಿನಂತೆ,
ಲಿಂಗದಿಂ ಲಿಂಗವೇ ಜೀವಿತಮಾಗಿರ್ಪ ನಿಜಬಲವಂ ಸಂಪಾದಿಸಿ,
ತದ್ಬಲದಿಂ ತಮೋಗುಣ ಶತ್ರುಸಂಹಾರವಂ ಮಾಡಿ,
ಮನೋರಾಜ್ಯಮಂ ಸಾಧಿಸಿ, ಎಲ್ಲಕ್ಕೂ ತಾನೇ ಕರ್ತೃವಾಗಿ,
ತನ್ನಧೀನಮಾಗಿರ್ಪ ಮನೋಮುಖದಿಂದ ಬಂದ ಸುಖವನ್ನು
ಉಪಾಧಿಯಿಲ್ಲದೆ ನಿಶ್ಚಿಂತಮಾಗನುಭವಿಸುತ್ತಾ,
ದೀಪಪ್ರಭೆಯೋಪಾದಿಯಲ್ಲಿ ಲಿಂಗಕ್ಕೂ ತನಗೂ ಭೇದವಿಲ್ಲದೆ,
ಐಶ್ವರ್ಯವಂತನು ತನ್ನ ಮುನ್ನಿನ ಗುಣವಳಿದು
ಐಶ್ವರ್ಯಗುಣವೇ ನಿಜಮುಖ್ಯಗುಣಮಾಗಿ ಸಂಚರಿಸುತ್ತಿರ್ಪಂತೆ,
**ಲಿಂಗವಂತ**ನು ತನ್ನ ಪೂರ್ವದ ಗುಣವಳಿದು
ಲಿಂಗದಗುಣಮೆ ನಿಜಗುಣಮಾಗಿರ್ಪುದೇ ಲಿಂಗೈಕ್ಯವು.
ಇಂತಪ್ಪ ಸಕೀಲವೆನಗೆ ಸಾಧ್ಯಮಪ್ಪಂತೆ ಮಾಡಾ
ಮಹಾಘನ ದೊಡ್ಡದೇಶಿಕಾರ್ಯಗುರುಪ್ರಭುವೆ.

## 6. ದೇಶಿಕೇಂದ್ರ ಸಂಗನಬಸವಯ್ಯ

1173
ಸ್ಥೂಲಾಂಗವೆಂಬ ಷಡ್ವಿಧೇಂದ್ರಿಯಂಗಳಲ್ಲಿ
ಷಡ್ವಿಧಲಿಂಗವಾಗಿರ್ದ ಇಷ್ಟ**ಲಿಂಗಾಯತ**ನಾಗಿ,
ಸೂಕ್ಷ್ಮಾಂಗವೆಂಬ ಷಟ್ಕರಣಂಗಳಲ್ಲಿ
ಷಡ್ವಿಧಲಿಂಗವಾಗಿರ್ದ ಪ್ರಾಣಲಿಂಗಸ್ವಾಯತನಾಗಿ,

Downloaded from: **www.lingayatreligion.com** 

ಕಾರಣಾಂಗವೆಂಬ ಷಡ್ವಿಧವಿಷಯಂಗಳಲ್ಲಿ
ಷಡ್ವಿಧಲಿಂಗವಾಗಿರ್ದ ಭಾವಲಿಂಗಸನ್ನಿಹಿತನಾಗಿ.
ಈ ತ್ರಿವಿಧಲಿಂಗವೊಂದಾಗಿರ್ದ ಮಹಾಘನಾನಂದ ಪ್ರಭಾನಿತ್ವ ಶರಣನು,
ತಾನೆ ನಡೆದುದೆಲ್ಲ ಸತ್ಕ್ರಿಯೆ, ಹಿಡಿದುದೆಲ್ಲ ಸದ್ವ್ರತ,
ನುಡಿದುದೆಲ್ಲ ಪರಮಾನುಭಾವ,
ನೆನೆವುದೆಲ್ಲ ಶಿವಮಂತ್ರ, ಧ್ಯಾನಿಸವುದೆಲ್ಲ ಸ್ವಯಮಾನಂದ ಸುಖವು,
ನೋಡಿ, ಪರಿಣಾಮಿಸುವುದೆಲ್ಲ ನಿಜಲೀಲೆ ಮತ್ತೇನುಯಿಲ್ಲದ
ಎತ್ತೆತ್ತರುವಿನತ್ತತ್ತ,
ಗುರುನಿರಂಜನ ಚನ್ನಬಸವಲಿಂಗ ತಾನೇ ಪರಿಪೂರ್ಣ.

## 7. ಗುರು ಸಿದ್ದ ದೇವ

715
ಅಯ್ಯ, ವರವೀರಶೈವ ಷಟ್ಸ್ಥಲಾಚಾರ್ಯ,
ಘನಲಿಂಗಚಕ್ರವರ್ತಿಯಪ್ಪ ಶ್ರೀ ಗುರುಲಿಂಗದೇವನು
ತನ್ನ ತೊಡೆಯಮೇಲೆ ಮೂರ್ತಿಗೊಂಡಿರುವ
ಕುಮಾರ ಇಷ್ಟಲಿಂಗದೇವಂಗೆ ಪ್ರಾಣಲಿಂಗ-ಭಾವಲಿಂಗಸ್ವರೂಪವಾದ
ಶರಣನ ಚಿದಂಗವೆ ನಿನಗೆ ನಿಜಮೋಕ್ಷಮಂದಿರವೆಂದು
ಅರುಹಿದ ಮೇಲೆ ನಿಮಿಷಾರ್ಧವಗಲಿರದೆ
ನಮ್ಮ ಪ್ರಮಥಗಣಾಚಾರಕ್ಕೆ ಹೊರಗುಮಾಡಿ,
ಭವಕ್ಕೆ ನೂಂಕೇವೆಂದು ಪ್ರತಿಜ್ಞೆಯನಿಟ್ಟು,
ಆ ಶರಣನ ಕರಸ್ಥಲಕ್ಕೆ ಪ್ರಾಣಕಳಾಚೈತನ್ಯಮೂರ್ತಿಲಿಂಗದೇವನ
ಮುಹೂರ್ತವ ಮಾಡಿಸಿ,
ಆ ಲಿಂಗದೇವಂಗೆ ಪ್ರಮಥಗಣಾರಾಧ್ಯ
ಭಕ್ತಮಹೇಶ್ವರರರೆಲ್ಲ ಅಭಯಹಸ್ತವಿತ್ತು,
ಆಮೇಲೆ ಚಿದಂಗಸ್ವರೂಪವಾದ ಶರಣಂಗೆ
ಈ ಲಿಂಗದೇವನ ನಿಮಿಷಾರ್ಧವಗಲಿರದೆ
ನಿನಗೂ ಅದೇ ಪ್ರತಿಜ್ಞೆ ಬಂದೀತೆಂದು ಆಜ್ಞಾಪನವ ಮಾಡಿ,
ಹೃದಯಕಮಲಮಧ್ಯದಲ್ಲಾಡುವ
ಸಹಸ್ರಹೆಡೆಯ ಕುಂಡಲೀಸರ್ಪಂಗೆ ಮುಸುಕಿರುವ
ಅಜ್ಞಾನ ಮಾಯಾಮರವೆಯನ್ನು
ಅನಾಹತದ್ವಾರದಿಂದ ಅನಾದಿಮೂಲಮಂತ್ರವನ್ನು ಉಸುರಿ
ಕುಂಡಲೀಸರ್ಪನ ಹೆಡೆಯ ಎತ್ತಿಸಿ,
ಚಿದಗ್ನಿಯ ಪುಟವ ಮಾಡುವಂಥಾದೆ **ಲಿಂಗಾಯತ**ದೀಕ್ಷೆ.
ಇಂತುಟೆಂದು ಶ್ರೀ ಗುರುನಿಷ್ಕಳಂಕ ಚನ್ನಬಸವರಾಜೇಂದ್ರನು
ನಿರ್ಲಜ್ಜಶಾಂತಲಿಂಗದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡ
ಸಂಗನಬಸವೇಶ್ವರ.

ಆಕರ ಗ್ರಂಥ:

1. ೧೫ ಸಮಗ್ರ ವಚನ ಸಂಪುಟಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

Downloaded from: **www.lingayatreligion.com** 